# ದೇವರ ರಾಜ್ಯ
# ಶಿಷ್ಯತ್ವದ ಕಾರ್ಯಕ್ರಮ
# ಕೈಪಿಡಿ

**ಆವೃತ್ತಿ 1**



ಕರ್ತನ ಮಹಿಮೆಯ ಬಗ್ಗೆ ಹೆಚ್ಚಿನ ತಿಳಿವಳಿಕೆ ನೀಡಲು, ಆತನ ಅಪಾರ ಪ್ರೀತಿಯನ್ನು ತಿಳಿದುಕೊಳ್ಳಲು ಮತ್ತು ಅನುಭವಿಸಲು, ಆತನ ಪರಿವರ್ತನೆಯ ಶಕ್ತಿಯಲ್ಲಿ ಬದುಕಲು ಮತ್ತು ಆತನ ಪರಿಪೂರ್ಣತೆಯಿಂದ ತುಂಬಲ್ಪಡಲು ಅವಕಾಶವನ್ನು ಒದಗಿಸುವ ಅನ್ವೇಷಣೆಯ ಪ್ರಯಾಣವಾಗಿದೆ. ಇದರ ಪರಿಣಾಮವಾಗಿ, ದೇವರನ್ನು ಮತ್ತು ಆತನ ರಾಜ್ಯವನ್ನು ತಿಳಿದುಕೊಂಡು ಅನುಭವಿಸಲು ಇತರರನ್ನು ಸಮರ್ಥರನ್ನಾಗಿ ಮಾಡಲು ನೀವು ಸಮರ್ಥರಾಗುವಿರಿ.

ಕಾಪಿರೈಟ್ ಮತ್ತು ರಾಯಲ್ಟಿ ಉಚಿತ 2016. ಹೆಚ್ಚಿನ ಉಚಿತ ಸಂಪನ್ಮೂಲಗಳಿಗಾಗಿ ಕೆಳಕಂಡ ವೆಬ್‌ಸೈಟನ್ನು ನೋಡಿ: www.jesuslovestheworld.info ಅಥವಾ info@jesuslovestheworld.infoಗೆ ಇಮೇಲ್ ಕಳುಹಿಸಿ.

ನಾವು ಯೇಸುವನ್ನು ತಿಳಿದುಕೊಂಡು ಆತನಲ್ಲಿ ಜೀವಿಸುವ ಅನುಭವವನ್ನು ಹೊಂದಿಕೊಂಡಾಗ ಆತನಲ್ಲಿ ಪ್ರಕಟಗೊಂಡ ದೇವರ ಪ್ರೀತಿಯು ನಮ್ಮಲ್ಲಿ ಪರಿಪೂರ್ಣಗೊಳ್ಳುತ್ತದೆ. ಜೀಸಸ್ ಲವ್ಸ್ : ದಿ ವರ್ಲ್ಡ್ ಎಂಬ ಸಂಸ್ಥೆಯು ದೇವರ ರಾಜ್ಯದ ಬಗ್ಗೆ ಬೋಧಿಸಲು, ಉಪದೇಶಿಸಲು ಮತ್ತು ತರಬೇತಿ ನೀಡಲು ಸ್ಥಾಪಿಸಲ್ಪಟ್ಟಿದೆ. ದೇವರ ರಾಜ್ಯವನ್ನು ಬಯಸುವವರೆಲ್ಲರೂ ಆತನ ಸತ್ಯದಲ್ಲಿ ಸ್ಥಿರವಾಗಿದ್ದು, ಆತನ ಪ್ರೀತಿಯಲ್ಲಿ ಬೇರೂರಿದ್ದು ಆತನ ಪರಿಪೂರ್ಣತೆಯಿಂದ ತುಂಬಲ್ಪಟ್ಟವರಾಗಿರಬೇಕು ಎಂಬುದೇ ಈ ಸಂಸ್ಥೆಯ ಉದ್ದೇಶವಾಗಿದೆ.

# ವಿಷಯಾನುಕ್ರಮಣಿಕೆ


ಪೀಠಿಕೆ ........ 2

1: ಕಾಣದ್ದನ್ನು ಕಾಣುವುದು ........ 3

2: ಆತನನ್ನು ತಿಳಿದುಕೊಳ್ಳುವುದಕ್ಕಾಗಿ ........ 4

3: ತನ್ನನ್ನು ವೈಯಕ್ತಿಕ ಮಾಡಿಕೊಳ್ಳುವುದು ........ 7

4: ಇದೇ ಸಮಯ ........ 10

5: ದೇವರು ಎಷ್ಟೋ ಪ್ರೀತಿಸುವುದರಿಂದ ........ 13

6: ತಂದೆಯ ಪ್ರೀತಿ ........ 15

7: ಮಗನ ಪ್ರೀತಿ ........ 18

8: ಪವಿತ್ರಾತ್ಮನ ಪ್ರೀತಿ ........ 20

9: ನನ್ನ ಸ್ವಸ್ಥಿತಿಯಲ್ಲೇ ಸ್ವೀಕಾರ ........ 22

10: ಆತ್ಮನಿಂದ ಹುಟ್ಟಿದ - ಸ್ವಭಾವ ........ 24

11: ಪ್ರಿಯನ ಮೂಲಕ ಸ್ವೀಕಾರ ........ 28

12: ಸಂಬಂಧಗಳು ........ 31

13: ಸಂಬಂಧಗಳು - ಅವರವರ ಸ್ವಸ್ಥಿತಿಯಲ್ಲೇ ಸ್ವೀಕಾರ ........ 34

14: ಸಂಬಂಧಗಳು - ಸಮಾನತೆ ........ 37

15: ಸಂಬಂಧಗಳು - ಶಿಷ್ಯತ್ವ ........ 40

16: ಸಂಬಂಧಗಳು - ದೇವರ ರಾಜ್ಯ ........ 42

ಪ್ರಾರ್ಥನೆ ........ 44

10 ಕಾಳುಗಳ ವರ್ಕ್‌ಶೀಟ್ ........ 45

# ಪೀಠಿಕೆ

*ದೇವರು ಪ್ರತಿಯೊಂದನ್ನೂ ತನ್ನೊಂದಿಗೆ ಒಂದಾಗಿಮಾಡಿಕೊಳ್ಳಲು, ಪುನರ್‌ಸ್ಥಾಪಿಸಲು ಮತ್ತು ನವೀಕರಿಸಲು ಪ್ರೀತಿಯಿಂದ ಎಲ್ಲವನ್ನೂ ಮಾಡುತ್ತಾನೆ.*

*ಆತನು ಸಂಬಂಧಿಕ, ಆತನು ಆತ್ಮೀಯ ಮತ್ತು ಆತನು ವೈಯಕ್ತಿಕ.*

ಈ ಪಾಠಗಳಿಂದ ಪ್ರತಿಯೊಬ್ಬರೂ ಹೆಚ್ಚು ಉಪಯೋಗಪಡೆದುಕೊಳ್ಳಲೆಂದು ನಾನು ಕೇಳಿಕೊಳ್ಳುವುದೇನಂದರೆ:

- ದೇವರಿಗೆ ಕಿವಿಗೊಡಲು ಸಿದ್ಧರಾಗಿರಿ
- ಪ್ರಶ್ನೆಗಳನ್ನು ಕೇಳಿರಿ
- ನಿಮ್ಮ ಆಲೋಚನೆಗಳನ್ನು ಹಂಚಿಕೊಳ್ಳಿರಿ ಮತ್ತು ಚರ್ಚಿಸಿರಿ
- ನಿಮಗೆ ಕೊಟ್ಟಿರುವ ಹಾಳೆಗಳ ಮೇಲೆ ನಿಮ್ಮ ಉತ್ತರಗಳನ್ನು ಬರೆಯಿರಿ
- ಮತ್ತು ಎಲ್ಲಕ್ಕಿಂತ ಹೆಚ್ಚಾಗಿ, ಪ್ರಯಾಣವನ್ನು ಆನಂದಿಸಿರಿ.

## ದೇವರ ಯೋಜನೆ

ಭೂಪರಲೋಕಗಳಲ್ಲಿರುವ ಸಮಸ್ತವನ್ನು ಕ್ರಿಸ್ತನಲ್ಲಿ ಐಕ್ಯಗೊಳಿಸಿ ಆತನ ಆದಿಪತ್ಯಕ್ಕೆ ಮತ್ತು ಆಳ್ವಿಕೆಗೆ ಒಳಪಡಿಸಬೇಕೆಂಬುದೇ ದೇವರು ತನ್ನ ಸಂಕಲ್ಪಕ್ಕನುಸಾರವಾಗಿ ಜಗತ್ತಿನ ಸೃಷ್ಟಿಗೆ ಮೊದಲೇ ಯೋಜಿಸಿದ ರಕ್ಷಣೆಯ ಉದ್ದೇಶವಾಗಿದೆ. ದೇವರು ಕ್ರಿಸ್ತಯೇಸುವಿನ ಮೂಲಕ ಇಡೀ ಜಗತ್ತಿನಲ್ಲಿ ಸಾಮರಸ್ಯವನ್ನು ಮತ್ತು ಸಮಾಧಾನವನ್ನು ಪುನರ್‌ಸ್ಥಾಪಿಸುತ್ತಾನೆ.

**ಎಫೆಸದವರಿಗೆ 1:9-10** *ಇದು ದೇವರ ಚಿತ್ತವಾಗಿತ್ತು. ಕ್ರಿಸ್ತನ ಮೂಲಕ ಇದನ್ನು ನೆರವೇರಿಸಲು ಆತನು ಯೋಜನೆ ಮಾಡಿದನು. ಕಾಲವು ಪರಿಪೂರ್ಣವಾದಾಗ ಭೂಪರಲೋಕಗಳಲ್ಲಿರುವ ಸಮಸ್ತವನ್ನೂ ಕ್ರಿಸ್ತನಲ್ಲಿ ಒಂದುಗೂಡಿಸಿ ಆತನಿಗೆ ಅಧೀನಪಡಿಸಬೇಕೆಂಬುದೇ ದೇವರ ಯೋಜನೆಯಾಗಿತ್ತು.* (ERV)

## ಶಿಷ್ಯರನ್ನಾಗಿ ಮಾಡಲು

ಯೇಸು ತನ್ನ (ಹಿಂಬಾಲಕರಿಗೆ) ಶಿಷ್ಯರಿಗೆ ಅಧಿಕಾರವನ್ನು ಕೊಟ್ಟನು; ಅವರು ತಮ್ಮ ಈ ಜೀವಿತದ ಪ್ರಯಾಣದಲ್ಲಿ ತನ್ನ ಪವಿತ್ರಾತ್ಮನ ಮೂಲಕವಾಗಿ ಹಿಂಬಾಲಕರನ್ನು (ಶಿಷ್ಯರನ್ನು) ಮಾಡಲೆಂಬುದೇ ಅದಕ್ಕೆ ಕಾರಣ.

**ಮತ್ತಾಯ 28:18-20** *ಆದ್ದರಿಂದ ಯೇಸು ಅವರ ಬಳಿಗೆ ಬಂದು, "ಪರಲೋಕದ ಮತ್ತು ಈ ಲೋಕದ ಅಧಿಕಾರವೆಲ್ಲವನ್ನು ನನಗೆ ಕೊಡಲಾಗಿದೆ. ಆದ್ದರಿಂದ ನೀವು ಹೋಗಿ, ಲೋಕದಲ್ಲಿರುವ ಜನರೆಲ್ಲರನ್ನು ನನ್ನ ಶಿಷ್ಯರನ್ನಾಗಿ ಮಾಡಿರಿ. ತಂದೆಯ, ಮಗನ ಮತ್ತು ಪವಿತ್ರಾತ್ಮನ ಹೆಸರಿನಲ್ಲಿ ಅವರಿಗೆಲ್ಲ ದೀಕ್ಷಾಸ್ನಾನ ಮಾಡಿಸಿ. ನಾನು ನಿಮಗೆ ಆಜ್ಞಾಪಿಸಿದವುಗಳಿಗೆಲ್ಲಾ ವಿಧೇಯರಾಗುವಂತೆ ಜನರಿಗೆ ಉಪದೇಶಿಸಿ. ಲೋಕಾಂತ್ಯದವರೆಗೂ ಸದಾಕಾಲ ನಾನು ನಿಮ್ಮೊಂದಿಗಿರುತ್ತೇನೆ" ಎಂದು ಹೇಳಿದನು.* (ERV)

ದೇವರನ್ನೂ ಆತನಿಗೆ ನಿಮ್ಮ ಮೇಲಿರುವ ಪ್ರೀತಿಯನ್ನೂ ಆತನು ಯಾರೆಂದೂ ಆತನು ಮಾಡಿದ್ದನ್ನೂ ಮತ್ತು ಆತನು ಮಾಡುವುದನ್ನೂ ತಿಳಿದುಕೊಳ್ಳುವುದರ ಮೂಲಕ ಶಿಷ್ಯತ್ವವು ಆರಂಭವಾಗುತ್ತದೆ. ಆತನ ವಾಕ್ಯದಲ್ಲಿಯೂ ಆತನ ಸನ್ನಿಧಿಯಲ್ಲಿಯೂ ಆರಾಧನೆಯಲ್ಲಿಯೂ ಪ್ರಾರ್ಥನೆಯಲ್ಲಿಯೂ ಮತ್ತು ಇತರರ ಅನ್ಯೋನ್ಯತೆಯಲ್ಲೂ ಸಮಯವನ್ನು ವಿನಿಯೋಗಿಸಿದರೆ ಆತನನ್ನು ತಿಳಿದುಕೊಳ್ಳಲು ಸಹಾಯಕವಾಗುತ್ತದೆ.

ಶಿಷ್ಯತ್ವ ಕಾರ್ಯಕ್ರಮದ ನಮ್ಮ ಈ ಪ್ರಯಾಣದಲ್ಲಿ, ನೀವು ಪವಿತ್ರಾತ್ಮನ ಮೂಲಕ ಕರ್ತನ ಮಹಿಮೆಯ ಬಗ್ಗೆ ಮತ್ತು ಆತನ ಮಹಾ ಪ್ರೀತಿಯ ಬಗ್ಗೆ ಹೆಚ್ಚು ಜ್ಞಾನವುಳ್ಳವರಾಗಿ ದೇವರ ಪರಿಪೂರ್ಣತೆಯಿಂದ ತುಂಬಿತುಳುಕುವುದರ ಮೂಲಕ ಇಡೀ ಪ್ರಪಂಚವು ಆತನನ್ನು ತಿಳಿದುಕೊಳ್ಳಲೆಂದು ನಾನು ಯೇಸುವಿನ ಹೆಸರಿನಲ್ಲಿ ಪ್ರಾರ್ಥಿಸುತ್ತೇನೆ. ಆಮೆನ್

# ಪಾಠ 1: ಕಾಣದ್ದನ್ನು ಕಾಣುವುದು

*ಸೃಷ್ಟಿಕರ್ತನಾದ ದೇವರು ಸಂಬಂಧಿಕ, ಆತನ ವಾಕ್ಯ ವೈಯಕ್ತಿಕ.*

*ಆತನ ಪ್ರಸನ್ನತೆ ಆತ್ಮೀಯ. ಆತನ ಸೃಷ್ಟಿಯು ಸಾಕ್ಷ್ಯ.*

## ಆರಂಭ ಪ್ರಾರ್ಥನೆ

ಪ್ರಾರ್ಥನೆಯ ಮೂಲಕ ಪಾಠವನ್ನು ಆರಂಭಿಸಲು ಒಬ್ಬರಿಗೆ ಹೇಳಿರಿ.

## ಆರಾಧನೆ

ದೇವರು ತನ್ನನ್ನು ನಮಗೆ ಪ್ರಕಟಿಸಿಕೊಳ್ಳಲಿಚ್ಛಿಸುತ್ತಾನೆ ಎಂಬ ಎರಡು ಅಥವಾ ಮೂರು ಆರಾಧನಾ ಹಾಡುಗಳನ್ನು ನೀವೆಲ್ಲರೂ ಒಟ್ಟಿಗೆ ಆರಿಸಿಕೊಂಡು ಹಾಡಿರಿ.

## ಗುಂಪಾಗಿ ಚರ್ಚಿಸಿ

ದೇವರು ತನ್ನನ್ನು ನಮಗೆ ಪ್ರಕಟಿಸಿಕೊಳ್ಳುವ ನಾನಾಬಗೆಯ ಕುರಿತು ಚರ್ಚಿಸಿ. ನಿಮಗೆ ಕೊಟ್ಟಿರುವ ಹಾಳೆಗಳ ಮೇಲೆ ಉತ್ತರಗಳನ್ನು ಬರೆಯಿರಿ.

ಓದಿರಿ **ಕೀರ್ತನೆ 19:1-6; ರೋಮ್‌ನಗರದವರಿಗೆ 1:20; ಹೋಶೇಯ 12:10** ಮತ್ತು **ಆದಿಕಾಂಡ 31:11**

ದೇವರು ತನ್ನನ್ನು ನಮಗೆ ಸೃಷ್ಟಿಯ ಮೂಲಕ ಪ್ರಕಟಿಸಿಕೊಳ್ಳುವನು. [ಇದು ಸೃಷ್ಟಿಯನ್ನು, ದೇವರ ಪ್ರವಾದಿಗಳನ್ನು ಮತ್ತು ದೇವದೂತರನ್ನು ಒಳಗೊಂಡಿದೆ]

ಓದಿರಿ **ಧರ್ಮೋಪದೇಶಕಾಂಡ 4:35-39; ಆದಿಕಾಂಡ 15:1; 2 ರಾಜರುಗಳು 5:1; 2 ರಾಜರುಗಳು 5:14-15** ಮತ್ತು **ಯೋಹಾನ 9:1-7**

ದೇವರು ತನ್ನನ್ನು ನಮಗೆ ಅದ್ಭುತಕಾರ್ಯಗಳ ಮೂಲಕ ಪ್ರಕಟಿಸಿಕೊಳ್ಳುವನು. [ಇದು ಸೂಚಕ ಕಾರ್ಯಗಳನ್ನು ಮತ್ತು ಅದ್ಭುತಕಾರ್ಯಗಳನ್ನು, ದರ್ಶನಗಳನ್ನು ಮತ್ತು ಸ್ವಸ್ಥತೆಗಳನ್ನು ಒಳಗೊಂಡಿದೆ]

ಓದಿರಿ **ಲೂಕ 24:27; ಯೋಹಾನ 20:31** ಮತ್ತು **ಕೀರ್ತನೆ 33:6-9**

ದೇವರು ತನ್ನನ್ನು ನಮಗೆ ತನ್ನ ವಾಕ್ಯದ ಮೂಲಕ ಪ್ರಕಟಿಸಿಕೊಳ್ಳುವನು. [ಇದು ಬರೆಯಲ್ಪಟ್ಟಿರುವ ಮತ್ತು ಬಾಯಿಂದ ಹೇಳಲ್ಪಟ್ಟಿರುವ ವಾಕ್ಯಗಳನ್ನು ಒಳಗೊಂಡಿದೆ]

ಓದಿರಿ **ಯೋಹಾನ 1:14-18; 14:6-7** ಮತ್ತು **ಇಬ್ರಿಯರಿಗೆ 1:1-4**

ದೇವರು ತನ್ನನ್ನು ನಮಗೆ ಯೇಸುವಿನ ಮೂಲಕ ಪ್ರಕಟಿಸಿಕೊಳ್ಳುವನು.

ಓದಿರಿ **ಯೋಹಾನ 16:13-15** ಮತ್ತು **1 ಯೋಹಾನ 5:6**

ದೇವರು ತನ್ನನ್ನು ನಮಗೆ ಪವಿತ್ರಾತ್ಮನ ಮೂಲಕ ಪ್ರಕಟಿಸಿಕೊಳ್ಳುವನು.

## ಸಾಕ್ಷಿ ಹೇಳಿರಿ

ದೇವರು ತನ್ನನ್ನು ಅವರಿಗೆ ಹೇಗೆ ಪ್ರಕಟಿಸಿಕೊಂಡಿದ್ದಾನೆ ಎಂಬುದನ್ನು ಎರಡು ಅಥವಾ ಮೂರು ವಾಕ್ಯಗಳಲ್ಲಿ ಹಂಚಿಕೊಳ್ಳಲು ಪ್ರತಿಯೊಬ್ಬರಿಗೂ ಹೇಳಿರಿ.

## ಅಂತಿಮ ಕೃತಜ್ಞತಾ ಪ್ರಾರ್ಥನೆ

ದೇವರು ತನ್ನನ್ನು ನಮಗೆ ಪ್ರಕಟಿಸಿಕೊಳ್ಳಲು ಇಚ್ಛಿಸುವುದರಿಂದ ಆತನಿಗೆ ಕೃತಜ್ಞತೆ ಸಲ್ಲಿಸಲು ಒಬ್ಬರಿಗೆ ಹೇಳಿರಿ.

# ಪಾಠ 2: ಆತನನ್ನು ತಿಳಿದುಕೊಳ್ಳುವುದಕ್ಕಾಗಿ

*ಸೃಷ್ಟಿಕರ್ತನಾದ ದೇವರು ಕಾಲ ಮತ್ತು ಸ್ಥಳಗಳ ಚೌಕಟ್ಟಗಳನ್ನು ಮೀರಿದವನಾಗಿದ್ದಾನೆ, ಹೀಗಿದ್ದರೂ ನಮ್ಮ ಕಾಲ ಮತ್ತು ಸ್ಥಳಗಳಲ್ಲಿ ಆತನು ನಮ್ಮೊಂದಿಗೆ ವೈಯಕ್ತಿಕವಾಗಿರುತ್ತಾನೆ.*

## ಆರಂಭ ಪ್ರಾರ್ಥನೆ

ಪ್ರಾರ್ಥನೆಯ ಮೂಲಕ ಪಾಠವನ್ನು ಆರಂಭಿಸಲು ಒಬ್ಬರಿಗೆ ಹೇಳಿರಿ.

## ಆರಾಧನೆ

ದೇವರ ಮಹತ್ವವನ್ನು ಪ್ರಕಟಿಸುವ ಎರಡು ಅಥವಾ ಮೂರು ಆರಾಧನಾ ಹಾಡುಗಳನ್ನು ನೀವೆಲ್ಲರೂ ಒಟ್ಟಿಗೆ ಆರಿಸಿಕೊಂಡು ಹಾಡಿರಿ.

## ಪೀಠಿಕೆ

ದೇವರು ತನ್ನನ್ನು ನಮಗೆ ಪ್ರಕಟಿಸಿಕೊಳ್ಳುವ ನಾನಾಬಗೆಗಳನ್ನು ನಾವು ಮೊದಲನೇ ಪಾಠದಲ್ಲಿ ಕಲಿತುಕೊಂಡೆವು. ದೇವರು ನಮಗೆ ಬರೆದಿರುವ ವೈಯಕ್ತಿಕ ಪ್ರೀತಿ ಪತ್ರವಾದ ಬೈಬಲನ್ನು ನಾವು ಓದಿ ಧ್ಯಾನಮಾಡುವಾಗ ನಾವು ಆತನ ಬಗ್ಗೆ ಹೆಚ್ಚು ಕಲಿತುಕೊಳ್ಳುತ್ತೇವೆ. *'ಆದಿಯಲ್ಲಿ ದೇವರು...ಸೃಷ್ಟಿಸಿದನು'* ಎಂಬ ಪದಗಳು ನಮಗೆ ಪ್ರಕಟಿಸುವುದೇನಂದರೆ, ಆದಿಯು ಯಾವುದೇ ಆಗಿರಲಿ, ಯಾವಾಗಲೇ ಆಗಿರಲಿ, ದೇವರು ಅಸ್ಥಿತ್ವದಲ್ಲಿದ್ದನು ಮತ್ತು ಆತನೇ ಸೃಷ್ಟಿಸಿದನು. ದೇವರನ್ನು ಹೆಚ್ಚಾಗಿ ತಿಳಿದುಕೊಳ್ಳಲು ಬೈಬಲಿನಲ್ಲಿ ಬರೆದಿರುವ ದೇವರ ಮೂರು ದರ್ಶನಗಳನ್ನು ಅಧ್ಯಯನ ಮಾಡೋಣ.

## ಬೈಬಲ್ ಅಧ್ಯಯನ - ದೇವ ದರ್ಶನಗಳು - ಯೆಹೆಜ್ಕೇಲ

ದೇವರು ತನ್ನನ್ನು ಯಾರಿಗೆ ಪ್ರಕಟಿಸಿಕೊಳ್ಳಲಿಚ್ಛಿಸುತ್ತಾನೋ ಅವರ ಅಗತ್ಯಕ್ಕೆ ತಕ್ಕಂತೆ ತನ್ನನ್ನು ಪ್ರಕಟಿಸಿಕೊಳ್ಳುತ್ತಾನೆ. ದೇವರು ಯೆಹೆಜ್ಕೇಲನಿಗೆ ಕೊಟ್ಟ ದರ್ಶನವನ್ನು ಅಧ್ಯಯನ ಮಾಡೋಣ.

## ದರ್ಶನದ ಹಿನ್ನೆಲೆ

ಯೆಹೆಜ್ಕೇಲನು ದೇವರ ಪ್ರವಾದಿಯಾಗಿದ್ದನು ಮತ್ತು ಯಾಜಕನಾಗಿದ್ದನು. ವಿದೇಶದಲ್ಲಿ ಸೆರೆಯಾಳುಗಳಾಗಿದ್ದ ಪುರಾತನ ಇಸ್ರೇಲಿನ ಹನ್ನೆರಡು ಕುಲಗಳಿಗೆ ಸೇರಿದ ಎರಡು ಕುಲಗಳೊಂದಿಗೆ ಯೆಹೆಜ್ಕೇಲನಿದ್ದನು (**ಯೆಹೆಜ್ಕೇಲ 1:1**). ಅವರು ತಮ್ಮ ಸ್ವಂತ ಆರಾಧನಾ ಸ್ಥಳವಾದ ಯೆರೂಸಲೇಮಿನಿಂದ ಬಹು ದೂರದಲ್ಲಿದ್ದರು. ದೇವರ ವಿರುದ್ಧವಾಗಿ ದಂಗೆಯೆದ್ದಿದ್ದ ಅವರು ವಿದೇಶಿ ದೇವರುಗಳನ್ನು ಪೂಜಿಸುತ್ತಿದ್ದರು. ಆದ್ದರಿಂದ ದೇವರು ಪ್ರವಾದಿಯಾಗಿದ್ದ ಮತ್ತು ಯಾಜಕನಾಗಿದ್ದ ಯೆಹೆಜ್ಕೇಲನಿಗೆ ವಾಕ್ಯಚಿತ್ರವನ್ನು ದರ್ಶನದ ಮೂಲಕ ಕಳುಹಿಸುತ್ತಾನೆ (**ಯೆಹೆಜ್ಕೇಲ 1:3**).

ಓದಿರಿ **ಯೆಹೆಜ್ಕೇಲ 1:15-21**

ಬೈಬಲಿನ ಈ ಭಾಗವನ್ನು ಧ್ಯಾನ ಮಾಡಿರಿ ಮತ್ತು ಒಂದು ಸಲಕ್ಕಿಂತ ಹೆಚ್ಚು ಓದಿರಿ.

## ಗುಂಪಾಗಿ ಚರ್ಚಿಸಿ

ಬೈಬಲಿನ ಈ ಭಾಗದಲ್ಲಿ ಯಾವ ಐದು ಅಂಶಗಳಿವೆಯೆಂದು ಚರ್ಚಿಸಿ. ನಿಮಗೆ ಕೊಟ್ಟಿರುವ ಹಾಳೆಗಳ ಮೇಲೆ ಉತ್ತರಗಳನ್ನು ಬರೆಯಿರಿ.

**ವಚನ 15** ಜೀವಿಗಳು

**ವಚನ 16-17** ಚಕ್ರಗಳು – ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಚಲಿಸುತ್ತಿದ್ದವು.

**ವಚನ 18** ಕಣ್ಣುಗಳು

**ವಚನ 19** ಭೂಮಿ – ಚಕ್ರಗಳು ಭೂಮಿಯ ಮೇಲಿಂದ ಎತ್ತಲ್ಪಟ್ಟವು.

**ವಚನ 21** ಆತ್ಮ

ಈ ವಾಕ್ಯಭಾಗವನ್ನು ನಾವು ತಪ್ಪಾಗಿ ಅರ್ಥೈಸಿಕೊಳ್ಳದಿರಲು ಸಹಾಯಕವಾದ ಈ ಕೆಳಕಂಡ ಪ್ರಶ್ನೆಗಳನ್ನು ವಾಕ್ಯದ ಕುರಿತಾಗಿ ಕೇಳಿರಿ:

ಈ ವಾಕ್ಯಭಾಗದಲ್ಲಿರುವ ವ್ಯಕ್ತಿಗಳು **ಯಾರು**? ಓದಿರಿ **ಯೆಹೆಜ್ಕೇಲ 1:1-3**

ಯೆಹೆಜ್ಕೇಲ, ದೇವರು, ಸೆರೆಯಾಳುಗಳು (ವಿದೇಶದಲ್ಲಿ ಸೆರೆಯಾಳುಗಳಾಗಿದ್ದ ಪುರಾತನ ಇಸ್ರೇಲಿನ ಹನ್ನೆರಡು ಕುಲಗಳಿಗೆ ಸೇರಿದ ಎರಡು ಕುಲಗಳ ಜನರು), ಕಲ್ದೀಯರು.

ಮಾತಾಡುತ್ತಿರುವವರು **ಯಾರು**?

ಯೆಹೆಜ್ಕೇಲನಾದ 'ನಾನು'.

ಯೆಹೆಜ್ಕೇಲನು **ಯಾರೊಂದಿಗೆ** ಮಾತಾಡುತ್ತಿದ್ದಾನೆ? ಓದಿರಿ **ಯೆಹೆಜ್ಕೇಲ 1:28-2:5**

ಪುರಾತನ ಇಸ್ರೇಲಿನ ಎರಡು ಕುಲಗಳ ಜನರು.

ಈ ವ್ಯಕ್ತಿಗಳು **ಹೇಗೆ** ಒಬ್ಬರಿಗೊಬ್ಬರು ಮಾತಾಡುತ್ತಿದ್ದಾರೆ?

ದೇವರು ದರ್ಶನದ ಮೂಲಕ ಯೆಹೆಜ್ಕೇಲನಿಗೆ ತನ್ನನ್ನು ಪ್ರಕಟಿಸಿಕೊಳ್ಳುತ್ತಾನೆ. ಯೆಹೆಜ್ಕೇಲನು ವೀಕ್ಷಿಸುತ್ತಾನೆ ಮತ್ತು ಕೇಳಿಸಿಕೊಳ್ಳುತ್ತಾನೆ.

ಈ ಘಟನೆ **ಎಲ್ಲಿ** ಸಂಭವಿಸಿತು?

ಕಲ್ದೀಯರ ವಿದೇಶದಲ್ಲಿರುವ ನದಿಯ ತೀರದಲ್ಲಿ.

ಈ ಘಟನೆ **ಯಾವಾಗ** ಸಂಭವಿಸಿತು - ಯೇಸು ಮಾಂಸರಕ್ತಧಾರಿಯಾಗಿ, ಶಿಲುಬೆ ಮೇಲೆ ಸತ್ತು, ಸಮಾಧಿಯಿಂದ ಎದ್ದುಬಂದು, ಮೇಲೋಕಕ್ಕೆ ಏರಿಹೋದದ್ದಕ್ಕಿಂತ ಮೊದಲೋ ಅಥವಾ ಏರಿಹೋದ ಮೇಲೋ?

ಇಸ್ರೇಲರು ಕಲ್ದೀಯರ ನಾಡಿನಲ್ಲಿ ಸೆರೆಯಾಳುಗಳಾಗಿದ್ದಾಗ. ಯೇಸು ಮಾಂಸರಕ್ತಧಾರಿಯಾಗಿ ಬರುವುದಕ್ಕಿಂತ ಮೊದಲು.

ಚಕ್ರಗಳು **ಏನನ್ನು** ಸೂಚಿಸುತ್ತವೆ?

ಪೂರ್ವ ದೇಶಗಳ ಸಂಸ್ಕೃತಿಯಲ್ಲಿ ಚಕ್ರವು ಆರಂಭ ಮತ್ತು ಅಂತ್ಯಗಳಲ್ಲಿದ ಚಲಿಸುತ್ತಿರುವ ಜೀವಿತವನ್ನು ಅಥವಾ ವೃತ್ತಾಕಾರದಲ್ಲಿ ಸುತ್ತುತ್ತಿರುವ ಜೀವಿತವನ್ನು ಸೂಚಿಸುತ್ತದೆ.

ಚಲಿಸುತ್ತಿರುವ ಚಕ್ರಗಳು ದೇವರ ಬಗ್ಗೆ **ಏನನ್ನು** ಸೂಚಿಸುತ್ತವೆ?

ದೇವರು ಎಲ್ಲೆಲ್ಲೂ ಇದ್ದಾನೆ. ಆತನು ಯೆರೂಸಲೇಮಿನ ದೇವಾಲಯಕ್ಕಾಗಲೀ ಒಂದು ಪ್ರಾಂತ್ಯಕ್ಕಾಗಲೀ ದೇಶಕ್ಕಾಗಲೀ ಸೀಮಿತನಾಗಿಲ್ಲ. ಆತನಿಗೆ ಆದಿಯೂ ಇಲ್ಲ, ಅಂತ್ಯವೂ ಇಲ್ಲ. ದೇವರು ಸದಾಕಾಲ ಇರುವಾತನಾಗಿದ್ದಾನೆ...ಎಲ್ಲಾ ಕಾಲ ಮತ್ತು ಸ್ಥಳಗಳನ್ನು ಮೀರಿದ ದೇವರಾಗಿದ್ದಾನೆ.

ಕಣ್ಣುಗಳು ದೇವರ ಬಗ್ಗೆ ಏನನ್ನು ಸೂಚಿಸುತ್ತವೆ? ಓದಿರಿ **ಯೆಹೆಜ್ಕೇಲ 8:12**

ದೇವರು ಪ್ರತಿಯೊಂದನ್ನೂ - ಅವರ ದಂಗೆಯನ್ನು, ಅವರ ಬಲಹೀನತೆಗಳನ್ನು, ಅವರ ದೈಹೀಕ ಆಸೆಗಳನ್ನು, ಅವರು ಬೇರೆ ದೇವರುಗಳಿಗೆ ಮಾಡುವ ಪೂಜೆಯನ್ನು ಸಹ - ಅವರು ರಹಸ್ಯವಾಗಿ ಮಾಡುತ್ತಿದ್ದರೂ ನೋಡುತ್ತಿರುತ್ತಾನೆ. ಹೀಗಿದ್ದರೂ ದೇವರು ತನ್ನ ಜನರನ್ನು ಅಂತಹ ಸಂಕೋಲೆಗಳಿಂದ ಬಿಡಿಸಲು ಬಯಸುತ್ತಾನೆ.

ಈ ವಾಕ್ಯಭಾಗವು **ಯಾಕೆ** ಬರೆಯಲ್ಪಟ್ಟಿದೆ? ಓದಿರಿ **ಯೆಹೆಜ್ಕೇಲ 11:16-25**

ತಾನು ಇಡೀ ಲೋಕಕ್ಕೆ ದೇವರೆಂದೂ ಸರ್ವ ಜ್ಞಾನಿಯೆಂದೂ ಎಲ್ಲವನ್ನು ನೋಡುವಾತನೆಂದೂ ಮತ್ತು ಸರ್ವಶಕ್ತನೆಂದೂ ಪ್ರಕಟಿಸಿಕೊಳ್ಳುವುದರ ಮೂಲಕ ದೇವರು ಯೆಹೆಜ್ಕೇಲನನ್ನು ಪ್ರೋತ್ಸಾಹಿಸಿದನು. ಆತನು ತನ್ನ ಜನರನ್ನು ಅವರ ದೈಹೀಕ ಆಸೆಗಳಿಂದ ಮತ್ತು ಇತರ ದೇವರುಗಳ ಪೂಜೆಯಿಂದ ಬಿಡುಗಡೆ ಮಾಡಲು ಬಯಸುತ್ತಾನೆ.

ಈ ವಾಕ್ಯಭಾಗದಲ್ಲಿರುವ **ಯಾವ** ವಿಷಯಗಳು ಇಂದಿಗೂ ಸಮಕಾಲೀನವಾಗಿವೆ?

ದೇವರು ನಿನ್ನೆಯೂ ಇಂದಿಗೂ ಎಂದೆಂದಿಗೂ ಒಂದೇ ರೀತಿಯಾಗಿದ್ದಾನೆ. ಆತನು ಜನರನ್ನು ಅವರ ಸ್ವಂತ ದೈಹೀಕ ಬಂಧನದಿಂದಲೂ ಅನ್ಯದೇವರುಗಳನ್ನು ಪೂಜಿಸುವ ಬಂಧನದಿಂದಲೂ ಬಿಡಿಸಲು ಬಯಸುವ ಸರ್ವವ್ಯಾಪಿಯಾದ, ಸರ್ವಜ್ಞಾನಿಯಾದ ಮತ್ತು ಸರ್ವವನ್ನು ವೀಕ್ಷಿಸುವ ದೇವರಾಗಿದ್ದಾನೆ.

ಇದು ನಮಗೆ ಇಂದು **ಏನನ್ನು** ತಿಳಿಸುತ್ತದೆ? ಗುಂಪಾಗಿ ಚರ್ಚಿಸಿ.

ದೇವರು ಸರ್ವವ್ಯಾಪಿಯಾದ, ಸರ್ವಜ್ಞಾನಿಯಾದ ಮತ್ತು ಸರ್ವವನ್ನು ವೀಕ್ಷಿಸುವಂಥ ದೇವರಾಗಿದ್ದರೆ, ನಾವು ಎಲ್ಲೇ ಇದ್ದರೂ ನಮಗೆ ಯಾವುದೇ ಬಲಹೀನತೆಯಿದ್ದರೂ ನಾವು ಯಾವುದೇ ಸನ್ನಿವೇಶದಲ್ಲಿದ್ದರೂ ದೇವರು ನಮ್ಮೊಂದಿಗಿದ್ದಾನೆ ಎಂದರ್ಥ. ಆತನು ತನ್ನನ್ನು ನಮಗೆ ಪ್ರಕಟಿಸಿಕೊಳ್ಳಲು ಮತ್ತು ನಮ್ಮನ್ನು ನೋಡಿಕೊಳ್ಳಲು ಇಚ್ಛಿಸುತ್ತಾನೆ.

ಇದರಿಂದ ನೀವು ದೇವರ ಬಗ್ಗೆ ತಿಳಿದುಕೊಂಡ ಒಂದು **ಅಂಶವೇನು**?

ದೇವರು ಕಾಲ ಮತ್ತು ಸ್ಥಳಗಳ ಚೌಕಟ್ಟುಗಳನ್ನು ಮೀರಿದವನಾಗಿದ್ದಾನೆ. ಆತನ ಜನರು ಎಲ್ಲೇ ಇದ್ದರೂ ಯಾವುದೇ ಸನ್ನಿವೇಶದಲ್ಲಿದ್ದರೂ ಆತನು ಅವರೊಂದಿಗಿದ್ದಾನೆ. ಯೆಹೆಜ್ಕೇಲನು ಮತ್ತು ಇಸ್ರೇಲರು ವಿದೇಶದಲ್ಲಿದ್ದಾಗಲೂ ತಾನು ಅವರೊಂದಿಗಿರುವುದಾಗಿ ಭರವಸೆ ನೀಡಲು ದೇವರು ತನ್ನನ್ನೇ ಪ್ರಕಟಿಸಿಕೊಳ್ಳುತ್ತಾನೆ.

ದೇವರು ಸನ್ನಿವೇಶಕ್ಕೆ ಸೀಮಿತನಾಗಿಲ್ಲ. ಆತನು ನಮ್ಮೊಂದಿಗಿರಲು, ನಮ್ಮೊಂದಿಗೆ ಸಂಬಂಧ ಹೊಂದಿರಲು, ನಮ್ಮನ್ನು ಸದಾಕಾಲ ನೋಡುತ್ತಿರಲು, ನಮಗಾಗಿ ಹುಡುಕುತ್ತಿರಲು, ನಮ್ಮನ್ನು ಸದಾಕಾಲ ತಿಳಿದಿರಲು ಯಾವಾಗಲೂ ಇಚ್ಛಿಸುತ್ತಾನೆ - ಆತನ ಬಳಿಗೆ ಬರುವವರನ್ನು ಮತ್ತು ಆತನನ್ನು ತಿರಸ್ಕರಿಸುವವರನ್ನು ಆತನು ಪ್ರೀತಿಯಿಂದ ಕರೆಯುತ್ತಾನೆ. ಯೇಸು ಎಲ್ಲರಿಗಾಗಿಯೂ - ಹೌದು, ಇಂತಿಂಥವರು ತನ್ನನ್ನು ಅನುಸರಿಸುವುದಿಲ್ಲ ಎಂದು ತನಗೆ ಗೊತ್ತಿದ್ದವರಿಗಾಗಿಯೂ ಪ್ರಾಣ ಕೊಟ್ಟನು!

ನಿಮ್ಮ ವೈಯಕ್ತಿಕವಾದ ಮತ್ತು ನಿಜವಾದ ಪ್ರತಿಕ್ರಿಯೆ/ಪ್ರಾರ್ಥನೆ **ಯಾವುದು**?

## ಅಂತಿಮ ಕೃತಜ್ಞತಾ ಪ್ರಾರ್ಥನೆ

ದೇವರು ತನ್ನನ್ನು ನಮಗೆ ಪ್ರಕಟಿಸಿಕೊಳ್ಳಲು ಇಚ್ಛಿಸುವುದರಿಂದ ಆತನಿಗೆ ಕೃತಜ್ಞತೆ ಸಲ್ಲಿಸಲು ಒಬ್ಬರಿಗೆ ಹೇಳಿರಿ.

# ಪಾಠ 3: ತನ್ನನ್ನು ವೈಯಕ್ತಿಕ ಮಾಡಿಕೊಳ್ಳುವುದು

*ದೇವರು ಸಂಬಂಧಿಕ. ಆತನ ಸಂದೇಶ ವೈಯಕ್ತಿಕ.*

## ಆರಂಭ ಪ್ರಾರ್ಥನೆ

ಪ್ರಾರ್ಥನೆಯ ಮೂಲಕ ಪಾಠವನ್ನು ಆರಂಭಿಸಲು ಒಬ್ಬರಿಗೆ ಹೇಳಿರಿ.

## ಆರಾಧನೆ

ದೇವರು ನಮ್ಮ ಅಗತ್ಯಕ್ಕೆ ಅನುಗುಣವಾಗಿ ತನ್ನನ್ನು ನಮಗೆ ಪ್ರಕಟಿಸಿಕೊಳ್ಳಲಿಚ್ಛಿಸುತ್ತಾನೆ ಎಂಬ ಎರಡು ಅಥವಾ ಮೂರು ಆರಾಧನಾ ಹಾಡುಗಳನ್ನು ನೀವೆಲ್ಲರೂ ಒಟ್ಟಿಗೆ ಆರಿಸಿಕೊಂಡು ಹಾಡಿರಿ.

## ಬೈಬಲ್ ಅಧ್ಯಯನ - ದೇವ ದರ್ಶನಗಳು - ಯಾಕೋಬ

ನಾವು ಈಗಾಗಲೇ ಕಲಿತಂತೆ, ದೇವರು ತನ್ನನ್ನು ನಾನಾ ರೀತಿಯಲ್ಲಿ ಪ್ರಕಟಿಸಿಕೊಳ್ಳುತ್ತಾನೆ. ದೇವರು ತನ್ನನ್ನು ಯಾರಿಗೆ ಪ್ರಕಟಿಸಿಕೊಳ್ಳಲಿಚ್ಛಿಸುತ್ತಾನೋ ಅವರ ಅಗತ್ಯಕ್ಕೆ ತಕ್ಕಂತೆ ತನ್ನನ್ನು ಪ್ರಕಟಿಸಿಕೊಳ್ಳುತ್ತಾನೆ. ದೇವರು ಯಾಕೋಬನಿಗೆ ಕೊಟ್ಟ ದರ್ಶನವನ್ನು ಅಧ್ಯಯನ ಮಾಡೋಣ.

## ದರ್ಶನದ ಹಿನ್ನೆಲೆ

ಪ್ರಾಚೀನ ಇಸ್ರೇಲಿನ ಹನ್ನೆರಡು ಕುಲಗಳಿಗೆ ತಂದೆಯಾದ ಯಾಕೋಬನು ಇಸಾಕ ಮತ್ತು ರೆಬೆಕ್ಕಳ ಮಗನಾಗಿದ್ದನು. ಇಸಾಕನು ಅಬ್ರಹಾಮ ಮತ್ತು ಸಾರಾಯಳ ಮಗನಾಗಿದ್ದನು. ಅಬ್ರಹಾಮ ಮತ್ತು ಇಸಾಕ ಇವರಿಬ್ಬರೂ ದೇವರಿಂದ ವೈಯಕ್ತಿಕ ವಾಗ್ದಾನವನ್ನು ಹೊಂದಿಕೊಂಡರು. ಯಾಕೋಬನು ತನ್ನ ಅಣ್ಣನಿಗೆ ಮೋಸ ಮಾಡಿ ಹಿರಿಮಗನಿಗೆ ಬರತಕ್ಕ ಆಶೀರ್ವಾದವನ್ನು ಪಡೆದುಕೊಂಡನು. ಇದರ ಪರಿಣಾಮವಾಗಿ ಯಾಕೋಬನ ತಾಯಿ ರೆಬೆಕ್ಕಳು ಯಾಕೋಬನಿಗೆ ಅವನ ಸಹೋದರನ ಕೋಪದಿಂದ ತಪ್ಪಿಸಿಕೊಂಡು ಓಡಿಹೋಗಲು ತಿಳಿಸಿದಳು. ಯಾಕೋಬನಿಗೆ ಹೆಂಡತಿಯನ್ನು ಹೊಂದಿಕೊಳ್ಳುವ ಸಮಯವೂ ಅದಾಗಿದ್ದರಿಂದ ಇಸಾಕನು ವಧುವನ್ನು ಕಂಡುಕೊಳ್ಳಲು ಅವನನ್ನು ರಾಹೇಲಳ ಕುಟುಂಬಕ್ಕೆ ಕಳುಹಿಸುತ್ತಾನೆ.

ಓದಿರಿ **ಆದಿಕಾಂಡ 28:10-22**

ಬೈಬಲಿನ ಈ ಭಾಗವನ್ನು ಧ್ಯಾನ ಮಾಡಿರಿ ಮತ್ತು ಅದನ್ನು ಅನೇಕ ಸಲ ಓದಿರಿ.

## ಗುಂಪಾಗಿ ಚರ್ಚಿಸಿ

ಈ ಬೈಬಲ್ ಭಾಗದಲ್ಲಿ ನೀವು ಗುರುತಿಸಿದವುಗಳನ್ನು ಚರ್ಚಿಸಿ. ನಿಮಗೆ ಕೊಟ್ಟಿರುವ ಹಾಳೆಗಳ ಮೇಲೆ ಉತ್ತರಗಳನ್ನು ಬರೆಯಿರಿ.

ಈ ವಾಕ್ಯಭಾಗವನ್ನು ನಾವು ತಪ್ಪಾಗಿ ಅರ್ಥೈಸಿಕೊಳ್ಳದಿರಲು ಸಹಾಯಕವಾದ ಈ ಕೆಳಕಂಡ ಪ್ರಶ್ನೆಗಳನ್ನು ವಾಕ್ಯದ ಕುರಿತಾಗಿ ಕೇಳಿರಿ:

ಈ ವಾಕ್ಯದಲ್ಲಿರುವ ವ್ಯಕ್ತಿಗಳು **ಯಾರು**?

ದೇವರು, ಯಾಕೋಬನು ಮತ್ತು ದೇವದೂತರು.

ಮಾತಾಡುತ್ತಿರುವವರು **ಯಾರು**?

ದೇವರು.

ದೇವರು **ಯಾರೊಡನೆ** ಮಾತಾಡುತ್ತಿದ್ದಾನೆ?

ಯಾಕೋಬ.

ಈ ವ್ಯಕ್ತಿಗಳು **ಹೇಗೆ** ಒಬ್ಬರಿಗೊಬ್ಬರು ಮಾತಾಡುತ್ತಿದ್ದಾರೆ?

ದೇವರು ತನ್ನನ್ನು ದರ್ಶನದಲ್ಲಿ ಪ್ರಕಟಿಸಿಕೊಂಡು ಯಾಕೋಬನೊಂದಿಗೆ ಮಾತಾಡುತ್ತಾನೆ. ಯಾಕೋಬನು ವೀಕ್ಷಿಸುತ್ತಾನೆ ಮತ್ತು ಕೇಳಿಸಿಕೊಳ್ಳುತ್ತಾನೆ.

ದೇವರು ತನ್ನನ್ನು ಯಾಕೋಬನಿಗೆ ಪರಿಚಯಿಸಿಕೊಳ್ಳುವುದು **ಹೇಗೆ**? ಓದಿರಿ **ವಚನ 13**

'ನಾನು ನಿಮ್ಮ ತಂದೆಯಾದ ಅಬ್ರಹಾಮನ ದೇವರು ಮತ್ತು ಇಸಾಕನ ದೇವರು.'

ದೇವರು ತನ್ನನ್ನು ಪರಿಚಯಿಸಿಕೊಳ್ಳುವ ವಿಧಾನವು ಯಾಕೋಬನೊಂದಿಗಿನ ಆತನ ಸಂಬಂಧದ ಬಗ್ಗೆ **ಏನು** ಹೇಳುತ್ತದೆ?

ಯಾಕೋಬನಿಗೆ ದೇವರೊಂದಿಗೆ ವೈಯಕ್ತಿಕ ಸಂಬಂಧವಿರಲಿಲ್ಲ. ಯಾಕೋಬನಿಗೆ ತನ್ನ ತಂದೆಯ ದೇವರ ಬಗ್ಗೆ ತಿಳಿದಿತ್ತು, ಆದರೆ ಸ್ವತಃ ಅವನಿಗೆ ದೇವರ ಅನುಭವವಿರಲಿಲ್ಲ.

**15 ನೇ ವಚನದಲ್ಲಿ** ದೇವರು ಯಾಕೋಬನಿಗೆ **ಯಾವ** ವಾಗ್ದಾನ ಮಾಡಿದನು?

ದೇವರು ಯಾಕೋಬನಿಗೆ ತಾನು ಅವನೊಂದಿಗಿರುವುದಾಗಿಯೂ, ಅವನು ಹೋದಲ್ಲೆಲ್ಲಾ ತಾನು ಅವನನ್ನು ಸುರಕ್ಷಿತವಾಗಿಡುವುದಾಗಿಯೂ, ಅವನನ್ನು ಈ ದೇಶಕ್ಕೆ ಕರೆತರುವುದಾಗಿಯೂ ವಾಗ್ದಾನ ಮಾಡಿದನು; ದೇವರು ಅವನನ್ನು ತೊರೆದುಬಿಡುವುದಿಲ್ಲ.

ಈ ಘಟನೆ **ಎಲ್ಲಿ** ಸಂಭವಿಸಿತು? ಓದಿರಿ **ವಚನ 19**

ಲುಜ್ ಎಂಬ ನಗರದಲ್ಲಿ. ಯಾಕೋಬನು ಆ ನಗರಕ್ಕೆ ಬೆತೆಲ್ ಎಂಬ ಹೆಸರಿಟ್ಟನು.

ಏಣಿಯನ್ನು **ಎಲ್ಲಿ** ಇಡಲಾಗಿತ್ತು ಮತ್ತು ಏಣಿಯು **ಎಲ್ಲಿಗೆ** ನಡೆಸುತ್ತಿತ್ತು? ಓದಿರಿ **ವಚನ 12**

ಏಣಿಯನ್ನು ಭೂಮಿಯ ಮೇಲೆ ಇಡಲಾಗಿತ್ತು ಮತ್ತು ಅದು ಪರಲೋಕಕ್ಕೆ ನಡೆಸುತ್ತಿತ್ತು.

ಏಣಿಯು **ಏನನ್ನು** ಸೂಚಿಸುತ್ತದೆ?

ಏಣಿಯು ಜನರೊಂದಿಗಿನ ದೇವರ ಸಂಬಂಧವನ್ನು ಸೂಚಿಸುತ್ತದೆ. ದೇವರು ನಮ್ಮ ಬಳಿಗೆ ತಾನೇ ಇಳಿದುಬರುವನು. ದೇವರು ಯಾಕೋಬನಿಗೆ ತನ್ನ ಬಗ್ಗೆ ಒಂದು ವೈಯಕ್ತಿಕ ಅನುಭವವನ್ನು ಕೊಟ್ಟನು; ಅವನು ವಾಸಿಸುತ್ತಿದ್ದ ಭೂಮಿಯಿಂದಿಡಿದು ದೇವರಿರುವ ಪರಲೋಕದವರೆಗಿನ ದರ್ಶನವದು.

ಈ ಘಟನೆ **ಯಾವಾಗ** ಸಂಭವಿಸಿತು - ಯೇಸು ಮಾಂಸರಕ್ತಧಾರಿಯಾಗಿ, ಶಿಲುಬೆ ಮೇಲೆ ಸತ್ತು, ಸಮಾಧಿಯಿಂದ ಎದ್ದುಬಂದು, ಮೇಲೋಕಕ್ಕೆ ಏರಿಹೋದದ್ದಕ್ಕಿಂತ ಮೊದಲೋ ಅಥವಾ ಏರಿಹೋದ ಮೇಲೋ?

ಯೇಸು ಮಾಂಸರಕ್ತಧಾರಿಯಾಗುವುದಕ್ಕಿಂತ ಮೊದಲು.

ಈ ವಾಕ್ಯಭಾಗವು **ಯಾಕೆ** ಬರೆಯಲ್ಪಟ್ಟಿದೆ?

ಇಸ್ರೇಲ್ ದೇಶದ ಇತಿಹಾಸ ಮೂಲಕ ಮತ್ತು ದೇವರೊಂದಿಗಿನ ಅವರ ಸಂಬಂಧದ ಮೂಲಕ ನಾವು ದೇವರ ಬಗ್ಗೆ ಹೆಚ್ಚಾಗಿ ಕಲಿತುಕೊಳ್ಳುತ್ತೇವೆ. ದೇವರು ಯಾಕೋಬನಿಗೆ ತನ್ನನ್ನು ವೈಯಕ್ತಿಕವಾಗಿ ತಿಳಿದುಕೊಳ್ಳುವಂತೆ ಮಾಡಿದನು. ದೇವರನ್ನು ತನ್ನ ತಂದೆಯ ದೇವರೆಂದಾಗಲೀ ಅಥವಾ ತಾತನ ದೇವರೆಂದಾಗಲೀ ತಿಳಿದುಕೊಂಡರೆ ಸಾಲದು. ಆದರೆ ಈಗ ಯಾಕೋಬನು ದೇವರನ್ನು ವೈಯಕ್ತಿಕವಾಗಿ ತಿಳಿದುಕೊಂಡಿರುವುದರಿಂದ ಸ್ವತಃ ತಾನೇ ವಾಗ್ದಾನವನ್ನು ಪಡೆದುಕೊಳ್ಳುತ್ತಾನೆ.

ಈ ವಾಕ್ಯಭಾಗದಲ್ಲಿರುವ **ಯಾವ** ವಿಷಯಗಳು ಇಂದಿಗೂ ಸಮಕಾಲೀನವಾಗಿವೆ?

ದೇವರು ನಿನ್ನೆಯೂ ಇಂದಿಗೂ ಎಂದೆಂದಿಗೂ ಒಂದೇ ರೀತಿಯಲ್ಲಿರುತ್ತಾನೆ. ದೇವರು ತನ್ನನ್ನು ನಮ್ಮ ಅಗತ್ಯಕ್ಕೆ ತಕ್ಕಂತೆ ವೈಯಕ್ತಿಕವಾಗಿ ಪ್ರಕಟಪಡಿಸಿಕೊಳ್ಳುತ್ತಾನೆ. ಪ್ರತಿಯೊಬ್ಬರೂ ತಾವು ಯಾರನ್ನು ಆರಾಧಿಸಬೇಕೆಂಬುದನ್ನು ತಾವೇ ನಿರ್ಧರಿಸಬೇಕು.

ಅದು ನಮಗೆ ಇಂದು **ಏನನ್ನು** ತಿಳಿಸುತ್ತದೆ?

ದೇವರು ಪರಲೋಕದಿಂದ ಭೂಮಿಗೆ ಇಳಿದುಬರುವ ದರ್ಶನವು ಯಾಕೋಬನಿಗಾಗಿತ್ತು. ದೇವರು ಮಾಂಸರಕ್ತಧಾರಿಯಾಗಿ ಮಾನವ ರೂಪದಲ್ಲಿ ಭೂಮಿಗೆ ಬಂದನು. ಆತನೇ ಮನುಷ್ಯಕುಮಾರನೂ ದೇವಕುಮಾರನೂ ಆಗಿರುವ (ಅಭಿಷೇಕಿಸಲ್ಪಟ್ಟ) ಯೇಸು ಕ್ರಿಸ್ತನು.

**ಯೋಹಾನ 1:51**ರಲ್ಲಿ ಯೇಸು ತನ್ನ ಶಿಷ್ಯರಿಗೆ ಪರಲೋಕವು ತೆರೆದಿರುವುದನ್ನು ಮತ್ತು ದೇವದೂತರು (ಸ್ವತಃ) ಮನುಷ್ಯಕುಮಾರನ ಮೇಲೆ ಇಳಿಯುವುದನ್ನು ಮತ್ತು ಏರುವುದನ್ನು ಅವರು ನೋಡುವುದಾಗಿ ಹೇಳಿದ್ದಾನೆ. ಯೇಸು ಕ್ರಿಸ್ತನ ಜನನ, ಮರಣ, ಪುನರುತ್ಥಾನ ಮತ್ತು ಆರೋಹಣದ ಮೂಲಕ ಪರಲೋಕವು ತೆರೆಯಲ್ಪಟ್ಟಿತ್ತು. ಇಂದು ನಾವು ಯೇಸುಕ್ರಿಸ್ತನ ಮತ್ತು ಆತನ ಆತ್ಮನ ಮೂಲಕ ದೇವರನ್ನು ವೈಯಕ್ತಿಕವಾಗಿ ತಿಳಿದುಕೊಳ್ಳಬಹುದು. ದೇವರೊಡನೆ ನಮಗೆ ನೇರ ಸಂಪರ್ಕವಿದೆ. ನಾವು ಯಾವುದೇ ಪರಿಸ್ಥಿತಿಯಲ್ಲಿದ್ದರೂ ದೇವರು ನಮಗಾಗಿ ಎದುರುನೋಡುತ್ತಿರುತ್ತಾನೆ.

ಈ ಪಾಠದಿಂದ ನೀವು ದೇವರ ಬಗ್ಗೆ ತಿಳಿದುಕೊಳ್ಳುವಂಥ ಒಂದು **ಅಂಶವೇನು**?

ದೇವರು ಪ್ರತಿಯೊಬ್ಬರಿಗೆ ಅವರವರ ಅಗತ್ಯಕ್ಕೆ ತಕ್ಕಂತೆ ತನ್ನನ್ನು ಪ್ರಕಟಿಸಿಕೊಳ್ಳುವನು. ಯಾಕೋಬನು ದೇವರನ್ನು ತಾನೇ ಅನುಭವದಿಂದ ತಿಳಿದುಕೊಳ್ಳಬೇಕಿತ್ತು. ದೇವರನ್ನು ನಮ್ಮ ಪಿತೃಗಳ ದೇವರೆಂದು ತಿಳಿದುಕೊಂಡರೆ ಸಾಲದು. ಯಾಕೋಬನು ತಪ್ಪುಮಾಡಿ ಏಕಾಂಗಿಯಾಗಿದ್ದಾಗಲೂ ದೇವರು ತನ್ನನ್ನು ಯಾಕೋಬನಿಗೆ ಪ್ರಕಟಿಸಿಕೊಂಡು ಅವನನ್ನು ಆಶೀರ್ವದಿಸಲು ಇಚ್ಛಿಸಿದನು. ದೇವರು ಸಂಬಂಧಿಕ. ಆತನು ವೈಯಕ್ತಿಕ. ಪ್ರೀತಿಸುವ ದೇವರಾಗಿರುವ ಆತನು ಆಶೀರ್ವದಿಸಲು ಸಿದ್ಧನಾಗಿದ್ದಾನೆ. ನಂಬಿಗಸ್ತ ದೇವರಾದ ಆತನು ತನ್ನ ವಾಗ್ದಾನಗಳನ್ನು ಪೂರೈಸುತ್ತಾನೆ.

ನಿಮ್ಮ ನಿಜವಾದ ಪ್ರತಿಕ್ರಿಯೆ/ಪ್ರಾರ್ಥನೆ **ಯಾವುದು**?

## ಅಂತಿಮ ಕೃತಜ್ಞತಾ ಪ್ರಾರ್ಥನೆ

ದೇವರು ತನ್ನನ್ನು ನಮಗೆ ಪ್ರಕಟಿಸಿಕೊಳ್ಳಲು ಇಚ್ಛಿಸುವುದರಿಂದ ಆತನಿಗೆ ಕೃತಜ್ಞತೆ ಸಲ್ಲಿಸಲು ಒಬ್ಬರಿಗೆ ಹೇಳಿರಿ.

# ಪಾಠ 4: ಇದೇ ಸಮಯ

*ಇಗೋ ಬೆಂಕಿಯಂತಿರುವ ಕಣ್ಣುಗಳನ್ನು ಹೊಂದಿರುವಾತನು! ಆತನನ್ನು ಸ್ವೀಕರಿಸಿಕೊಳ್ಳುವವರು ಪ್ರೀತಿಯನ್ನು, ಬೆಳಕನ್ನು ಮತ್ತು ಜೀವವನ್ನು ಕಾಣುವರು. ಆತನನ್ನು ತಿರಸ್ಕರಿಸುವವರು ದಂಡನೆಯನ್ನು, ಕತ್ತಲೆಯನ್ನು, ಸಾವನ್ನು ಕಾಣುವರು.*

## ಆರಂಭ ಪ್ರಾರ್ಥನೆ

ಪ್ರಾರ್ಥನೆಯ ಮೂಲಕ ಪಾಠವನ್ನು ಆರಂಭಿಸಲು ಒಬ್ಬರಿಗೆ ಹೇಳಿರಿ.

## ಆರಾಧನೆ

ಯೇಸುವೇ ಪರಲೋಕಕ್ಕೆ ಮಾರ್ಗ ಎಂದು ತಿಳಿಸುವ ಎರಡು ಅಥವಾ ಮೂರು ಆರಾಧನಾ ಹಾಡುಗಳನ್ನು ನೀವೆಲ್ಲರೂ ಒಟ್ಟಿಗೆ ಆರಿಸಿಕೊಂಡು ಹಾಡಿರಿ.

## ಬೈಬಲ್ ಅಧ್ಯಯನ - ದೇವ ದರ್ಶನಗಳು - ಯೋಹಾನ

ನಾವು ಈಗಾಗಲೇ ಕಲಿತಂತೆ, ದೇವರು ತನ್ನನ್ನು ನಾನಾ ರೀತಿಯಲ್ಲಿ ಪ್ರಕಟಿಸಿಕೊಳ್ಳುತ್ತಾನೆ. ದೇವರು ತನ್ನನ್ನು ಯಾರಿಗೆ ಪ್ರಕಟಿಸಿಕೊಳ್ಳಲಿಚ್ಛಿಸುತ್ತಾನೋ ಅವರ ಅಗತ್ಯಕ್ಕೆ ತಕ್ಕಂತೆ ತನ್ನನ್ನು ಪ್ರಕಟಿಸಿಕೊಳ್ಳುತ್ತಾನೆ. ದೇವರು ಯೋಹಾನನಿಗೆ ಕೊಟ್ಟ ದರ್ಶನವನ್ನು ಅಧ್ಯಯನ ಮಾಡೋಣ.

## ದರ್ಶನದ ಹಿನ್ನೆಲೆ

ಯೋಹಾನನನ್ನು ಅವನ ನಂಬಿಕೆ ನಿಮಿತ್ತ ಗಡಿಪಾರು ಮಾಡಲಾಯಿತು. ಸಭೆಯು ಹಿಂಸೆಗೆ ಒಳಗಾಯಿತು. ಮಾನವನ ಅತ್ಯಂತ ನಿರ್ದಯವಾದ ಮತ್ತು ಪ್ರಬಲವಾದ ರೋಮ್ ಸಾಮ್ರಾಜ್ಯ ಅಧಿಕಾರದಲ್ಲಿತ್ತು. ಗಡಿಪಾರು ಮಾಡಲ್ಪಟ್ಟು ಒಬ್ಬಂಟಿಗನಾಗಿದ್ದಾಗ ಯೋಹಾನನಿಗೆ ದೇವರ ಸರ್ವ ಮಹಿಮೆ, ಪ್ರೀತಿ ಮತ್ತು ಶಕ್ತಿಯಿಂದ ಕೂಡಿದ ದರ್ಶನವಾಗುತ್ತದೆ. ಇದ್ದಾತನೂ ಇರುವಾತನೂ ಬರುವಾತನೂ ಆಗಿರುವ ದೇವರು ಸಿಂಹಾಸನದ ಮೇಲಿದ್ದನು; ಎಲ್ಲಾ ಯುಗಗಳ ಕೆಡುಕುಗಳನ್ನು ಮತ್ತು ಎಲ್ಲಾ ಮಾನವ ಸಾಮ್ರಾಜ್ಯಗಳ ಶಕ್ತಿಯನ್ನು ಒಟ್ಟುಗೂಡಿಸಿದರೂ ಅವೆಲ್ಲಕ್ಕಿಂತ ಆತನ ಶಕ್ತಿಯು ಎಷ್ಟೋ ಹೆಚ್ಚಾಗಿತ್ತು. ಕೆಡುಕನಿಗೆ ಅಂತ್ಯ ಬರಲಿದೆ ಎಂಬ ಭರವಸೆಯನ್ನು ಯೋಹಾನನಿಗೆ ಮತ್ತು ಎಲ್ಲಾ ವಿಶ್ವಾಸಿಗಳಿಗೆ ಕೊಡಲಾಯಿತು. ಯೇಸು ಅವನನ್ನು ಸೋಲಿಸಿದ್ದಾನೆ. ಕೆಡುಕನಿಗೆ ಕ್ಷಣಿಕ ಕಾಲವಷ್ಟೇ ಇರುವುದು. ಕೆಡುಕನು ಕೊನೆಗೊಳ್ಳುವ ಮೊದಲೇ ಸ್ವತಃ ತಾವಾಗಿಯೇ ತನ್ನ ಬಳಿಗೆ ಬರುವವರಿಗಾಗಿ ದೇವರು ಎದುರುನೋಡುತ್ತಿದ್ದಾನೆ.

ಯೇಸುವಿನ ಪ್ರಕಟಣೆಯ ಒಂದು ಚಿಕ್ಕ ಭಾಗವನ್ನು ಮತ್ತು ಮುಂದೆ ಸಂಭವಿಸುವ ಸಂಗತಿಗಳನ್ನು ನೋಡೋಣ.

ಓದಿರಿ **ಪ್ರಕಟನೆ 4:1-11**

ಬೈಬಲಿನ ಈ ಭಾಗವನ್ನು ಧ್ಯಾನ ಮಾಡಿರಿ ಮತ್ತು ಅದನ್ನು ಅನೇಕ ಸಲ ಓದಿರಿ.

## ಗುಂಪಾಗಿ ಚರ್ಚಿಸಿ

ಒಂದೊಂದು ವಚನವಾಗಿ ಬೈಬಲಿನ ಈ ಭಾಗದಲ್ಲಿರುವ ಸಂಗತಿಗಳನ್ನು ಚರ್ಚಿಸಿ. ನಿಮಗೆ ಕೊಟ್ಟಿರುವ ಹಾಳೆಗಳ ಮೇಲೆ ಉತ್ತರಗಳನ್ನು ಬರೆಯಿರಿ.

**ವಚನ 1** ಪರಲೋಕದಲ್ಲಿ ತೆರೆದ ಬಾಗಿಲು.

**ವಚನ 2** ಪರಲೋಕದಲ್ಲಿ ಸಿಂಹಾಸನ ಮತ್ತು ಸಿಂಹಾಸನದ ಮೇಲೆ ಕುಳಿತಿರುವಾತನು.

**ವಚನ 3** ಸಿಂಹಾಸನದ ಸುತ್ತಲಿದ್ದ ಮಳೆಬಿಲ್ಲು.

**ವಚನ 4** ಸಿಂಹಾಸನದ ಸುತ್ತಲೂ ಇಪ್ಪತ್ನಾಲ್ಕು ಸಿಂಹಾಸನಗಳಿದ್ದವು ಮತ್ತು ಆ ಸಿಂಹಾಸಗಳ ಮೇಲೆ ಇಪ್ಪತ್ನಾಲ್ಕು ಹಿರಿಯರು ಕುಳಿತಿದ್ದಾರೆ.

**ವಚನ 5** ಗುಡುಗು, ಮಿಂಚು ಮತ್ತು ಸಿಂಹಾಸನದಿಂದ ಬರುತ್ತಿರುವ ಸ್ವರಗಳು. ಏಳು ದೀಪಗಳು = ದೇವರ ಏಳು ಆತ್ಮಗಳು.

**ವಚನ 6** ಗಾಜಿನ ಸಮುದ್ರ. ಕಣ್ಣುಗಳಿಂದ ಆವೃತವಾಗಿದ್ದ ನಾಲ್ಕು ಜೀವಿಗಳು.

**ವಚನ 7** ಮೊದಲನೆ ಜೀವಿಯು ಸಿಂಹದಂತಿದೆ. ಎರಡನೆ ಜೀವಿಯು ಕರುವಿನಂತಿದೆ. ಮೂರನೆ ಜೀವಿಯು ಮನುಷ್ಯನ ಮೂಖದಂತಿದೆ. ನಾಲ್ಕನೆ ಜೀವಿಯು ಹಾರುತ್ತಿರುವ ಗರುಡನಂತಿದೆ.

ನಾಲ್ಕು ಜೀವಿಗಳು ಹಗಲು ರಾತ್ರಿ **ಏನು ಹೇಳುತ್ತಾರೆ**? ಓದಿರಿ **ವಚನ 8**

*"ಸರ್ವಶಕ್ತ ದೇವರಾದ ಕರ್ತನು - ಪರಿಶುದ್ಧನು, ಪರಿಶುದ್ಧನು, ಪರಿಶುದ್ಧನು; ಆತನು ಯಾವಾಗಲೂ ಇದ್ದಾತನೂ, ಈಗ ಇರುವಾತನೂ ಮುಂದೆ ಬರುವಾತನೂ ಆಗಿದ್ದಾನೆ."* (ERV)

ಸಿಂಹಾಸನದ ಮೇಲೆ ಕುಳಿತಿರುವಾತನನ್ನು ನಾಲ್ಕು ಜೀವಿಗಳು ಆರಾಧಿಸುವಾಗ ಇಪ್ಪತ್ನಾಲ್ಕು ಹಿರಿಯರು **ಏನು ಮಾಡುತ್ತಾರೆ**? **9-10 ನೇ ವಚನಗಳನ್ನು** ಓದಿರಿ

ಸಿಂಹಾಸನದ ಮೇಲೆ ಕುಳಿತಿರುವಾತನ ಮುಂದೆ ಅಡ್ಡಬಿದ್ದು ಆತನನ್ನು ಆರಾಧಿಸುತ್ತಾರೆ.

ಸಿಂಹಾಸನದ ಮೇಲೆ ಕುಳಿತಿರುವಾತನನ್ನು ಆರಾಧಿಸುತ್ತಾ ಇಪ್ಪತ್ನಾಲ್ಕು ಹಿರಿಯರು **ಏನು ಹೇಳಿದರು**? ಓದಿರಿ **ವಚನ 11**

*"ನಮ್ಮ ಕರ್ತನೇ, ನಮ್ಮ ದೇವರೇ! ನೀನು ಪ್ರಭಾವ, ಗೌರವ, ಅಧಿಕಾರಗಳನ್ನು ಪಡೆಯಲು ಯೋಗ್ಯನಾಗಿರುವೆ. ಎಲ್ಲವನ್ನೂ ನಿರ್ಮಿಸಿದಾತನು ನೀನೇ. ನಿನ್ನ ಚಿತ್ತದಂತೆಯೇ ಎಲ್ಲವೂ ಇದ್ದವು; ಎಲ್ಲವೂ ಸೃಷ್ಟಿಗೊಂಡವು."* (ERV)

ಪರಲೋಕಕ್ಕೆ ಬಾಗಿಲು ತೆರೆದಿದೆ: ಯೋಹಾನನು ನೋಡುವ ಬಾಗಿಲು ನಮ್ಮನ್ನು ತೊಳೆದು ಶುದ್ಧಿಮಾಡುವ ಯೇಸುವಿನ ಪರಿಪೂರ್ಣ ರಕ್ತಾರ್ಪಣೆಯ ಸಂಕೇತವಾಗಿದೆ. ನಾವು ಯೇಸುವಿನ ರಕ್ತಾರ್ಪಣೆಯನ್ನು ಸ್ವೀಕರಿಸಿಕೊಂಡಿರುವಾಗ, ನಮ್ಮೊಳಗೆ ದೇವರ ಆತ್ಮನೂ ಇರುತ್ತಾನೆ; ಆತನ ಪ್ರಸನ್ನತೆಯು ನಮ್ಮ ಮೇಲೂ ನಮ್ಮ ಸುತ್ತಲೂ ಇರುತ್ತದೆ.

ದೇವರು ಮಾಂಸರಕ್ತಧಾರಿಯಾಗಿ ಯೇಸುವಿನ ಮೂಲಕ ಬಂದು ನಮ್ಮಲ್ಲಿ ಒಬ್ಬನಾಗಿ, ತನ್ನ ಪ್ರಾಣವನ್ನು ಅರ್ಪಿಸಿ, ಸಮಾಧಿಯಿಂದ ಎದ್ದುಬಂದು, ಪರಲೋಕಕ್ಕೆ ಏರಿಹೋಗಿ ತಂದೆಯಾದ ದೇವರ ಬಲಗಡೆಯಲ್ಲಿ ಆಸೀನನಾದ್ದರಿಂದ ಆತನ ಆತ್ಮನ ಮೂಲಕ ನಾವು ದೇವರ ಸಿಂಹಾಸನದ ಕೋಣೆಗೆ ಪ್ರವೇಶಿಸಲು ಅವಕಾಶ ಸಿಕ್ಕಿತು.

ಈ ಕಾಲದಲ್ಲಿ ಕೆಡುಕನಿಂದ ಹಾನಿಗೊಳಗಾಗಿರುವ ಈ ಲೋಕದಲ್ಲಿರುವಾಗ ನಿರಂತರವಾದ ಸಭೆ, ಅನ್ಯೋನ್ಯತೆ, ಉಪದೇಶ, ಸಂಬಂಧ, ಪ್ರೀತಿ ಮತ್ತು ಪ್ರಕಟನೆಗಳಿಗಾಗಿ ದೇವರ ಸಿಂಹಾಸನದ ಕೋಣೆಗೆ ಪ್ರವೇಶಿಸಲು ನಮಗೆ ಅವಕಾಶವಿದೆ.

ಮುಂದಿನ ಕಾಲದಲ್ಲಿ, ನಾವು ಈಗ ನಿರೀಕ್ಷಿಸುತ್ತಿರುವಂತೆ ಪುನರುತ್ಥಾನಗೊಂಡ ನಮ್ಮ ಪರಿಪೂರ್ಣ ದೇಹಗಳಲ್ಲಿ ದೇವರ ಸಿಂಹಾಸನದ ಕೋಣೆಗೆ ಪ್ರವೇಶಿಸಲು ನಮಗೆ ಅವಕಾಶವಿದೆ, ಅಲ್ಲಿ ನಾವು ಆತನನ್ನು ಮುಖಾಮುಖಿಯಾಗಿ ನೋಡುತ್ತೇವೆ. ಅಲ್ಲಿ ಕಣ್ಣೀರು ಇರುವುದಿಲ್ಲ, ನೋವು ಇರುವುದಿಲ್ಲ, ವಯಸ್ಸಾಗುವುದಿಲ್ಲ, ಕಾಯಿಲೆ ಇರುವುದಿಲ್ಲ. ಶಾಶ್ವತವಾಗಿರುವ ಅಲ್ಲಿ ಪ್ರತಿಯೊಂದೂ ಪರಿಪೂರ್ಣವಾಗಿರುತ್ತದೆ.

ಈ ವಾಕ್ಯಭಾಗವನ್ನು ನಾವು ತಪ್ಪಾಗಿ ಅರ್ಥೈಸಿಕೊಳ್ಳದಿರಲು ಸಹಾಯಕವಾದ ಈ ಕೆಳಕಂಡ ಪ್ರಶ್ನೆಗಳನ್ನು ವಾಕ್ಯದ ಕುರಿತಾಗಿ ಕೇಳಿರಿ:

ಈ ವಾಕ್ಯಭಾಗದಲ್ಲಿರುವ ವ್ಯಕ್ತಿಗಳು **ಯಾರು**?

ಯೋಹಾನ, ಸ್ವರ, ದೇವರು (ಸಿಂಹಾಸನದ ಮೇಲೆ ಕುಳಿತಿರುವಾತನು), ನಾಲ್ಕು ಜೀವಿಗಳು, ಇಪ್ಪತ್ನಾಲ್ಕು ಹಿರಿಯರು, ದೇವರ ಏಳು ಆತ್ಮಗಳು.

ಅವರು **ಯಾರೊಂದಿಗೆ** ಮಾತಾಡುತ್ತಿದ್ದಾರೆ?

ಯೋಹಾನ - ಬರಹಗಾರ, ಸ್ವರ (ವಚನ 1), ನಾಲ್ಕು ಜೀವಿಗಳು (ವಚನ 8) ಮತ್ತು ಇಪ್ಪತ್ನಾಲ್ಕು ಹಿರಿಯರು (ವಚನ 11).

ಅವರು **ಯಾರೊಂದಿಗೆ** ಮಾತಾಡುತ್ತಿದ್ದಾರೆ? ಓದಿರಿ **ಪ್ರಕಟನೆ 4:1**

ಆ ಕಾಲದಲ್ಲಿದ್ದ ಮತ್ತು ಯುಗಾಂತರಗಳಲ್ಲಿರುವ ವಿಶ್ವಾಸಿಗಳೊಂದಿಗೆ ಯೋಹಾನನು ಮಾತಾಡುತ್ತಿದ್ದಾನೆ.

ಸ್ವರವು **ಯಾರೊಂದಿಗೆ** ಮಾತಾಡುತ್ತಿದೆ? ಓದಿರಿ **ಪ್ರಕಟನೆ 4:1**

ಸ್ವರವು ಯೋಹಾನನೊಂದಿಗೆ ಮಾತಾಡುತ್ತಿದೆ.

ನಾಲ್ಕು ಜೀವಿಗಳು **ಯಾರೊಂದಿಗೆ** ಮಾತಾಡುತ್ತಿದ್ದಾರೆ? ಓದಿರಿ **ಪ್ರಕಟನೆ 4:8**

ನಾಲ್ಕು ಜೀವಿಗಳು ಸಿಂಹಾಸನದ ಮೇಲೆ ಕುಳಿತಿರುವಾತನನ್ನು (ದೇವರನ್ನು) ಸ್ತುತಿಸುತ್ತಿದ್ದಾರೆ.

ಓದಿರಿ **ಪ್ರಕಟನೆ 4:11**

ಇಪ್ಪತ್ನಾಲ್ಕು ಹಿರಿಯರು ಯಾರೊಂದಿಗೆ ಮಾತಾಡುತ್ತಿದ್ದಾರೆ? ಇಪ್ಪತ್ನಾಲ್ಕು ಹಿರಿಯರು ಸಿಂಹಾಸನದ ಮೇಲೆ ಕುಳಿತಿರುವಾತನನ್ನು (ದೇವರನ್ನು) ಸ್ತುತಿಸುತ್ತಿದ್ದಾರೆ.

ಈ ವ್ಯಕ್ತಿಗಳು **ಹೇಗೆ** ಒಬ್ಬರಿಗೊಬ್ಬರು ಮಾತಾಡುತ್ತಿದ್ದಾರೆ?

ಆತ್ಮಭರಿತನಾಗಿದ್ದ ಯೋಹಾನನು ಪರಲೋಕಕ್ಕೆ ಪ್ರವೇಶಿಸುತ್ತಾನೆ, ಸ್ವರವನ್ನು ನೋಡುತ್ತಾನೆ ಮತ್ತು ಸ್ವರಕ್ಕೆ ಕಿವಿಗೊಡುತ್ತಾನೆ, ನಾಲ್ಕು ಜೀವಿಗಳು ಮತ್ತು ಇಪ್ಪತ್ನಾಲ್ಕು ಹಿರಿಯರು ಸಿಂಹಾಸನದ ಮೇಲೆ ಕುಳಿತಿರುವಾತನನ್ನು (ದೇವರನ್ನು) ಆರಾಧಿಸುತ್ತಿರುತ್ತಾರೆ.

ಈ ಘಟನೆ **ಎಲ್ಲಿ** ಸಂಭವಿಸಿತು? ಓದಿರಿ **ಪ್ರಕಟನೆ 1:9** ಮತ್ತು **4:1**

ಪತ್ಮೋಸ್ ದ್ವೀಪ ಮತ್ತು ಪರಲೋಕ.

ಈ ಘಟನೆ **ಯಾವಾಗ** ಸಂಭವಿಸಿತು - ಯೇಸು ಮಾಂಸರಕ್ತಧಾರಿಯಾಗಿ, ಶಿಲುಬೆ ಮೇಲೆ ಸತ್ತು, ಸಮಾಧಿಯಿಂದ ಎದ್ದುಬಂದು, ಮೇಲೋಕಕ್ಕೆ ಏರಿಹೋದದ್ದಕ್ಕಿಂತ ಮೊದಲೋ ಅಥವಾ ಏರಿಹೋದ ಮೇಲೋ? ಓದಿರಿ **ಪ್ರಕಟನೆ 1:17-18**

ಯೇಸು ಮಾಂಸರಕ್ತಧಾರಿಯಾಗಿ ಬಂದು, ಶಿಲುಬೆಯ ಮೇಲೆ ಸತ್ತು, ಸತ್ತವರೊಳಗಿಂದ ಎದ್ದುಬಂದು ಮೇಲೋಕಕ್ಕೆ ಏರಿಹೋದನು.

ಈ ವಾಕ್ಯಭಾಗವು **ಯಾಕೆ** ಬರೆಯಲ್ಪಟ್ಟಿದೆ?

ಸರ್ವಶಕ್ತನಾದ, ಸರ್ವಾಧಿಕಾರಿಯಾದ, ನಿತ್ಯನಾದ, ಸರ್ವಜ್ಞಾನಿಯಾದ, ಪವಿತ್ರನಾದ, ಅಧಿಪತಿಯೂ ಆಡಳಿತಗಾರನೂ ಆಗಿರುವ ಸರ್ವಸೃಷ್ಟಿಕರ್ತನಾದ ಒಬ್ಬನೇ ನಿಜದೇವರು ನಂಬಿಗಸ್ತನೂ ಸಕಲ ಸ್ತುತಿಗೆ ಮತ್ತು ಆರಾಧನೆಗೆ ಯೋಗ್ಯನೂ ಆಗಿದ್ದಾನೆ. ಎಲ್ಲಾ ಯುಗಗಳ ವಿಶ್ವಾಸಿಗಳಿಗೆ ಪ್ರೋತ್ಸಾಹ ನೀಡುವುದೇನಂದರೆ, ಯಾವುದೇ ಸಮಯದಲ್ಲಾಗಲೀ ಯಾವುದೇ ಸಂದರ್ಭದಲ್ಲಾಗಲೀ ಪರಲೋಕವನ್ನೂ ಸಿಂಹಾಸನದ ಮೇಲೆ ಕುಳಿತಿರುವಾತನನ್ನೂ ಸಂಪರ್ಕಿಸಲು ನಮಗೆ ಹಕ್ಕಿದೆ.

ಈ ವಾಕ್ಯಭಾಗದಲ್ಲಿರುವ **ಯಾವ** ವಿಷಯಗಳು ಇಂದಿಗೂ ಸಮಕಾಲೀನವಾಗಿವೆ?

ದೇವರು ಸರ್ವಶಕ್ತನೂ ಸರ್ವಾಧಿಕಾರಿಯೂ, ನಿತ್ಯನಾದವನೂ, ಸರ್ವಜ್ಞಾನಿಯೂ, ಪವಿತ್ರನೂ, ಅಧಿಪತಿಯೂ ಆಡಳಿತಗಾರನೂ ಸರ್ವಸೃಷ್ಟಿಕರ್ತನೂ ಆಗಿದ್ದಾನೆ.

ಅದು ನಮಗೆ ಇಂದು **ಏನನ್ನು** ತಿಳಿಸುತ್ತದೆ?

ನಾವು ಯೇಸುವಿನ ಮಾಂಸರಕ್ತಾರ್ಪಣೆಯನ್ನು ಸ್ವೀಕರಿಸಿಕೊಂಡಾಗ, ಆತ್ಮಿಕವಾಗಿ ನಾವು ಆತನ ಸನ್ನಿಧಿಗೆ ಪ್ರವೇಶಿಸಬಹುದು, ಪರಲೋಕದಲ್ಲಿರುವ ಆತನ ಸಿಂಹಾಸನಕ್ಕೆ ಯಾವಾಗಬೇಕಾದರೂ ಧೈರ್ಯದಿಂದ ಬರಬಹುದು. ಕಷ್ಟದ, ಬಂಧನದ ಮತ್ತು ಹಿಂಸೆಯ ಸಮಯಗಳಲ್ಲಿಯೂ ದೇವರು ಸರ್ವೋಚ್ಛ ಆಳ್ವಿಕೆ ನಡೆಸುತ್ತಾನೆ, ಮತ್ತು ಯಾವುದೇ ಸಮಯದಲ್ಲಾದರೂ ದೇವರು ನಮಗೆ ಸಮೀಪವಾಗಿರುತ್ತಾನೆ.

ಈ ಪಾಠದಿಂದ ನೀವು ದೇವರ ಬಗ್ಗೆ ತಿಳಿದುಕೊಳ್ಳುವಂಥ ಒಂದು ಅಂಶ **ಯಾವುದು**?

ದೇವರು ಸರ್ವಶಕ್ತನೂ, ಸರ್ವಾಧಿಕಾರಿಯೂ ಪರಿಶುದ್ಧನೂ ಆಗಿದ್ದಾನೆ - ಆತನೇ ಆಳುವವನೂ ಆಡಳಿತ ಮಾಡುವವನೂ ಆಗಿದ್ದಾನೆ, ಆತನೇ ಸೃಷ್ಟಿಕರ್ತನಾಗಿದ್ದಾನೆ, ಮತ್ತು ಆತನು ಎಲ್ಲಾ ಸ್ತುತಿಗೂ ಆರಾಧನೆಗೂ ಅರ್ಹನಾಗಿದ್ದಾನೆ. ಸಾಂಕೇತಿಕವಾಗಿ ಯೇಸು ಪರಲೋಕಕ್ಕೆ ಹೋಗುವ ದಾರಿಯೂ ತೆರೆದ ಬಾಗಿಲೂ ಆಗಿದ್ದಾನೆ.

## ಸಾಕ್ಷಿ ಹೇಳಿರಿ

ದೇವ ದರ್ಶನದ ಪಾಠಗಳಲ್ಲಿ ದೇವರು ತಮ್ಮೊಂದಿಗೆ ಮಾತಾಡಿದ್ದನ್ನು ಎರಡು ಅಥವಾ ಮೂರು ವಾಕ್ಯಗಳಲ್ಲಿ ತಿಳಿಸಲು ಪ್ರತಿಯೊಬ್ಬರಿಗೂ ಹೇಳಿರಿ.

ನಿಮ್ಮ ನಿಜವಾದ ಪ್ರತಿಕ್ರಿಯೆ/ಪ್ರಾರ್ಥನೆ **ಯಾವುದು**?

# ಪಾಠ 5: ದೇವರು ಎಷ್ಟೋ ಪ್ರೀತಿಸುವುದರಿಂದ

*ಜ್ಞಾನವು ಶಕ್ತಿ. ಆತನ ಪ್ರೀತಿಯ ಶಕ್ತಿಯನ್ನು ತಿಳಿದುಕೊಳ್ಳುವ ಬಗೆ*

## ಆರಂಭ ಪ್ರಾರ್ಥನೆ

ಪ್ರಾರ್ಥನೆಯ ಮೂಲಕ ಪಾಠವನ್ನು ಆರಂಭಿಸಲು ಒಬ್ಬರಿಗೆ ಹೇಳಿರಿ.

## ಆರಾಧನೆ

ದೇವರ ಪ್ರೀತಿಯನ್ನು ಪ್ರಕಟಿಸುವ ಎರಡು ಅಥವಾ ಮೂರು ಆರಾಧನಾ ಹಾಡುಗಳನ್ನು ನೀವೆಲ್ಲರೂ ಒಟ್ಟಿಗೆ ಆರಿಸಿಕೊಂಡು ಹಾಡಿರಿ.

## ಬೈಬಲ್ ಅಧ್ಯಯನ - ದೇವರ ಪ್ರೀತಿ

ನಾವು ಈಗಾಗಲೇ ಅಧ್ಯಯನ ಮಾಡಿದಂತೆ, ಸೃಷ್ಟಿಕರ್ತನಾದ ದೇವರು ಇದ್ದಾತನೂ ಈಗ ಇರುವಾತನೂ ಮುಂದೆ ಬರುವಾತನೂ ಆಗಿರುವ ಸಂಬಂಧ ಬಯಸುವ ದೇವರಾಗಿದ್ದಾನೆ. ದೇವರು ಎಲ್ಲವನ್ನೂ ಪ್ರೀತಿಯಿಂದ ಮಾಡುತ್ತಾನೆ, ಏಕೆಂದರೆ ದೇವರು ಬಹಳವಾಗಿ ಪ್ರೀತಿಸುತ್ತಾನೆ. ದೇವರ ಈ ಪ್ರೀತಿಯು ನಾವು ಅರ್ಥೈಸಿಕೊಳ್ಳಲಾರದಷ್ಟು ದೊಡ್ಡದು. ದೇವರ ಪ್ರೀತಿಯ ಕೆಲವು ಅಂಶಗಳನ್ನು ನಾವು ಆತನ ಗ್ರಂಥದಿಂದ ಅಂದರೆ ಆತನ ನಿಜಪ್ರೀತಿಯ ಗ್ರಂಥವಾದ ಬೈಬಲ್‌ನಿಂದ ಅಧ್ಯಯನ ಮಾಡೋಣ.

ಓದಿರಿ **1 ಕೊರಿಂಥದವರಿಗೆ 13:1-8**

ಬೈಬಲಿನ ಈ ಭಾಗವನ್ನು ಧ್ಯಾನ ಮಾಡಿರಿ ಮತ್ತು ಅದನ್ನು ಅನೇಕ ಸಲ ಓದಿರಿ.

## ಗುಂಪಾಗಿ ಚರ್ಚಿಸಿ

ಬೈಬಲಿನ ಈ ಭಾಗದ ಒಂದೊಂದು ವಚನದಲ್ಲಿ ಬರೆದಿರುವ ದೇವರ ಪ್ರೀತಿಯ ಅಂಶಗಳನ್ನು ಚರ್ಚಿಸಿ. ನಿಮಗೆ ಕೊಟ್ಟಿರುವ ಹಾಳೆಗಳ ಮೇಲೆ ಉತ್ತರಗಳನ್ನು ಬರೆಯಿರಿ.

**ವಚನ 4** ಅದು ತಾಳ್ಮೆಯುಳ್ಳದ್ದು (ಕೋಪಗೊಳ್ಳದೆ ದೀರ್ಘ ಕಾಲ ಕಾಯುತ್ತದೆ), ದಯೆಯುಳ್ಳದ್ದು, ಅಸೂಯೆ ಪಡುವುದಿಲ್ಲ, ಹೊಗಳಿಕೊಳ್ಳುವುದಿಲ್ಲ, ಗರ್ವಪಡುವುದಿಲ್ಲ.

**ವಚನ 5** ನಾಚಿಕೆಕರವಾದ ರೀತಿಯಲ್ಲಿ ವರ್ತಿಸುವುದಿಲ್ಲ; ಸ್ವಾರ್ಥಿಯಲ್ಲ ಮತ್ತು ಬೇಗನೆ ಕೋಪಗೊಳ್ಳುವುದಿಲ್ಲ; ತನಗಾದ ಅಪಕಾರಗಳನ್ನು ಜ್ಞಾಪಿಸಿಕೊಳ್ಳುವುದಿಲ್ಲ.

**ವಚನ 6** ಕೆಟ್ಟದ್ದರ ಬಗ್ಗೆ ಸಂತೋಷಪಡದೆ ಸತ್ಯದ ಬಗ್ಗೆ ಸಂತೋಷಪಡುತ್ತದೆ.

**ವಚನ 7** ಎಲ್ಲವನ್ನು ತಾಳ್ಮೆಯಿಂದ ಸ್ವೀಕರಿಸಿಕೊಳ್ಳುತ್ತದೆ; ಯಾವಾಗಲೂ ನಂಬುತ್ತದೆ; ಯಾವಾಗಲೂ ನಿರೀಕ್ಷಿಸುತ್ತದೆ; ಯಾವಾಗಲೂ ದೃಢವಾಗಿರುತ್ತದೆ.

**ವಚನ 8** ಪ್ರೀತಿ ಎಂದಿಗೂ ವಿಫಲವಾಗುವುದಿಲ್ಲ ಮತ್ತು ಎಂದಿಗೂ ಕೊನೆಗೊಳ್ಳುವುದಿಲ್ಲ.

ಈ ಪ್ರೀತಿಯ ಮೂಲ **ಯಾರು**? ಓದಿರಿ **1 ಯೋಹಾನ 4:7-10**

## ಗುಂಪಾಗಿ ಚರ್ಚಿಸಿ

ಬೈಬಲಿನ ಈ ಭಾಗದಲ್ಲಿ ಪ್ರಕಟಿಸಲ್ಪಟ್ಟಿರುವ ದೇವರ ಪ್ರೀತಿಯ ಕುರಿತಾಗಿ ಚರ್ಚಿಸಿ. ನಿಮಗೆ ಕೊಟ್ಟಿರುವ ಹಾಳೆಗಳ ಮೇಲೆ ಉತ್ತರಗಳನ್ನು ಬರೆಯಿರಿ.

ದೇವರು ನಮ್ಮನ್ನು ಎಷ್ಟೋಂದು ಪ್ರೀತಿಸುತ್ತಾನೆಂದರೆ, ತನ್ನ ಮಗನ ಮೂಲಕ ನಮಗೆ ಜೀವವನ್ನು ಕೊಡುವುದಕ್ಕಾಗಿ ನಮಗೆ ಬರತಕ್ಕ ದಂಡನೆಯನ್ನು ಆತನ ಮೇಲೆ ಹೊರಿಸಿ ಆತನನ್ನು ಮಾಂಸರಕ್ತಗಳ ಯಜ್ಞವನ್ನಾಗಿ ಅರ್ಪಿಸಲು ಆತನನ್ನು ಈ ಲೋಕಕ್ಕೆ ಕಳುಹಿಸಿದನು.

ಈ ವಾಕ್ಯಭಾಗವನ್ನು ನಾವು ತಪ್ಪಾಗಿ ಅರ್ಥೈಸಿಕೊಳ್ಳದಿರಲು ಸಹಾಯಕವಾದ ಈ ಕೆಳಕಂಡ ಪ್ರಶ್ನೆಗಳನ್ನು ವಾಕ್ಯದ ಕುರಿತಾಗಿ ಕೇಳಿರಿ:

ಈ ವಾಕ್ಯಭಾಗದಲ್ಲಿರುವ ವ್ಯಕ್ತಿಗಳು **ಯಾರು**? ಓದಿರಿ **1 ಯೋಹಾನ 4:7-10**

ಲೇಖಕನಾದ ಯೋಹಾನ, ವಿಶ್ವಾಸಿಗಳು (ಪ್ರಿಯರು), ಯೇಸು (ದೇವರ ಮಗ) ಮತ್ತು ದೇವರು.

ಮಾತಾಡುತ್ತಿರುವವರು **ಯಾರು**?

ಲೇಖಕನಾದ ಯೋಹಾನ.

ಅವನು **ಯಾರೊಂದಿಗೆ** ಮಾತಾಡುತ್ತಿದ್ದಾನೆ?

ಯೋಹಾನನು ಆ ಕಾಲದಲ್ಲಿದ್ದ ಮತ್ತು ಯುಗಯುಗಾಂತರಗಳಲ್ಲಿರುವ ವಿಶ್ವಾಸಿಗಳೊಂದಿಗೆ ಮಾತಾಡುತ್ತಿದ್ದಾನೆ.

ಈ ವ್ಯಕ್ತಿಗಳು **ಹೇಗೆ** ಒಬ್ಬರಿಗೊಬ್ಬರು ಮಾತಾಡುತ್ತಿದ್ದಾರೆ?

ಯೋಹಾನನು ವಿಶ್ವಾಸಿಗಳಿಗೆ ಪತ್ರ ಬರೆಯುತ್ತಾನೆ.

ಈ ಘಟನೆ **ಯಾವಾಗ** ಸಂಭವಿಸಿತು - ಯೇಸು ಮಾಂಸರಕ್ತಧಾರಿಯಾಗಿ ಬಂದು, ಶಿಲುಬೆ ಮೇಲೆ ಸತ್ತು, ಸಮಾಧಿಯಿಂದ ಎದ್ದುಬಂದು, ಮೇಲೋಕಕ್ಕೆ ಏರಿಹೋದದ್ದಕ್ಕಿಂತ ಮೊದಲೋ ಅಥವಾ ಏರಿಹೋದ ಮೇಲೋ?

ಯೇಸು ಮಾಂಸರಕ್ತಧಾರಿಯಾಗಿ ಬಂದು, ಶಿಲುಬೆ ಮೇಲೆ ಸತ್ತು, ಸಮಾಧಿಯಿಂದ ಎದ್ದುಬಂದು, ಮೇಲೋಕಕ್ಕೆ ಏರಿಹೋದ ಮೇಲೆ.

ಈ ವಾಕ್ಯಭಾಗವು **ಯಾಕೆ** ಬರೆಯಲ್ಪಟ್ಟಿದೆ? ಓದಿರಿ **1 ಯೋಹಾನ 1:1-4**

ಯೇಸು ಮಾಂಸರಕ್ತಧಾರಿಯಾಗಿ ಬಂದು, ಶಿಲುಬೆಯ ಮೇಲೆ ಸತ್ತು, ಸಮಾಧಿಯಿಂದ ಎದ್ದುಬಂದು, ಮೇಲೋಕಕ್ಕೆ ಏರಿಹೋದದ್ದಕ್ಕೆ ಲೇಖಕನಾದ ಯೋಹಾನನು ಕಣ್ಣಾರೆಕಂಡ ಸಾಕ್ಷಿಯಾಗಿದ್ದನು. ಆದ್ದರಿಂದ ಯೇಸುವಿನ ರಕ್ತಾರ್ಪಣೆಯನ್ನು ನಂಬಿ ಸ್ವೀಕರಿಸಿಕೊಂಡು ಪಾಪಕ್ಷಮೆ ಹೊಂದಿ ಶುದ್ಧರಾದ ವಿಶ್ವಾಸಿಗಳ ಸಂತೋಷವು ಪರಿಪೂರ್ಣವಾಗಲೆಂದು ಯೋಹಾನನು ಬರವಣಿಗೆಯ ಮೂಲಕ ಸಾಕ್ಷಿ ಕೊಡುತ್ತಿದ್ದಾನೆ.

ಈ ವಾಕ್ಯಭಾಗದಲ್ಲಿರುವ **ಯಾವ** ವಿಷಯಗಳು ಇಂದಿಗೂ ಸಮಕಾಲೀನವಾಗಿವೆ?

ದೇವರು, ಆತನ ನಿರಂತರವಾದ ಪ್ರೀತಿ, ಮತ್ತು ನಾವು ದೇವರಿಗೂ ಇತರರಿಗೂ ವಿರೋಧವಾಗಿ ಮಾತಾಡಿದ, ಯೋಚಿಸಿದ ಹಾಗೂ ಮಾಡಿದ ಪಾಪದ ಕ್ಷಮೆಗಾಗಿ ಆತನರ್ಪಿಸಿದ ಶಾಶ್ವತವಾದ ಯಜ್ಞ.

ಅದು ನಮಗೆ ಇಂದು **ಏನನ್ನು** ತಿಳಿಸುತ್ತದೆ?

ನಾವು ಯೇಸುವಿನ ಸ್ವಂತ ಮಾಂಸರಕ್ತಾರ್ಪಣೆಯನ್ನು ಸ್ವೀಕರಿಸಿದಾಗ, ನಾವು ಭೂತಕಾಲದಲ್ಲಿಯೂ ವರ್ತಮಾನ ಕಾಲದಲ್ಲಿಯೂ ಭವಿಷತ್ಕಾಲದಲ್ಲಿಯೂ ದೇವರಿಗೆ ಮತ್ತು ಇತರರಿಗೆ ವಿರೋಧವಾಗಿ ಮಾತಾಡಿದ, ಯೋಚಿಸಿದ ಮತ್ತು ಮಾಡಿದ ಪಾಪಕ್ಕೆ ಶಾಶ್ವತವಾದ ಕ್ಷಮೆಹೊಂದುತ್ತೇವೆ ಮತ್ತು ಆತ್ಮಿಕವಾಗಿ ಶುದ್ಧರಾಗುತ್ತೇವೆ. ದೇವರ ಪ್ರೀತಿ ನಿರಂತರವಾದದ್ದು. ದೇವರ ಪ್ರೀತಿಯು ನಾವು ಭರವಸೆ ಇಡತಕ್ಕದ್ದು.

ಈ ಪಾಠದಿಂದ ನೀವು ದೇವರ ಬಗ್ಗೆ ತಿಳಿದುಕೊಳ್ಳುವಂಥ ಒಂದು ಅಂಶ **ಯಾವುದು**?

ದೇವರು ಪ್ರೀತಿ ಸ್ವರೂಪನಾಗಿದ್ದಾನೆ, ಅದು ಪರಿಪೂರ್ಣ ಪ್ರೀತಿ.

## ಸಾಕ್ಷಿ ಹೇಳಿರಿ

ತಮ್ಮ ಮೇಲೆ ದೇವರಿಗಿರುವ ಪ್ರೀತಿಗೆ ಕೊನೆಯೇ ಇಲ್ಲ ಎಂಬುದನ್ನು ತಿಳಿದುಕೊಳ್ಳುವುದರ ಬಗ್ಗೆ ಅವರಿಗಾಗಿರುವ ಮನವರಿಕೆಯನ್ನು ಎರಡು ಅಥವಾ ಮೂರು ವಾಕ್ಯಗಳಲ್ಲಿ ಹಂಚಿಕೊಳ್ಳಲು ಪ್ರತಿಯೊಬ್ಬರಿಗೂ ಹೇಳಿರಿ.

ನಿಮ್ಮ ನಿಜವಾದ ಪ್ರತಿಕ್ರಿಯೆ/ಪ್ರಾರ್ಥನೆ **ಯಾವುದು**?

# ಪಾಠ 6: ತಂದೆಯ ಪ್ರೀತಿ

*ಯೇಸುವಿನಲ್ಲಿ ತನ್ನ ಸರ್ವಸಂಪೂರ್ಣತೆಯು ನೆಲಸಿರಬೇಕೆಂಬುದೂ, ಆತನ ಮೂಲಕವಾಗಿ ಸಮಸ್ತವನ್ನು ತನಗೆ ಸಂಧಾನಪಡಿಸಿಕೊಳ್ಳಬೇಕೆಂಬುದೂ ದೇವರ ಚಿತ್ತವಾಗಿತ್ತು.*

## ಆರಂಭ ಪ್ರಾರ್ಥನೆ

ಪ್ರಾರ್ಥನೆಯ ಮೂಲಕ ಪಾಠವನ್ನು ಆರಂಭಿಸಲು ಒಬ್ಬರಿಗೆ ಹೇಳಿರಿ.

## ಆರಾಧನೆ

ದೇವರ ಪ್ರೀತಿಯನ್ನು ಪ್ರಕಟಿಸುವ ಎರಡು ಅಥವಾ ಮೂರು ಆರಾಧನಾ ಹಾಡುಗಳನ್ನು ನೀವೆಲ್ಲರೂ ಒಟ್ಟಿಗೆ ಆರಿಸಿಕೊಂಡು ಹಾಡಿರಿ.

## ಬೈಬಲ್ ಅಧ್ಯಯನ

ಇದ್ದಾತನೂ ಈಗ ಇರುವಾತನೂ ಮುಂದೆ ಬರುವಾತನೂ ಆಗಿರುವ ದೇವರು ತನ್ನಲ್ಲಿ ಪರಿಪೂರ್ಣವಾದ ಸಾಮರಸ್ಯವನ್ನು ಹೊಂದಿದ್ದಾನೆ. ತಂದೆಯಾದ ದೇವರು, ಮಗನಾದ ಯೇಸು ಮತ್ತು ಪವಿತ್ರಾತ್ಮನು ಪರಿಪೂರ್ಣವಾಗಿ ಒಂದಾಗಿದ್ದಾರೆ, ಒಬ್ಬರಲ್ಲಿ ಮೂರು ವ್ಯಕ್ತಿಗಳಿದ್ದಾರೆ. ಒಬ್ಬನೇ ದೇವರು. ನಾವು ತಂದೆಯ ಪ್ರೀತಿಯನ್ನು ಆತನ ಗ್ರಂಥದಿಂದ ಅಂದರೆ ಆತನ ನಿಜಪ್ರೀತಿಯ ಗ್ರಂಥವಾದ ಬೈಬಲಿನಿಂದ ಅಧ್ಯಯನ ಮಾಡೋಣ.

ತಂದೆಯ ಪ್ರೀತಿ ಎಷ್ಟೋ ದೊಡ್ಡದಾಗಿರುವುದರಿಂದ ಆತನು ಸರ್ವಶ್ವವನ್ನು ಮಗನಿಗೆ ಕೊಡುತ್ತಾನೆ.

ಓದಿರಿ **ಕೊಲೊಸ್ಸೆಯವರಿಗೆ 1:19-20**

ಬೈಬಲಿನ ಈ ಭಾಗವನ್ನು ಧ್ಯಾನ ಮಾಡಿರಿ ಮತ್ತು ಅದನ್ನು ಅನೇಕ ಸಲ ಓದಿರಿ.

## ಗುಂಪಾಗಿ ಚರ್ಚಿಸಿ

ತಂದೆಯ ಪ್ರೀತಿಯ ಬಗ್ಗೆ ನೀವು ಬೈಬಲಿನ ಈ ಭಾಗದಲ್ಲಿ ಕಂಡುಕೊಂಡ ಅಂಶಗಳ ಕುರಿತು ಚರ್ಚಿಸಿ. ನಿಮಗೆ ಕೊಟ್ಟಿರುವ ಹಾಳೆಗಳ ಮೇಲೆ ಉತ್ತರಗಳನ್ನು ಬರೆಯಿರಿ.

ಯೇಸುವಿನಲ್ಲಿ ತನ್ನ ದೈವತ್ವದ ಸರ್ವಸಂಪೂರ್ಣತೆಯನ್ನು ಪ್ರಕಟಿಸಿ ಆತನ ಮಾಂಸರಕ್ತಾರ್ಪಣೆಯ ಮೂಲಕ ಸಮಸ್ತ ಸೃಷ್ಟಿಯಲ್ಲಿ ಸಮಾಧಾನವನ್ನು ಉಂಟುಮಾಡಿ ತನ್ನೊಂದಿಗೆ ಸಂಧಾನಪಡಿಸಿಕೊಳ್ಳಬೇಕೆಂಬುದು ದೇವರ ಮಹಾಚಿತ್ತವಾಗಿತ್ತು. ಯೇಸುವಿಲ್ಲದೆ ಪರಿಪೂರ್ಣ ಶಾಂತಿಯಿರಲು ಸಾಧ್ಯವಿಲ್ಲ.

ಈ ವಾಕ್ಯಭಾಗದಲ್ಲಿರುವ **ಯಾವ** ವಿಷಯಗಳು ಇಂದಿಗೂ ಸಮಕಾಲೀನವಾಗಿವೆ.

ದೇವರು - ಆತನ ಪ್ರೀತಿ, ಯೇಸುವಿನ ಮಾಂಸರಕ್ತಾರ್ಪಣೆಯಲ್ಲಿ ಪ್ರಕಟಗೊಂಡ ಆತನ ಸರ್ವಸಂಪೂರ್ಣತೆ. ಯೇಸುವಿಲ್ಲದೆ ಪರಿಪೂರ್ಣ ಶಾಂತಿಯಿರಲು ಸಾಧ್ಯವಿಲ್ಲ.

ಅದು ನಮಗೆ ಇಂದು ಏನನ್ನು ತಿಳಿಸುತ್ತದೆ? ಓದಿರಿ **ಕೊಲೊಸ್ಸೆಯವರಿಗೆ 1:21-22**

ನಾವು ಯೇಸುವಿನ ಮಾಂಸರಕ್ತಾರ್ಪಣೆಯನ್ನು ಸ್ವೀಕರಿಸಿಕೊಂಡಾಗ ಇನ್ನೆಂದಿಗೂ ನಾವು ದೇವರ ಶತ್ರುಗಳಾಗಿರುವುದಿಲ್ಲ. ದೇವರು ನಮ್ಮನ್ನು ನಮ್ಮ ಸ್ವಸ್ಥಿತಿಯಲ್ಲೇ ಸ್ವೀಕರಿಸಿಕೊಂಡದ್ದರಿಂದ ನಾವು ಆತನೊಂದಿಗೆ ಸಾಮರಸ್ಯವನ್ನೂ ಅನ್ಯೋನ್ಯತೆಯನ್ನೂ ಹೊಂದಿದವರಾಗಿದ್ದು ಆತನ ಸನ್ನಿಧಿಯಲ್ಲಿ ಪರಿಶುದ್ಧರೂ ನಿಷ್ಕಳಂಕರೂ ಆಗಿದ್ದೇವೆ. ನಾವು ದೇವರ ದೃಷ್ಟಿಯಲ್ಲಿ ದೋಷಾರೋಪಿಗಳಾಗಲು ಸಾಧ್ಯವೇ ಇಲ್ಲ.

ಓದಿರಿ **ಯೋಹಾನ 3:16-17**

ಬೈಬಲಿನ ಈ ಭಾಗವನ್ನು ಧ್ಯಾನ ಮಾಡಿರಿ ಮತ್ತು ಅದನ್ನು ಅನೇಕ ಸಲ ಓದಿರಿ.

## ಗುಂಪಾಗಿ ಚರ್ಚಿಸಿ

ತಂದೆಯ ಪ್ರೀತಿಯ ಬಗ್ಗೆ ನೀವು ಬೈಬಲಿನ ಈ ಭಾಗದಲ್ಲಿ ಕಂಡುಕೊಂಡ ಅಂಶಗಳ ಕುರಿತು ಚರ್ಚಿಸಿ. ನಿಮಗೆ ಕೊಟ್ಟಿರುವ ಹಾಳೆಗಳ ಮೇಲೆ ಉತ್ತರಗಳನ್ನು ಬರೆಯಿರಿ.

ತಂದೆಯ ಪ್ರೀತಿಯು ಎಷ್ಟೋ ದೊಡ್ಡದು. ಆತನು ನಮಗೆ ಯೇಸುವಿನ ಮೂಲಕ ಎಲ್ಲವನ್ನೂ ಕೊಟ್ಟನು. ಯೇಸು ನಮಗಾಗಿ ಮಾಂಸರಕ್ತಧಾರಿಯಾಗಿ ಬಂದು, ಶಿಲುಬೆಯ ಮೇಲೆ ಸತ್ತು, ಸಮಾಧಿಯೊಳಗಿಂದ ಎದ್ದುಬಂದು ಮೇಲೋಕಕ್ಕೆ ಏರಿಹೋದನು. ನಾವು ದೇವರ ಅಥವಾ ಜನರ ವಿರೋಧವಾಗಿ ಹೇಳಿದ, ಆಲೋಚಿಸಿದ ಅಥವಾ ಮಾಡಿದ ಎಲ್ಲಾ ದುಷ್ಕೃತ್ಯಗಳ ನಿಮಿತ್ತ ಇಡೀ ಲೋಕವನ್ನು ರಕ್ಷಿಸುವುದಕ್ಕಾಗಿ ದೇವರು ತನ್ನನ್ನೇ ಮಾಂಸರಕ್ತಗಳ ಯಜ್ಞವನ್ನಾಗಿ ಅರ್ಪಿಸಿದನು.

ಈ ವಾಕ್ಯಭಾಗದಲ್ಲಿರುವ **ಯಾವ** ವಿಷಯಗಳು ಇಂದಿಗೂ ಸಮಕಾಲೀನವಾಗಿವೆ?

ದೇವರು ಮತ್ತು ಆತನ ಪ್ರೀತಿ. ಕೆಟ್ಟತನ.

ಅದು ನಮಗೆ ಇಂದು **ಏನನ್ನು** ತಿಳಿಸುತ್ತದೆ? ಓದಿರಿ **ಯೋಹಾನ 3:18**

ನಾವು ನ್ಯಾಯತೀರ್ಪಿನಿಂದಲೂ ದಂಡನೆಯಿಂದಲೂ ಶಾಶ್ವತವಾಗಿ ರಕ್ಷಿಸಲ್ಪಟ್ಟಿದ್ದೇವೆ. ನಮಗೆ ಇನ್ನೆಂದಿಗೂ ದಂಡನೆಯ ತೀರ್ಪಾಗುವುದಿಲ್ಲ. ನಾವು ನಿತ್ಯಜೀವವನ್ನು ಹೊಂದಿದವರಾಗಿದ್ದೇವೆ.

ಓದಿರಿ **ಯೋಹಾನ 3:35**

ಬೈಬಲಿನ ಈ ಭಾಗವನ್ನು ಧ್ಯಾನ ಮಾಡಿರಿ ಮತ್ತು ಅದನ್ನು ಅನೇಕ ಸಲ ಓದಿರಿ.

## ಗುಂಪಾಗಿ ಚರ್ಚಿಸಿ

ತಂದೆಯ ಪ್ರೀತಿಯ ಬಗ್ಗೆ ನೀವು ಬೈಬಲಿನ ಈ ಭಾಗದಲ್ಲಿ ಕಂಡುಕೊಂಡ ಅಂಶಗಳ ಕುರಿತು ಚರ್ಚಿಸಿ. ನಿಮಗೆ ಕೊಟ್ಟಿರುವ ಹಾಳೆಗಳ ಮೇಲೆ ಉತ್ತರಗಳನ್ನು ಬರೆಯಿರಿ.

ತಂದೆಯ ಪ್ರೀತಿ ಎಷ್ಟೋ ದೊಡ್ಡದಾಗಿರುವುದರಿಂದ ಆತನು ಸರ್ವಸ್ವವನ್ನು ಮಗನಿಗೆ ಕೊಡುತ್ತಾನೆ.

ಈ ವಾಕ್ಯಭಾಗದಲ್ಲಿರುವ **ಯಾವ** ವಿಷಯಗಳು ಇಂದಿಗೂ ಸಮಕಾಲೀನವಾಗಿವೆ?

ದೇವರು, ಆತನ ಪ್ರೀತಿ ಮತ್ತು ಆತನ ಕೊಡುವ ಸ್ವಭಾವ.

ಅದು ನಮಗೆ ಇಂದು **ಏನನ್ನು** ತಿಳಿಸುತ್ತದೆ? ಓದಿರಿ **ಯೋಹಾನ 3:36**

ದೇವರ ಮಗನಾದ ಯೇಸುವನ್ನು ನಂಬುವವನು ನಿತ್ಯಜೀವವನ್ನು ಹೊಂದಿದ್ದಾನೆ.

ಓದಿರಿ **1 ಯೋಹಾನ 3:1**

ಬೈಬಲಿನ ಈ ಭಾಗವನ್ನು ಧ್ಯಾನ ಮಾಡಿರಿ ಮತ್ತು ಅದನ್ನು ಅನೇಕ ಸಲ ಓದಿರಿ.

## ಗುಂಪಾಗಿ ಚರ್ಚಿಸಿ

ತಂದೆಯ ಪ್ರೀತಿಯ ಬಗ್ಗೆ ನೀವು ಬೈಬಲಿನ ಈ ಭಾಗದಲ್ಲಿ ಕಂಡುಕೊಂಡ ಅಂಶಗಳ ಕುರಿತು ಚರ್ಚಿಸಿ. ನಿಮಗೆ ಕೊಟ್ಟಿರುವ ಹಾಳೆಗಳ ಮೇಲೆ ಉತ್ತರಗಳನ್ನು ಬರೆಯಿರಿ.

ದೇವರು ನಮ್ಮನ್ನು ಎಷ್ಟೋ ಪ್ರೀತಿಸಿ ಯೇಸುವಿನ ಮೂಲಕ ಎಲ್ಲವನ್ನೂ ನಮಗೆ ಕೊಟ್ಟಿದ್ದಾನೆ. ನಾವು ಆತನ ಮಗುವಾಗಿದ್ದೇವೆ. ನಮ್ಮ ತಂದೆಯಾಗಿರುವ ಆತನು ತನ್ನ ಸ್ವಂತ ಮಗನ ಮೇಲೆ ತನಗಿರುವ ಪ್ರೀತಿಗೆ ಸರಿಸಮವಾಗಿ ನಮ್ಮನ್ನೂ ಪ್ರೀತಿಸುತ್ತಾನೆ.

ಈ ವಾಕ್ಯಭಾಗದಲ್ಲಿರುವ **ಯಾವ** ವಿಷಯಗಳು ಇಂದಿಗೂ ಸಮಕಾಲೀನವಾಗಿವೆ?

ದೇವರು, ಆತನ ಪ್ರೀತಿ ಮತ್ತು ಯೇಸುವಿನ ಮಾಂಸರಕ್ತಾರ್ಪಣೆಯನ್ನು ನಂಬಿ ಸ್ವೀಕರಿಸಿಕೊಳ್ಳುವವರೆಲ್ಲರೂ ದೇವರ ಮಗುವಾಗಿದ್ದಾರೆ.

ಅದು ನಮಗೆ ಇಂದು **ಏನನ್ನು** ತಿಳಿಸುತ್ತದೆ?

ನಾವು ದೇವರ ಮಗುವಾಗಿದ್ದೇವೆ. ಆತನು ನಮ್ಮನ್ನು ನಮ್ಮ ಸ್ವಸ್ಥಿತಿಯಲ್ಲೇ ತನ್ನ ಕುಟುಂಬಕ್ಕೆ ಸ್ವೀಕರಿಕೊಂಡಿದ್ದಾನೆ. ಆತನು ನಮ್ಮನ್ನು ಶಾಶ್ವತವಾಗಿ ಪ್ರೀತಿಸುತ್ತಾನೆ.

ಓದಿರಿ **ಕೊಲೊಸ್ಸೆಯವರಿಗೆ 1:12-14**

ಬೈಬಲಿನ ಈ ಭಾಗವನ್ನು ಧ್ಯಾನ ಮಾಡಿರಿ ಮತ್ತು ಅದನ್ನು ಅನೇಕ ಸಲ ಓದಿರಿ.

## ಗುಂಪಾಗಿ ಚರ್ಚಿಸಿ

ತಂದೆಯ ಪ್ರೀತಿಯ ಬಗ್ಗೆ ನೀವು ಬೈಬಲಿನ ಈ ಭಾಗದಲ್ಲಿ ಕಂಡುಕೊಂಡ ಅಂಶಗಳ ಕುರಿತು ಚರ್ಚಿಸಿ. ನಿಮಗೆ ಕೊಟ್ಟಿರುವ ಹಾಳೆಗಳ ಮೇಲೆ ಉತ್ತರಗಳನ್ನು ಬರೆಯಿರಿ.

ತಂದೆಯು ನಮ್ಮನ್ನು ಎಷ್ಟೊಂದು ಪ್ರೀತಿಸುತ್ತಾನೆಂದರೆ, ಇದ್ದಾತನೂ ಈಗ ಇರುವಾತನೂ ಮುಂದೆ ಬರುವಾತನೂ ಆಗಿರುವ ತನ್ನ ಮಗನಾದ ಯೇಸುವಿನ ಮಾಂಸರಕ್ತಾರ್ಪಣೆಯ ಮೂಲಕ ಯೇಸುವಿನಲ್ಲಿರುವ ಎಲ್ಲವನ್ನು ಹೊಂದಿಕೊಳ್ಳಲು ನಮ್ಮನ್ನು ಯೋಗ್ಯರನ್ನಾಗಿ ಮಾಡಿದ್ದಾನೆ. ನಾವು ದೇವರ ಮಗುವಾಗಿರುವುದರಿಂದ ಕ್ರಿಸ್ತನಲ್ಲಿ ಬಾಧ್ಯಸ್ಥರಾಗಿದ್ದೇವೆ.

ಈ ವಾಕ್ಯಭಾಗದಲ್ಲಿರುವ **ಯಾವ** ವಿಷಯಗಳು ಇಂದಿಗೂ ಸಮಕಾಲೀನವಾಗಿವೆ?

ದೇವರು, ಆತನ ಪ್ರೀತಿ, ಆತನ ತ್ಯಾಗ ಸ್ವಭಾವ, ಆತನ ಮಗನ ಶಾಶ್ವತವಾದ ಮಾಂಸರಕ್ತಾರ್ಪಣೆ.

ಅದು ನಮಗೆ ಇಂದು **ಏನನ್ನು** ತಿಳಿಸುತ್ತದೆ?

ಇದ್ದಾತನೂ ಈಗ ಇರುವಾತನೂ ಮುಂದೆ ಬರುವಾತನೂ ಆಗಿರುವ ಯೇಸುವಿನ ಮೂಲಕ ಎಲ್ಲವನ್ನು ಹೊಂದಿಕೊಳ್ಳುತ್ತೇವೆ. ನಾವು ಅಂಧಕಾರದ ಶಕ್ತಿಗಳಿಂದ ಬಿಡುಗಡೆ ಹೊಂದಿದ್ದೇವೆ. ನಾವು ದೇವರ ರಾಜ್ಯದಲ್ಲಿದ್ದೇವೆ, ನಾವು ಬೆಳಕಿನ ರಾಜ್ಯದಲ್ಲಿದ್ದೇವೆ, ನಾವು ಯೇಸುವಿನೊಂದಿಗೆ ಬಾಧ್ಯಸ್ಥರಾಗಿದ್ದೇವೆ.

ಈ ಪಾಠದಿಂದ ನೀವು ದೇವರ ಬಗ್ಗೆ ತಿಳಿದುಕೊಳ್ಳುವಂಥ ಒಂದು ಅಂಶ **ಯಾವುದು**?

ತಂದೆಯ ಪ್ರೀತಿ.

## ಸಾಕ್ಷಿ ಹೇಳಿರಿ

ತಂದೆಯು ತಮ್ಮನ್ನು ಎಷ್ಟೊಂದು ಪ್ರೀತಿಸುತ್ತಾನೆಂಬುದನ್ನು ತಿಳಿದುಕೊಳ್ಳುವುದರ ಬಗ್ಗೆ ಅವರಿಗಾಗಿರುವ ಮನವರಿಕೆಯನ್ನು ಎರಡು ಅಥವಾ ಮೂರು ವಾಕ್ಯಗಳಲ್ಲಿ ಹಂಚಿಕೊಳ್ಳಲು ಪ್ರತಿಯೊಬ್ಬರಿಗೂ ಹೇಳಿರಿ.

ನಿಮ್ಮ ನಿಜವಾದ ಪ್ರತಿಕ್ರಿಯೆ/ಪ್ರಾರ್ಥನೆ **ಯಾವುದು**?

# ಪಾಠ 7: ಮಗನ ಪ್ರೀತಿ

*ದೇವರು ನಮಗೆ ತನ್ನ ಪ್ರೀತಿಯ ಮೂಲಕ ವೈಯಕ್ತಿಕವಾದನು, ಆದ್ದರಿಂದ ನಾವು ಆತನೊಂದಿಗೆ ಪ್ರೀತಿಯಲ್ಲಿ ಸಂಬಂಧಿಕರಾಗಿರಬಹುದು.*

## ಆರಂಭ ಪ್ರಾರ್ಥನೆ

ಪ್ರಾರ್ಥನೆಯ ಮೂಲಕ ಪಾಠವನ್ನು ಆರಂಭಿಸಲು ಒಬ್ಬರಿಗೆ ಹೇಳಿರಿ.

## ಆರಾಧನೆ

ಯೇಸುವಿನ ಮಾಂಸರಕ್ತಾರ್ಪಣೆಯನ್ನು ಪ್ರಕಟಿಸುವ ಎರಡು ಅಥವಾ ಮೂರು ಆರಾಧನಾ ಹಾಡುಗಳನ್ನು ನೀವೆಲ್ಲರೂ ಒಟ್ಟಿಗೆ ಆರಿಸಿಕೊಂಡು ಹಾಡಿರಿ.

## ಬೈಬಲ್ ಅಧ್ಯಯನ

ಇದ್ದಾತನೂ ಈಗ ಇರುವಾತನೂ ಮುಂದೆ ಬರುವಾತನೂ ಆಗಿರುವ ದೇವರು ತನ್ನಲ್ಲಿ ಪರಿಪೂರ್ಣವಾದ ಸಾಮರಸ್ಯವನ್ನು ಹೊಂದಿದ್ದಾನೆ. ತಂದೆಯಾದ ದೇವರು, ಮಗನಾದ ಯೇಸು ಮತ್ತು ಪವಿತ್ರಾತ್ಮನು ಪರಿಪೂರ್ಣವಾಗಿ ಒಂದಾಗಿದ್ದಾರೆ. ಒಬ್ಬರಲ್ಲಿ ಮೂರು ವ್ಯಕ್ತಿಗಳಿದ್ದಾರೆ. ಒಬ್ಬನೇ ದೇವರು. ನಾವು ದೇವರ ಮಗನಾದ ಯೇಸುವಿನ ಪ್ರೀತಿಯ ಸಂಬಂಧದ ಅಧ್ಯಯನ ಮಾಡೋಣ.

ಯೇಸುವಿನ ಪ್ರೀತಿ ಎಷ್ಟೋ ದೊಡ್ಡದು. ಆತನು ನಮಗಾಗಿ ಮಾಂಸರಕ್ತಾರ್ಪಣೆಯಾಗಲು ಎಲ್ಲವನ್ನೂ ಬಿಟ್ಟುಕೊಟ್ಟನು. ಹೀಗಿರಲು ಪ್ರತಿದಿನ ಆತನ ಪ್ರೀತಿಯನ್ನು ವೈಯಕ್ತಿಕವಾಗಿ ತಿಳಿದುಕೊಳ್ಳುವುದರಿಂದ ಸರ್ವ ಪರಿಪೂರ್ಣವಾದ ಜೀವನ, ಪ್ರೀತಿ, ಸತ್ಯ ಮತ್ತು ಶಕ್ತಿಗಳನ್ನು ದೇವರಾಗಿರುವ ಆತನಿಂದ ಹೊಂದಿಕೊಳ್ಳಲು ನಮಗೆ ಅನುಕೂಲವಾಗುತ್ತದೆ.

ಓದಿರಿ **ಯೋಹಾನ 10:14-18**

ಬೈಬಲಿನ ಈ ಭಾಗವನ್ನು ಧ್ಯಾನ ಮಾಡಿರಿ ಮತ್ತು ಅದನ್ನು ಅನೇಕ ಸಲ ಓದಿರಿ.

## ಗುಂಪಾಗಿ ಚರ್ಚಿಸಿ

ಯೇಸುವಿನ ಪ್ರೀತಿಯ ಬಗ್ಗೆ ನೀವು ಬೈಬಲಿನ ಈ ಭಾಗದಲ್ಲಿ ಕಂಡುಕೊಂಡ ಅಂಶಗಳ ಕುರಿತು ಚರ್ಚಿಸಿ. ನಿಮಗೆ ಕೊಟ್ಟಿರುವ ಹಾಳೆಗಳ ಮೇಲೆ ಉತ್ತರಗಳನ್ನು ಬರೆಯಿರಿ.

ಯೇಸುವಿನ ಪ್ರೀತಿ ಎಷ್ಟೋ ದೊಡ್ಡದು. ಯೇಸುವಿಗೆ ತನ್ನ ಸ್ವಂತ ಪ್ರಾಣವನ್ನು ಕೊಡಲು ಅಥವಾ ಕೊಡದಿರಲು ಅಧಿಕಾರವಿತ್ತು. ಆದರೂ ಆತನು ತನ್ನ ಸ್ವಂತ ಪ್ರಾಣವನ್ನು ಕೊಡಲು ನಿರ್ಧರಿಸಿದನು, ಯಾಕಂದರೆ ಅದು ತಂದೆಯ ಚಿತ್ತವಾಗಿತ್ತು. ದೇವರು ನಮನ್ನು ಎಷ್ಟೋ ಪ್ರೀತಿಸುವುದರಿಂದ ತನ್ನಲ್ಲಿದ್ದ ಎಲ್ಲವನ್ನೂ ಕೊಟ್ಟುಬಿಟ್ಟನು. ಯೇಸು ಎಲ್ಲವನ್ನೂ ಬಿಟ್ಟುಕೊಟ್ಟು ನಮಗೋಸ್ಕರ ಮಾಂಸರಕ್ತಧಾರಿಯಾಗಿ ಬಂದು, ಶಿಲುಬೆಯ ಮೇಲೆ ಸತ್ತು, ಸಮಾಧಿಯಿಂದ ಎದ್ದುಬಂದು ಮೇಲೋಕಕ್ಕೆ ಏರಿಹೋಗಲು ನಿರ್ಧರಿಸಿದನು. ನಾವು ದೇವರ ಅಥವಾ ಜನರ ವಿರೋಧವಾಗಿ ಹೇಳಿದ, ಆಲೋಚಿಸಿದ ಅಥವಾ ಮಾಡಿದ ಎಲ್ಲಾ ದುಷ್ಕೃತ್ಯಗಳ ನಿಮಿತ್ತ ಇಡೀ ಲೋಕವನ್ನು ರಕ್ಷಿಸುವುದಕ್ಕಾಗಿ ದೇವರು ತನ್ನನ್ನೇ ಮಾಂಸರಕ್ತಗಳ ಯಜ್ಞವನ್ನಾಗಿ ಅರ್ಪಿಸಿದನು. ಯೇಸು ನಮಗೆ ದಿನದಿನವೂ ತನ್ನ ಪುನರುತ್ಥಾನದ ಜೀವವನ್ನೂ, ಪ್ರೀತಿಯನ್ನೂ, ಸತ್ಯವನ್ನೂ ಮತ್ತು ದುಷ್ಟಾತ್ಮಗಳ ಹಾಗೂ ನಮ್ಮ ಶರೀರದ ಮೇಲೆ ಶಕ್ತಿಯನ್ನೂ ಅಧಿಕಾರವನ್ನೂ ಕೊಡುತ್ತಾನೆ.

## ಸಾಕ್ಷಿ ಹೇಳಿರಿ

ಯೇಸು ತಮಗೆ ಒಳ್ಳೆಯ ಕುರುಬನಾಗಿದ್ದಾನೆ ಎಂಬುದನ್ನು ತಿಳಿದುಕೊಳ್ಳುವುದರ ಬಗ್ಗೆ ಅವರಿಗಾಗಿರುವ ಮನವರಿಕೆಯನ್ನು ಎರಡು ಅಥವಾ ಮೂರು ವಾಕ್ಯಗಳಲ್ಲಿ ಹಂಚಿಕೊಳ್ಳಲು ಪ್ರತಿಯೊಬ್ಬರಿಗೂ ಹೇಳಿರಿ.

ಓದಿರಿ **ಕೀರ್ತನೆ 23**

ಬೈಬಲಿನ ಈ ಭಾಗವನ್ನು ಧ್ಯಾನ ಮಾಡಿರಿ ಮತ್ತು ಅದನ್ನು ಅನೇಕ ಸಲ ಓದಿರಿ.

## ಗುಂಪಾಗಿ ಚರ್ಚಿಸಿ

ಒಳ್ಳೆಯ ಕುರುಬನಾಗಿರುವ ಯೇಸು ನಿಮಗಾಗಿ ಮಾಡುವುದನ್ನು ಚರ್ಚಿಸಿ. ನಿಮಗೆ ಕೊಟ್ಟಿರುವ ಹಾಳೆಗಳ ಮೇಲೆ ಉತ್ತರಗಳನ್ನು ಬರೆಯಿರಿ.

ಯೇಸು ಯಾವಾಗಲೂ ನನಗೆ ಬೇಕಾದ ಎಲ್ಲವನ್ನೂ ಒದಗಿಸುತ್ತಾನೆ.

ಯೇಸು ನನಗೆ ವಿಶ್ರಾಂತಿಯನ್ನೂ ಆಹಾರವನ್ನೂ ಕೊಡುತ್ತಾನೆ.

ಯೇಸು ನನ್ನನ್ನು ಪುನಃಶ್ಚೇತನಗೊಳಿಸುತ್ತಾನೆ ಮತ್ತು ನನಗೆ ಜೀವಜಲವನ್ನು ಕೊಡುತ್ತಾನೆ.

ಯೇಸು ನನ್ನ ಆತ್ಮ, ಮನಸ್ಸು ಮತ್ತು ದೇಹವನ್ನು ಪುನರ್‌ಸ್ಥಾಪಿಸುತ್ತಾನೆ ಮತ್ತು ನವೀಕರಿಸುತ್ತಾನೆ.

ಯೇಸು ತನ್ನ ಹೆಸರಿಗೆ ತಕ್ಕಂತೆ ನನ್ನನ್ನು ತನ್ನ ನ್ಯಾಯನೀತಿಗಳಲ್ಲಿ ನಡೆಸುವನು.

ನಾನು ಕಾರ್ಗತ್ತಲಿನ ಕಣಿವೆಯಲ್ಲಿ ನಡೆಯುವಾಗಲೂ ಯೇಸು ನನ್ನೊಂದಿಗಿರುವುದರಿಂದ ನನಗೆ ಭಯವಿಲ್ಲ.

ಯೇಸು ನನ್ನನ್ನು ತನ್ನ ಪ್ರೀತಿಯಿಂದಲೂ ನನಗೊಂದಿಗೆ ತನಗಿರುವ ಸಂಬಂಧದಿಂದಲೂ ತನ್ನ ಸರ್ವಶಕ್ತಿಯಿಂದಲೂ ಮತ್ತು ತನ್ನ ಸರ್ವಾಧಿಕಾರದಿಂದಲೂ ಸಂತೈಸುತ್ತಾನೆ.

ಯೇಸು ನನ್ನ ವೈರಿಗಳ ಎದುರಿನಲ್ಲಿ ನನಗೆ ಔತಣವನ್ನು ಸಿದ್ಧಪಡಿಸುವನು. ಯೇಸು ನನ್ನನ್ನು ತನ್ನ ಗೌರವಾನ್ವಿತ ಅತಿಥಿಯನ್ನಾಗಿ ಮಾಡುವನು.

ಯೇಸು ನನ್ನನ್ನು ತನ್ನ ನಿರಂತರವಾದ ಸಮೃದ್ಧಿಯಿಂದಲೂ ತನ್ನೆಲ್ಲಾ ಸುವರಗಳಿಂದಲೂ ಅಭಿಷೇಕಿಸುತ್ತಾನೆ.

ನಿಶ್ಚಯವಾಗಿ ನನ್ನ ಜೀವಮಾನವೆಲ್ಲಾ ಮಾಂಸರಕ್ತದ ಈ ಶರೀರದಲ್ಲಿರುವಾಗ ದೇವರ ಕೃಪೆಯು ನನ್ನೊಂದಿಗಿರುತ್ತದೆ. ಎಂದೆಂದಿಗೂ ನಾನು ದೇವರೊಂದಿಗೆ ಜೀವಿಸುವೆ.

ಈ ವಾಕ್ಯಭಾಗದಲ್ಲಿರುವ **ಯಾವ** ವಿಷಯಗಳು ಇಂದಿಗೂ ಸಮಕಾಲೀನವಾಗಿವೆ?

ಯೇಸು ತನ್ನ ಕುರಿಗಳಿಗಾಗಿ ತನ್ನನ್ನೇ ನಿರಂತರವಾಗಿ ಕೊಡುವ ಒಳ್ಳೆಯ ಕುರುಬನಾಗಿದ್ದಾನೆ.

ಅದು ನಮಗೆ ಇಂದು **ಏನನ್ನು** ತಿಳಿಸುತ್ತದೆ?

ಯೇಸುವಿನ ವ್ಯಕ್ತಿತ್ವದಿಂದ, ಆತನು ಮಾಡಿರುವ ಮತ್ತು ಮಾಡುತ್ತಿರುವ ಕಾರ್ಯಗಳಿಂದ ಹಾಗೂ ನೆರವೇರಿಸಲಿರುವ ವಾಗ್ದಾನಗಳಿಂದ ನಾವು ಯೇಸುವಿನಲ್ಲಿ ವಿಶ್ರಾಂತಿಯಿಂದಿರಬಹುದು.

ಈ ವಾಕ್ಯಭಾಗದಿಂದ ನೀವು ದೇವರ ಬಗ್ಗೆ ತಿಳಿದುಕೊಳ್ಳುವಂಥ ಒಂದು ಅಂಶ **ಯಾವುದು**?

ಯೇಸುವಿನಲ್ಲಿರುವ ದೇವರು ನಮ್ಮನ್ನು ಬಹಳವಾಗಿ ಪ್ರೀತಿಸುವುದರಿಂದ ತಾನಾಗಿಯೇ ಎಲ್ಲವನ್ನು ನಮಗೆ ಕೊಡುತ್ತಾನೆ.

ಯೇಸುವಿನಲ್ಲಿರುವ ದೇವರ ಈ ಪ್ರೀತಿಯು **ಎಷ್ಟು** ಪ್ರಬಲವಾಗಿದೆ? ಓದಿರಿ **ರೋಮ್‌ನಗರದವರಿಗೆ 8:38-39**

ಯೇಸುವಿನಲ್ಲಿ ನಮಗಾಗಿ ತೋರಿಬಂದ ದೇವರ ಪ್ರೀತಿಯು ನಮ್ಮ ಬಲಹೀನತೆಗಳನ್ನೂ ದುಷ್ಟತನವನ್ನೂ ಮೊದಲುಗೊಂಡು ಎಲ್ಲದ್ದಕ್ಕಿಂತಲೂ ಮಹತ್ತರವಾದದ್ದು ಮತ್ತು ಪ್ರಬಲವಾದದ್ದು.

ನಿಮ್ಮ ನಿಜವಾದ ಪ್ರತಿಕ್ರಿಯೆ/ಪ್ರಾರ್ಥನೆ **ಯಾವುದು**?

# ಪಾಠ 8: ಪವಿತ್ರಾತ್ಮನ ಪ್ರೀತಿ

*ಆತ್ಮನೂ ವಧುವೂ, “ಬಾ!” ಎನ್ನುತ್ತಾರೆ. ಇದನ್ನು ಕೇಳುವವರೆಲ್ಲರೂ, “ಬಾ!” ಎಂದು ಹೇಳಬೇಕು. ಬಾಯಾರಿದವರು ನನ್ನ ಬಳಿಗೆ ಬರಲಿ; ಅವರಿಗೆ ಇಷ್ಟವಿದ್ದರೆ ಜೀವಜಲವನ್ನು ಉಚಿತವಾಗಿ ಪಡೆದುಕೊಳ್ಳಲಿ.*

## ಆರಂಭ ಪ್ರಾರ್ಥನೆ

ಪ್ರಾರ್ಥನೆಯ ಮೂಲಕ ಪಾಠವನ್ನು ಆರಂಭಿಸಲು ಒಬ್ಬರಿಗೆ ಹೇಳಿರಿ.

## ಆರಾಧನೆ

ದೇವರ ಪ್ರೀತಿಯನ್ನು ಪ್ರಕಟಿಸುವ ಎರಡು ಅಥವಾ ಮೂರು ಆರಾಧನಾ ಹಾಡುಗಳನ್ನು ನೀವೆಲ್ಲರೂ ಒಟ್ಟಿಗೆ ಆರಿಸಿಕೊಂಡು ಹಾಡಿರಿ.

## ಬೈಬಲ್ ಅಧ್ಯಯನ

ಇದ್ದಾತನೂ ಈಗ ಇರುವಾತನೂ ಮುಂದೆ ಬರುವಾತನೂ ಆಗಿರುವ ದೇವರು ತನ್ನಲ್ಲಿ ಪರಿಪೂರ್ಣವಾದ ಸಾಮರಸ್ಯವನ್ನು ಹೊಂದಿದ್ದಾನೆ. ತಂದೆಯಾದ ದೇವರು, ಮಗನಾದ ಯೇಸು ಮತ್ತು ಪವಿತ್ರಾತ್ಮನು ಪರಿಪೂರ್ಣವಾಗಿ ಒಂದಾಗಿದ್ದಾರೆ, ಒಬ್ಬರಲ್ಲಿ ಮೂರು ವ್ಯಕ್ತಿಗಳಿದ್ದಾರೆ. ಒಬ್ಬನೇ ದೇವರು. ನಾವು ಪವಿತ್ರಾತ್ಮನ ಪ್ರೀತಿಯ ಸಂಬಂಧವನ್ನು ಅಧ್ಯಯನ ಮಾಡೋಣ.

ದೇವರ ಪ್ರೀತಿಯು ಎಷ್ಟೋ ದೊಡ್ಡದಾಗಿದ್ದು ನಮ್ಮ ಗ್ರಹಿಕೆಯನ್ನು ಮೀರಿದೆ. ಪವಿತ್ರಾತ್ಮನ ಪ್ರೀತಿ ಎಂದಿಗೂ ತನ್ನ ಬಗ್ಗೆ ಹೇಳಿಕೊಳ್ಳುವುದಿಲ್ಲ. ಅದರಬದಲಾಗಿ ಆತನು ಪ್ರಕಟಿಸುತ್ತಾನೆ, ದೃಢಪಡಿಸುತ್ತಾನೆ, ರೂಪಾಂತರಗೊಳಿಸುತ್ತಾನೆ ಮತ್ತು ನಮ್ಮೊಳಗೆ ನೆಲಸಿರುತ್ತಾನೆ. ಇದರಿಂದಾಗಿ ನಾವು ತಂದೆಯ ಪ್ರೀತಿಯನ್ನು ಮತ್ತು ಮಗನಾದ ಯೇಸುವಿನ ಪ್ರೀತಿಯನ್ನು ವೈಯಕ್ತಿಕವಾಗಿಯೂ ಶಕ್ತಿಯುತವಾಗಿಯೂ ಮತ್ತು ಆತ್ಮೀಯವಾಗಿಯೂ ಅನುಭವಿಸುತ್ತೇವೆ.

ಪವಿತ್ರಾತ್ಮನು **ಯಾರ** ಬಗ್ಗೆ ಸಾಕ್ಷಿ ಕೊಡುತ್ತಾನೆ ಮತ್ತು ಯಾರನ್ನು ಮಹಿಮೆ ಪಡಿಸುತ್ತಾನೆ? ಓದಿರಿ **ಯೋಹಾನ 16:13-15**

ಯೇಸು.

ದೇವರ ಪ್ರೀತಿಯು ವೈಯಕ್ತಿಕವಾಗಿ, ಶಕ್ತಿಯುತವಾಗಿ ಮತ್ತು ಆತ್ಮೀಯವಾಗಿ ನಮ್ಮ ಹೃದಯಗಳಲ್ಲಿ ಹೇಗೆ ಸುರಿಯಲ್ಪಟ್ಟಿದೆ?

ಓದಿರಿ **ರೋಮ್‌ನಗರದವರಿಗೆ 5:5-8**

ನಮ್ಮೊಳಗೆ ನೆಲಸಿರುವ ಪವಿತ್ರಾತ್ಮನಿಂದ.

ಓದಿರಿ **ರೋಮ್‌ನಗರದವರಿಗೆ 8:14-16**

ಬೈಬಲಿನ ಈ ಭಾಗವನ್ನು ಧ್ಯಾನ ಮಾಡಿರಿ ಮತ್ತು ಅದನ್ನು ಅನೇಕ ಸಲ ಓದಿರಿ.

## ಗುಂಪಾಗಿ ಚರ್ಚಿಸಿ

ಪವಿತ್ರಾತ್ಮನ ಪ್ರೀತಿಯ ಬಗ್ಗೆ ನೀವು ಬೈಬಲಿನ ಈ ಭಾಗದಲ್ಲಿ ಕಂಡುಕೊಂಡ ಅಂಶಗಳ ಕುರಿತು ಚರ್ಚಿಸಿ. ನಿಮಗೆ ಕೊಟ್ಟಿರುವ ಹಾಳೆಗಳ ಮೇಲೆ ಉತ್ತರಗಳನ್ನು ಬರೆಯಿರಿ.

ದೇವರ ಪ್ರೀತಿ ತುಂಬಾ ದೊಡ್ಡದಾಗಿದೆ. ನಾವು ಯೇಸುವಿನ ಉಚಿತ ಉಡುಗೊರೆಯನ್ನು ಸ್ವೀಕರಿಸಿಕೊಳ್ಳುವಾಗ, ಯೇಸುವಿನ ಆತ್ಮವನ್ನೂ ದೇವರ ಆತ್ಮವನ್ನೂ ಪವಿತ್ರಾತ್ಮನನ್ನೂ ನಮ್ಮೊಳಗೆ ಸ್ವೀಕರಿಸಿಕೊಳ್ಳುತ್ತೇವೆ. ನಾವು ದೇವರ ಮಕ್ಕಳು; ದೇವರು ನಮ್ಮ ಪ್ರೀತಿಯ ತಂದೆ.

ಎಲ್ಲಾ ವಿಶ್ವಾಸಿಗಳು ‘ದೇವರ ಮಕ್ಕಳಾಗಿದ್ದಾರೆ’ (ಪುರುಷರು ಮತ್ತು ಸ್ತ್ರೀಯರು), ಏಕೆಂದರೆ ಅವರು ಆತನ ಆತ್ಮನನ್ನು ಸ್ವೀಕರಿಸಿಕೊಂಡಿದ್ದಾರೆ. ‘ದೇವರ ಮಕ್ಕಳು’ ಎಂಬ ಪದಗಳು ಬಾಧ್ಯಸ್ಥರಾಗಿ ನಾವು ಹೊಂದಿಕೊಂಡ ದೇವರೊಂದಿಗಿನ ಸಂಬಂಧವನ್ನು ತಿಳಿಸುತ್ತವೆ. ಈ ಬಾಧ್ಯಸ್ಥಿಕೆಯು ರಾಜಮನೆತನದ

ಚೊಚ್ಚಲ ಮಗನಿಗೆ ಇರುವಂತದ್ದಾಗಿದ್ದು, ಚೊಚ್ಚಲ ಮಗನಿಗಿರುವ ಎಲ್ಲಾ ನ್ಯಾಯಬದ್ಧ ಹಕ್ಕುಗಳನ್ನು ಹೊಂದಿದೆ. ಆದ್ದರಿಂದ ನಾವು ದೇವರ ರಾಜ್ಯದ ಅರಸನಾದ ಯೇಸುವಿನೊಂದಿಗೆ ಸರಿಸಮಾನವಾದ ಮನೆತನದವರಾಗುತ್ತೇವೆ.

## ಸಾಕ್ಷಿ ಹೇಳಿರಿ

ತಾವು ದೇವರ ಮಗು (ರಾಜಮನೆತನದ ಚೊಚ್ಚಲು ಮಗ) ಎಂಬುದನ್ನು ತಿಳಿದುಕೊಳ್ಳುವುದರ ಬಗ್ಗೆ ಅವರಿಗಾಗಿರುವ ಮನವರಿಕೆಯನ್ನು ಎರಡು ಅಥವಾ ಮೂರು ವಾಕ್ಯಗಳಲ್ಲಿ ತಿಳಿಸಲು ಪ್ರತಿಯೊಬ್ಬರಿಗೂ ಹೇಳಿರಿ.

ಈ ವಾಕ್ಯಭಾಗದಿಂದ ನೀವು ದೇವರ ಬಗ್ಗೆ ತಿಳಿದುಕೊಳ್ಳುವಂಥ ಒಂದು ಅಂಶ **ಯಾವುದು**?

ಯೇಸುವಿನಲ್ಲಿರುವ ದೇವರು ನಮಗೆ ಎಲ್ಲವನ್ನು ತಾನೇ ಕೊಡುತ್ತಾನೆ. ದೇವರು ನಮ್ಮನ್ನು ಎಷ್ಟೋ ಪ್ರೀತಿಸುವುದರಿಂದ ದೇವರ ಮಕ್ಕಳೆಂದು ನಮ್ಮ ಬಗ್ಗೆ ಸಾಕ್ಷಿಕೊಡುವ ತನ್ನ ಆತ್ಮನನ್ನು ನಮಗೆ ಕೊಡುತ್ತಾನೆ.

ನಿಮ್ಮ ನಿಜವಾದ ಪ್ರತಿಕ್ರಿಯೆ/ಪ್ರಾರ್ಥನೆ **ಯಾವುದು**?

# ಪಾಠ 9: ನನ್ನ ಸ್ವಸ್ಥಿತಿಯಲ್ಲೇ ಸ್ವೀಕಾರ

*ಆತನ ಪ್ರೀತಿಯು ನನ್ನನ್ನು ಕಂಡುಕೊಂಡಿತು. ನನ್ನ ಸ್ವಸ್ಥಿತಿಯಲ್ಲೇ ಸ್ವೀಕರಿಸಿಕೊಂಡಿತು. ನಿತ್ಯಜೀವ ಕೊಟ್ಟಿತು. ಜೀವನವು ಸರ್ವ ಸಂಪೂರ್ಣಗೊಂಡಿತು.*

*ನಾನು ಶಾಶ್ವತವಾಗಿ ಬದಲಾದೆನು. 'ಇರುವಾತನೇ' ಎಂಬ ಮಹಾದೇವರಿಂದ.*


## ಆರಂಭ ಪ್ರಾರ್ಥನೆ

ಪ್ರಾರ್ಥನೆಯ ಮೂಲಕ ಪಾಠವನ್ನು ಆರಂಭಿಸಲು ಒಬ್ಬರಿಗೆ ಹೇಳಿರಿ.

## ಆರಾಧನೆ

ನನ್ನ ಸ್ವಸ್ಥಿತಿಯಲ್ಲೇ ದೇವರು ನನ್ನನ್ನು ಸ್ವೀಕರಿಸಿಕೊಂಡನು ಎಂಬ ಎರಡು ಅಥವಾ ಮೂರು ಆರಾಧನಾ ಹಾಡುಗಳನ್ನು ನೀವೆಲ್ಲರೂ ಒಟ್ಟಿಗೆ ಆರಿಸಿಕೊಂಡು ಹಾಡಿರಿ.

## ನಾಲ್ಕು ಕಾರ್ಡ್‌ಗಳ ಚಿತ್ರಪಾಠ



**ಹಂತ 1:** ಪ್ರತಿಯೊಬ್ಬರೂ ಒಂದು ಖಾಲಿ ಕಾಗದದ ಹಾಳೆಯನ್ನು ತೆಗೆದುಕೊಂಡು ಅದನ್ನು ನಾಲ್ಕು ತುಂಡುಗಳಾಗಿ ಕತ್ತರಿಸಲಿ. ಪ್ರತಿಯೊಬ್ಬ ವ್ಯಕ್ತಿಯು ತಮ್ಮ ಕಾರ್ಡ್‌ನ ಮುಂಭಾಗದಲ್ಲಿ ಕೆಳಗೆ ಪಟ್ಟಿ ಮಾಡಲಾದ ಪ್ರತಿಯೊಂದು ಅಂಶವನ್ನು ಪ್ರತಿನಿಧಿಸುವ ಚಿತ್ರವನ್ನು ಬರೆಯಲಿ.

ಕಾರ್ಡ್ 1 = ನಾನೇ. ಕಾರ್ಡ್ 2 = ನನ್ನ ಕುಟುಂಬ. ಕಾರ್ಡ್ 3 = ನನ್ನ ಶಿಕ್ಷಣ. ಕಾರ್ಡ್ 4 = ನನ್ನ ಗ್ರಾಮ.

**ಹಂತ 2:** ಪ್ರತಿಯೊಬ್ಬ ವ್ಯಕ್ತಿಯು ತಮ್ಮ ನಾಲ್ಕು ಕಾರ್ಡ್‌ಗಳ ಹಿಂಭಾಗದಲ್ಲಿ ಸರಳ ರೇಖಾಚಿತ್ರಗಳ ಮತ್ತು ಪದಗಳ ಮೂಲಕ ತಮ್ಮನ್ನು, ತಮ್ಮ ಕುಟುಂಬವನ್ನು, ತಮ್ಮ ಶಾಲೆಯನ್ನು ಮತ್ತು ತಮ್ಮ ಸಮುದಾಯವನ್ನು ವಿವರಿಸಬೇಕು. ಕಾರ್ಡ್‌ಗಳ ಮೇಲೆ ತಮ್ಮ ಹೆಸರುಗಳನ್ನು ಬರೆಯಬೇಕಿಲ್ಲ.

ಕಾರ್ಡ್ 1: ನನ್ನ ಬಗ್ಗೆ ನನಗೇನನಿಸುತ್ತದೆ? (ಸಂತೋಷದ ಅಥವಾ ದುಃಖದ ಮುಖಚಿತ್ರವನ್ನು ಬರೆಯಿರಿ.) ನನ್ನನ್ನು ಪ್ರೀತಿಸುತ್ತಾರೆ ಎಂದು ನನಗನಿಸುತ್ತಿದೆಯೇ? ನನ್ನ ಸಮಾಜವು ನನ್ನನ್ನು ಒಪ್ಪಿಕೊಂಡಿದೆ ಎಂದು ನನಗನಿಸುತ್ತಿದೆಯೇ? ನಾನು ಯಾವುದರಲ್ಲಿ ಉತ್ತಮನಾಗಿದ್ದೇನೆ? ನಾನು ಏನು ಮಾಡಲು ಇಷ್ಟಪಡುತ್ತೇನೆ? ನನ್ನ ನೆಚ್ಚಿನ ಪ್ರಾಣಿ ಯಾವುದು? ನನ್ನ ನೆಚ್ಚಿನ ಆಹಾರ ಯಾವುದು? ನನ್ನ ಕನಸುಗಳು ಯಾವುವು? ನಾನು ಯಾವುದಕ್ಕೆ ಹೆದರುತ್ತೇನೆ?

ಕಾರ್ಡ್ 2: ನನ್ನ ಕುಟುಂಬದಲ್ಲಿ ಯಾರಿದ್ದಾರೆ? ನನ್ನ ಕುಟುಂಬದ ಆರೋಗ್ಯ ಹೇಗಿದೆ? ನನ್ನ ಕುಟುಂಬ ಯಾವ ದೇವರನ್ನು ನಂಬಿದ್ದಾರೆ? ನನ್ನ ಮೇಲೆ ಯಾರ್ಯಾರಿಗೆ ಅಧಿಕಾರವಿದೆ? (ಸಂತೋಷದ ಅಥವಾ ದುಃಖದ ಮುಖಚಿತ್ರವನ್ನು ಬರೆಯಿರಿ.)

ಕಾರ್ಡ್ 3: ನನ್ನ ಜೀವನದ ಬಗ್ಗೆ ನನಗೇನನಿಸುತ್ತದೆ? (ಸಂತೋಷದ ಅಥವಾ ದುಃಖದ ಮುಖಚಿತ್ರವನ್ನು ಬರೆಯಿರಿ.) ನಾನು ಮಗುವಾಗಿದ್ದಾಗ ನಾನು ಕಲಿತ ಒಂದು ಅಂಶ ಯಾವುದು? ನನಗೆ ಅದನ್ನು ಕಲಿಸಿದ ವ್ಯಕ್ತಿ ಹೇಗಿದ್ದರು? ಕಲಿಯಲು ನನಗೆ ಇಷ್ಟವಾಗಿದ್ದ ಪಾಠ ಅಥವಾ ವಿಷಯ ಯಾವುದು? ಕಲಿಯಲು ಕಷ್ಟವಾಗಿದ್ದ ಪಾಠ ಅಥವಾ ವಿಷಯ ಯಾವುದು? ಕಲಿಯಲು ಸುಲಭವಾಗಿದ್ದ ಪಾಠ ಅಥವಾ ವಿಷಯ ಯಾವುದು? ನನಗೆ ಸುರಕ್ಷಿತವಲ್ಲದ ಸ್ಥಳಗಳು ಎಲ್ಲಿವೆ? ನನಗೆ ಸುರಕ್ಷಿತವಾಗಿರುವ ಸ್ಥಳಗಳು ಎಲ್ಲಿವೆ?

ಕಾರ್ಡ್ 4: ನಾನು ವಾಸಿಸುವ ಸ್ಥಳದ ಯಾವುದರ ಬಗ್ಗೆ ನಾನು ಇಷ್ಟಪಡುತ್ತೇನೆ? ನಾನು ವಾಸಿಸುವ ಸ್ಥಳದ ಯಾವುದರ ಬಗ್ಗೆ ನನಗಿಷ್ಟವಿಲ್ಲ? ನಾನು ವಾಸಿಸುವ ಸ್ಥಳದಲ್ಲಿ ಹಿರಿಯರು ಏನು ಮಾಡುತ್ತಾರೆ? ಹಿರಿಯರು ನನಗೆ ಹೇಗೆ ಸಹಾಯ ಮಾಡುತ್ತಾರೆ?

**ಹಂತ 3:** ಪ್ರತಿಯೊಬ್ಬರು ತಮ್ಮ ಕಾರ್ಡ್‌ಗಳ ಮೇಲೆ ಮಾಹಿತಿಯನ್ನು ಬರೆದ ನಂತರ ಅವರು ನಿಮಗೆ ಕಾರ್ಡ್‌ಗಳನ್ನು ಕೊಡಲಿ. ಪ್ರತಿಯೊಬ್ಬರ ನಾಲ್ಕು ಕಾರ್ಡ್‌ಗಳು ಒಟ್ಟಿಗೆ ಇರಲಿ.

**ಹಂತ 4:** ಪ್ರತಿಯೊಬ್ಬರಿಗೂ ಅವರಲ್ಲದ ನಾಲ್ಕು ಕಾರ್ಡ್‌ಗಳನ್ನು ಕೊಡಿರಿ. ಪ್ರತಿಯೊಬ್ಬರ ಗುರುತು ರಹಸ್ಯವಾಗಿರಲಿ. ಅವು ಯಾರ ಕಾರ್ಡುಗಳೆಂದು ಯಾರಿಗೂ ಗೊತ್ತಾಗಬಾರದು.

**ಹಂತ 5:** ಪ್ರತಿಯೊಬ್ಬ ವ್ಯಕ್ತಿಯು ತಮಗೆ ನೀಡಲಾದ ನಾಲ್ಕು ಕಾರ್ಡ್‌ಗಳಲ್ಲಿರುವುದನ್ನು ಗುಂಪಿನೊಂದಿಗೆ ಹೇಳಿಕೊಳ್ಳಲಿ.

## ಗುಂಪಾಗಿ ಚರ್ಚಿಸಿ

ಪ್ರತಿಯೊಂದು ಗುಂಪಿನ ಕಾರ್ಡ್‌ಗಳ ಫಲಿತಾಂಶಗಳನ್ನು ಚರ್ಚಿಸಿ. ನಿಮಗೆ ಕೊಟ್ಟಿರುವ ಹಾಳೆಗಳ ಮೇಲೆ ಉತ್ತರಗಳನ್ನು ಬರೆಯಿರಿ.

ತಮ್ಮ ಬಗ್ಗೆ ಮತ್ತು ತಮ್ಮ ಸಂದರ್ಭಗಳ ಬಗ್ಗೆ ಪ್ರತಿಯೊಬ್ಬರಿಗಿರುವ ಭಾವನೆಗಳಿಗೂ ಈ ಚಿತ್ರಮಾದರಿಗಳಿಗೂ ಇರುವ ಹೋಲಿಕೆಗಳು **ಯಾವುವು**?

ಪ್ರತಿಯೊಬ್ಬರ ನಡುವೆ ಇರುವ ಕೆಲವು ವ್ಯತ್ಯಾಸಗಳು **ಯಾವುವು**?

ಬೇರೆಯವರು ನಮ್ಮನ್ನು ಒಪ್ಪಿಕೊಳ್ಳಬೇಕೆಂದು ನಾವು ಬಯಸುತ್ತೇವೆ. ಬೇರೆಯವರು ನಮ್ಮನ್ನು ಪ್ರೀತಿಸಬೇಕೆಂದು ನಾವು ಬಯಸುತ್ತೇವೆ. ನಾವು ಬೇರೆಯವರ ಒಪ್ಪಿಗೆ ಅಥವಾ ಪ್ರೀತಿಯನ್ನು ಬಯಸಿದಾಗ, ನಮ್ಮನ್ನು ನಿಯಂತ್ರಿಸುವ ಶಕ್ತಿಯು ಅವರಿಗೂ ನಮ್ಮ ಪರಿಸ್ಥಿತಿಗೂ ಇರುತ್ತದೆ.

ಓದಿರಿ **ಆದಿಕಾಂಡ 29:31-35**

## ಗುಂಪಾಗಿ ಚರ್ಚಿಸಿ

ಲೇಯಾ ಮತ್ತು ದೇವರ ಬಗ್ಗೆ ನೀವು ಕಂಡುಕೊಂಡ ಅಂಶಗಳನ್ನು ಚರ್ಚಿಸಿ. ನಿಮಗೆ ಕೊಟ್ಟಿರುವ ಹಾಳೆಗಳ ಮೇಲೆ ಉತ್ತರಗಳನ್ನು ಬರೆಯಿರಿ.

**ವಚನ 31** ಲೇಯಾ ಬಗ್ಗೆ ದೇವರಿಗೆ ಏನು ಗೊತ್ತಿತ್ತು?

ಅವಳು ಪ್ರೀತಿಸಲ್ಪಡಲಿಲ್ಲ.

**ವಚನ 32** ಗಂಡು ಮಗುವನ್ನು ಪಡೆದದ್ದರಿಂದ ಲೇಯಾ ಯಾವುದನ್ನು ಬಯಸಿದಳು?

ಅವಳ ಗಂಡನ ಪ್ರೀತಿಯನ್ನು.

**ವಚನ 33** ಗಂಡು ಮಗುವನ್ನು ಪಡೆದದ್ದರಿಂದ ಲೇಯಾಳ ಗಂಡ ಆಕೆಯನ್ನು ಪ್ರೀತಿಸಿದನೇ? ಇಲ್ಲ.

**ವಚನ 34** ಮೂರು ಗಂಡು ಮಕ್ಕಳನ್ನು ಪಡೆದ ನಂತರ ಲೇಯಾಳ ಗಂಡ ಅವಳನ್ನು ಪ್ರೀತಿಸಿದನೇ? ಇಲ್ಲ.

**ವಚನ 35** ನಾಲ್ಕು ಗಂಡು ಮಕ್ಕಳನ್ನು ಪಡೆದ ನಂತರ ಲೇಯಾ ಏನು ಹೇಳಿದಳು?

ಈಗ ನಾನು ಕರ್ತನನ್ನು ಸ್ತುತಿಸುತ್ತೇನೆ.

ನಾವು ಬೇರೆಯವರ ಪ್ರೀತಿಗೆ ಮತ್ತು ಒಪ್ಪಿಗೆಗೆ ಪಾತ್ರರಾಗುವುದರ ಅಗತ್ಯತೆಯನ್ನು ದೇವರು ನೋಡುತ್ತಿರುತ್ತಾನೆ. ಲೇಯಾಳ ಮನದಾಸೆಯಂತೆ ದೇವರು ಅವಳಿಗೆ ಗಂಡು ಮಗುವನ್ನು ದಯಪಾಲಿಸಿ ತಾನು ಅವಳನ್ನು ಎಷ್ಟೊಂದು ಪ್ರೀತಿಸುವುದಾಗಿ ತೋರಿಸಿಕೊಟ್ಟನು. ಪ್ರಾಚೀನ ಇಸ್ರೇಲಿನ ಹನ್ನೆರಡು ಕುಲಗಳಲ್ಲಿ ಅವಳ ನಾಲ್ಕನೆಯ ಮಗನೂ ಒಂದು ಕುಲವಾಗಿದ್ದು, ಆ ಕುಲದಲ್ಲಿಯೇ ಯೇಸು ಮಾಂಸರಕ್ತಧಾರಿಯಾಗಿ ಈ ಲೋಕಕ್ಕೆ ಬಂದನು.

ನಾವು ದೇವರಿಂದ ಎಷ್ಟೊಂದು ಪ್ರೀತಿಸಲ್ಪಟ್ಟಿದ್ದೇವೆ ಎಂಬುದನ್ನೂ ಆತನು ನಮ್ಮನ್ನು ಸ್ವೀಕರಿಸಿಕೊಳ್ಳುವುದನ್ನೂ ನಾವು ಆತನ ದೃಷ್ಟಿಯಲ್ಲಿ ಎಷ್ಟು ಸುಂದರವಾಗಿದ್ದೇವೆ ಎಂಬುದನ್ನೂ ಜಗತ್ಸುತ್ತಿಗೆ ಮೊದಲೇ ಆತನು ತನ್ನ ಚಿತ್ತಕ್ಕನುಸಾರವಾಗಿ ನಮ್ಮನ್ನು ಆರಿಸಿಕೊಂಡಿರುವುದನ್ನೂ ತಿಳಿದುಕೊಂಡಾಗ, ಜನರ ಪ್ರೀತಿಯನ್ನಾಗಲೀ ಅನುಮೋದನೆಯನ್ನಾಗಲೀ ನಾವು ನಿರೀಕ್ಷಿಸದೆ ನಿಜವಾಗಿಯೂ ಸ್ವತಂತ್ರರಾಗುತ್ತೇವೆ. ಅಲ್ಲದೆ ದೇವರ ಪ್ರೀತಿ ಮತ್ತು ಅನುಮೋದನೆಗಳೇ ಸಾಕೆಂದು ತಿಳಿದುಕೊಂಡವರಾಗಿ ಜೀವಿಸುತ್ತೇವೆ.

ನಾವು ನಮ್ಮ ಸ್ವಸ್ಥಿತಿಯಲ್ಲೇ ಸ್ವೀಕರಿಸಲ್ಪಟ್ಟಿದ್ದೇವೆಂದು ತಿಳಿದುಕೊಂಡಾಗ **ಏನು** ಮಾಡಲು ಶಕ್ತರಾಗುತ್ತೇವೆ?
ಓದಿರಿ **ರೋಮ್‌ನಗರದವರಿಗೆ 15:7**

ನಾವು ನಮ್ಮ ಸ್ವಸ್ಥಿತಿಯಲ್ಲಿ ಸ್ವೀಕರಿಸಲ್ಪಟ್ಟಂತೆ ಇತರರನ್ನು ಸ್ವೀಕರಿಸಿಕೊಳ್ಳಲು ಶಕ್ತರಾಗುತ್ತೇವೆ.

ಈ ಪಾಠದಲ್ಲಿ ನೀವು ದೇವರ ಬಗ್ಗೆ ಕಲಿತುಕೊಂಡ ಒಂದು ವಿಷಯ **ಯಾವುದು**?
ಓದಿರಿ **ಅಪೊಸ್ತಲರ ಕಾರ್ಯಗಳು 10:34**

ದೇವರು ಎಲ್ಲರನ್ನು ಅವರವರ ಸ್ವಸ್ಥಿಯಲ್ಲಿಯೇ ಸ್ವೀಕರಿಸಿಕೊಳ್ಳುತ್ತಾನೆ. ಆತನು ನನ್ನನ್ನು ನನ್ನ ಸ್ವಸ್ಥಿತಿಯಲ್ಲಿಯೇ ಸ್ವೀಕರಿಸಿಕೊಳ್ಳುತ್ತಾನೆ.

ನಿಮ್ಮ ನಿಜವಾದ ಪ್ರತಿಕ್ರಿಯೆ/ಪ್ರಾರ್ಥನೆ **ಯಾವುದು**?

# ಪಾಠ 10: ಆತ್ಮನಿಂದ ಹುಟ್ಟಿದ - ಸ್ವಭಾವ

*ದೇವರು: ಮಾಂಸರಕ್ತಧಾರಿಗಳಾಗಿ ಹುಟ್ಟಿದವರೆಲ್ಲರೂ ಆತ್ಮನಿಂದ ಹುಟ್ಟಿದ ಮಾಂಸರಕ್ತಧಾರಿಗಳಾಗಲೆಂದು ಸ್ವತಃ ತಾನೇ ಅವರೆಲ್ಲರಿಗೋಸ್ಕರ ಮಾಂಸರಕ್ತಾರ್ಪಣೆಯಾಗಲು ಮಾಂಸರಕ್ತಧಾರಿಯಾಗಿ ಬಂದ ಆತ್ಮನು.*

## ಆರಂಭ ಪ್ರಾರ್ಥನೆ

ಪ್ರಾರ್ಥನೆಯ ಮೂಲಕ ಪಾಠವನ್ನು ಆರಂಭಿಸಲು ಒಬ್ಬರಿಗೆ ಹೇಳಿರಿ.

## ಆರಾಧನೆ

ನಾನು ಆತ್ಮನಿಂದ ಹುಟ್ಟಿದ ದೇವರ ಮಗನೆಂದು ಪ್ರಕಟಿಸುವ ಎರಡು ಅಥವಾ ಮೂರು ಆರಾಧನಾ ಹಾಡುಗಳನ್ನು ನೀವೆಲ್ಲರೂ ಒಟ್ಟಿಗೆ ಆರಿಸಿಕೊಂಡು ಹಾಡಿರಿ.

## ಬೈಬಲ್ ಅಧ್ಯಯನ

ನಾವು ಕಲಿತುಕೊಂಡಂತೆ, ಯೇಸುವಿನ ಮಾಂಸರಕ್ತಾರ್ಪಣೆಯನ್ನು ಸ್ವೀಕರಿಸಿಕೊಳ್ಳುವ ಎಲ್ಲ ವಿಶ್ವಾಸಿಗಳು ದೇವರ ಆತ್ಮವನ್ನು ಅಂದರೆ ಪವಿತ್ರಾತ್ಮನನ್ನು ಸ್ವೀಕರಿಸಿಕೊಳ್ಳುವರು. ನಾವು ಸ್ವಾಸ್ಥ್ಯವನ್ನು ಹೊಂದಿಕೊಳ್ಳುವ ಸಮಯ ಇದಾಗಿದೆ. ದೇವರ ಮಗುವಾದ ನಾವು (ರಾಜಮನೆತನದಲ್ಲಿ ಹುಟ್ಟಿದ ಚೊಚ್ಚಲ ಮಗನಾಗಿ), ಯೇಸುವಿನೊಂದಿಗೆ ಬಾಧ್ಯಸ್ಥರಾಗಿದ್ದು ಕೆಡುಕನು ಹಾಳುಮಾಡಿರುವ ಈ ಭೂಮಿಯ ಪ್ರಪಂಚದಲ್ಲಿರುವ ದೇವರ ರಾಜ್ಯದಲ್ಲಿ ವಾಸಿಸುತ್ತಿದ್ದೇವೆ.

ದೇವರು ನಮ್ಮನ್ನು ಪ್ರೀತಿಸುವುದರಿಂದ ನಮ್ಮಲ್ಲಿ ಒಬ್ಬನಾಗಲು ಇಚ್ಛಿಸಿದನು. ಇತಿಹಾಸದ ಆ ಕ್ಷಣದಲ್ಲಿ ಯೇಸು ಪವಿತ್ರಾತ್ಮನ ಪ್ರಭಾವದ ಮೂಲಕ ಸ್ತ್ರೀಯಲ್ಲಿ ಮಾಂಸರಕ್ತಧಾರಿಯಾಗಿ ಜನಿಸಿದನು. ಹೀಗಿರಲಾಗಿ ಮಾಂಸರಕ್ತಧಾರಿಗಳಾಗಿ ಹುಟ್ಟಿದ ನಾವು ಯೇಸುವಿನ ಪರಿಪೂರ್ಣವಾದ ಶಾಶ್ವತ ಮಾಂಸರಕ್ತಾರ್ಪಣೆಯನ್ನು ನಂಬಿ ಸ್ವೀಕರಿಸಿಕೊಳ್ಳುವುದರ ಮೂಲಕ ಆತ್ಮನಿಂದ ಹುಟ್ಟಿದವರಾಗುತ್ತೇವೆ.

ಓದಿರಿ **ಯೋಹಾನ 1:12-13**

ಮಾಂಸರಕ್ತಧಾರಿಯಾಗಿ ಹುಟ್ಟಿದ ಮನುಷ್ಯನು ಯಾಕೆ ಆತ್ಮನಿಂದ ಹುಟ್ಟಬೇಕೆಂಬುದನ್ನು ದೇವರ ಇತಿಹಾಸದಿಂದ ಅಂದರೆ ಆತನ ನಿಜಪ್ರೀತಿಯ ಇತಿಹಾಸವಾದ ಬೈಬಲ್‌ನಿಂದ ಅಧ್ಯಯನ ಮಾಡೋಣ.

ಓದಿರಿ **1 ಕೊರಿಂಥದವರಿಗೆ 15:47-51**

ಬೈಬಲಿನ ಈ ಭಾಗವನ್ನು ಧ್ಯಾನ ಮಾಡಿರಿ ಮತ್ತು ಅದನ್ನು ಅನೇಕ ಸಲ ಓದಿರಿ.

## ಗುಂಪಾಗಿ ಚರ್ಚಿಸಿ

ಬೈಬಲಿನ ಈ ಭಾಗದಲ್ಲಿರುವ ಮೊದಲನೆ ಮನುಷ್ಯನ (ಮಾಂಸರಕ್ತಧಾರಿಯಾಗಿ ಹುಟ್ಟಿದವನ) ಬಗ್ಗೆ ಮತ್ತು ಎರಡನೆಯ ಮನುಷ್ಯ (ಆತ್ಮನಿಂದ ಮಾಂಸರಕ್ತಧಾರಿಯಾಗಿ ಹುಟ್ಟಿದ ಯೇಸುವಿನ) ಬಗ್ಗೆ ನೀವು ಕಂಡುಕೊಂಡವುಗಳನ್ನು ಚರ್ಚಿಸಿ. ನಿಮಗೆ ಕೊಟ್ಟಿರುವ ಹಾಳೆಗಳ ಮೇಲೆ ಉತ್ತರಗಳನ್ನು ಬರೆಯಿರಿ.

ಮೊದಲ ಮನುಷ್ಯ **ಯಾವುದರಿಂದ** ಮಾಡಲ್ಪಟ್ಟನು?

ಧೂಳಿನಿಂದ.

ಯೇಸುವಿನ ಮಾಂಸರಕ್ತಾರ್ಪಣೆಯನ್ನು ಸ್ವೀಕರಿಸಿಕೊಳ್ಳುವ ಮೊದಲು ನಾವು **ಯಾರ** ಚಿತ್ರಣವನ್ನು, ಹೋಲಿಕೆಯನ್ನು ಮತ್ತು ಸ್ವಭಾವವನ್ನು ಹೊಂದಿದ್ದೆವು?

ಮೊದಲನೆ ಮನುಷ್ಯ - ಧೂಳಿನ ಮನುಷ್ಯ.

ಯೇಸುವಿನ ಮಾಂಸರಕ್ತಾರ್ಪಣೆಯನ್ನು ಸ್ವೀಕರಿಸಿಕೊಂಡ ಮೇಲೆ ನಾವು **ಯಾರ** ಚಿತ್ರಣವನ್ನು, ಹೋಲಿಕೆಯನ್ನು ಮತ್ತು ಸ್ವಭಾವವನ್ನು ಹೊಂದಿದ್ದೇವೆ?

ಎರಡನೆಯ ಮನುಷ್ಯ - ಸ್ವರ್ಗದಿಂದ ಬಂದ ಕರ್ತನಾದ ಯೇಸು.

ನಾವು ಸ್ವಾಸ್ಥ್ಯವನ್ನು ಹೊಂದಿಕೊಳ್ಳುವ ಸಮಯ ಇದಾಗಿದೆ. ದೇವರಾತ್ಮನ ಅಂದರೆ ಪವಿತ್ರಾತ್ಮನ ಪ್ರಭಾವದಿಂದ ದೇವರ ಮಗುವಾಗಿ ಮಾಂಸರಕ್ತಧಾರಿಯಾಗಿ ಹುಟ್ಟಿದ ಯೇಸುವಿನ (ರಾಜಮನೆತನದಲ್ಲಿ ಹುಟ್ಟಿದ ಚೊಚ್ಚಲ ಮಗನ) ಸ್ವಭಾವವನ್ನು ಹೊಂದಿರುವ ನಾವು ಯೇಸುವಿನೊಂದಿಗೆ ಬಾಧ್ಯಸ್ಥರಾಗಿದ್ದು ಕೆಡುಕನು ಹಾಳುಮಾಡಿರುವ ಈ ಭೂಮಿಯ ಪ್ರಪಂಚದಲ್ಲಿರುವ ದೇವರ ರಾಜ್ಯದಲ್ಲಿ ವಾಸಿಸುತ್ತಿದ್ದೇವೆ.

ಓದಿರಿ **1 ಕೊರಿಂಥದವರಿಗೆ 15:50-55**

ಬೈಬಲಿನ ಈ ಭಾಗವನ್ನು ಧ್ಯಾನ ಮಾಡಿರಿ ಮತ್ತು ಅದನ್ನು ಅನೇಕ ಸಲ ಓದಿರಿ.

## ಗುಂಪಾಗಿ ಚರ್ಚಿಸಿ

ಧೂಳಿನಿಂದ ಮಾಡಿದ (ಮಾಂಸರಕ್ತಧಾರಿಯಾಗಿ ಹುಟ್ಟಿದ) ಮನುಷ್ಯನ ಸ್ವಭಾವದ ಬಗ್ಗೆ ಮತ್ತು ಆತ್ಮಸ್ವರೂಪನಾದ (ಮಾಂಸರಕ್ತಧಾರಿಯಾದ) ಯೇಸುವಿನ ಸ್ವಭಾವದ ಬಗ್ಗೆ ನೀವು ಬೈಬಲಿನ ಈ ಭಾಗದಲ್ಲಿ ಕಂಡುಕೊಂಡ ಅಂಶಗಳ ಕುರಿತು ಚರ್ಚಿಸಿ. ನಿಮಗೆ ಕೊಟ್ಟಿರುವ ಹಾಳೆಗಳ ಮೇಲೆ ಉತ್ತರಗಳನ್ನು ಬರೆಯಿರಿ.

ಮಾಂಸರಕ್ತಧಾರಿಯಾಗಿ ಹುಟ್ಟಿದ ಮನುಷ್ಯನ ಸ್ವರೂಪ ಮತ್ತು ಸ್ವಭಾವ **ಯಾವುದು**?

ಹಾಳಾಗಿದೆ, ಅಪ್ರಾಮಾಣಿಕವಾಗಿದೆ, ನಾಶವಾಗುತ್ತಿದೆ ಮತ್ತು ಸಾಯತಕ್ಕದ್ದಾಗಿದೆ.

ಯೇಸುವಿನ ಸ್ವರೂಪ ಮತ್ತು ಸ್ವಭಾವ **ಯಾವುದು**?

ಎಂದೂ ಹಾಳಾಗಿಲ್ಲ, ಪ್ರಾಮಾಣಿಕವಾದದ್ದು, ಶಾಶ್ವತವಾದದ್ದು ಮತ್ತು ಜೀವಿಸತಕ್ಕದ್ದು.

ಮೊದಲ ಮನುಷ್ಯನು ಕೆಡುಕನ ಮೋಸವನ್ನು ಮತ್ತು ಒಳಿತುಕೆಡುಕಗಳ ಜ್ಞಾನವನ್ನು ಅರ್ಥೈಸಿಕೊಳ್ಳಲು, ಅದರಲ್ಲಿ ಪಾಲ್ಗೊಳ್ಳಲು ಮತ್ತು ಹೊಂದಿಕೊಳ್ಳಲು ಇಚ್ಛಿಸಿ ಹಾಳಾದನು. ಇದರ ಪರಿಣಾಮವಾಗಿ ಅವನ ಸ್ವಭಾವದಲ್ಲಿ ಹುಟ್ಟಿದವರೆಲ್ಲರೂ ಹಾಳಾಗಿದ್ದಾರೆ. ಎರಡನೆಯ ಮನುಷ್ಯನಾದ ಯೇಸು ಪವಿತ್ರಾತ್ಮನ ಎಂದೂ ಹಾಳಾಗಿಲ್ಲದ ಸ್ವಭಾವದಿಂದ ಸ್ತ್ರೀಯಲ್ಲಿ ಮಾಂಸರಕ್ತಧಾರಿಯಾಗಿ ಜನಿಸಿದನು. ಆದ್ದರಿಂದ ಯೇಸು ಪರಿಪೂರ್ಣವಾದ ಮಾಂಸರಕ್ತಾರ್ಪಣೆಯಾಗಿದ್ದಾನೆ.

ಓದಿರಿ **ರೋಮ್‌ನಗರದವರಿಗೆ 5:14-19**

ಬೈಬಲಿನ ಈ ಭಾಗವನ್ನು ಧ್ಯಾನ ಮಾಡಿರಿ ಮತ್ತು ಅದನ್ನು ಅನೇಕ ಸಲ ಓದಿರಿ.

## ಗುಂಪಾಗಿ ಚರ್ಚಿಸಿ

ಧೂಳಿನಿಂದ ಮಾಡಿದ (ಮಾಂಸರಕ್ತಧಾರಿಯಾಗಿ ಹುಟ್ಟಿದ) ಮನುಷ್ಯನ ಸ್ವಭಾವದ ಬಗ್ಗೆ ಮತ್ತು ಆತ್ಮಸ್ವರೂಪನಾದ (ಮಾಂಸರಕ್ತಧಾರಿಯಾದ) ಯೇಸುವಿನ ಸ್ವಭಾವದ ಬಗ್ಗೆ ನೀವು ಬೈಬಲಿನ ಈ ಭಾಗದಲ್ಲಿ ಕಂಡುಕೊಂಡ ಅಂಶಗಳ ಕುರಿತು ಚರ್ಚಿಸಿ. ನಿಮಗೆ ಕೊಟ್ಟಿರುವ ಹಾಳೆಗಳ ಮೇಲೆ ಉತ್ತರಗಳನ್ನು ಬರೆಯಿರಿ.

ಮೊದಲ ಮನುಷ್ಯನ ಅಪರಾಧದ ಫಲಿತಾಂಶ **ಯಾವುದು**?

**ವಚನ 16** ದೋಷಿಗಳೆಂದು ನಿರ್ಣಯಿಸಲ್ಪಟ್ಟರು.

**ವಚನ 17** ಮರಣವು ಆಳ್ವಿಕೆ ನಡೆಸಿತು.

ಎರಡನೆಯ ಮನುಷ್ಯನ ಉಚಿತ ಉಡುಗೊರೆಯನ್ನು ಸ್ವೀಕರಿಸಿಕೊಳ್ಳುವವರಿಗೆ ದೊರೆಯುವ ಪ್ರತಿಫಲ **ಯಾವುದು**?

**ವಚನ 16** ದೋಷದಿಂದ ಬಿಡುಗಡೆಹೊಂದಿ ನೀತಿವಂತರಾಗುವರು.

**ವಚನ 17** ಯೇಸುವಿನ ಮೂಲಕ ಜೀವದ ಆಳ್ವಿಕೆ.

ಓದಿರಿ **ಕೊಲೊಸ್ಸೆಯವರಿಗೆ 2:13-15**

ಮೊದಲ ಮನುಷ್ಯನ ಅಪರಾಧದ ಫಲಿತಾಂಶ **ಯಾವುದು**?

**ವಚನ 13** ದೇವರಿಗೆ ಮತ್ತು ಮನುಷ್ಯನಿಗೆ ವಿರೋಧವಾಗಿ ಮಾಡಿದ ಅಪರಾಧಗಳಲ್ಲಿ ಸತ್ತು ನಾಶಕರವಾದ ಸ್ವಾರ್ಥದ ದೈಹಿಕ ಆಸೆಗಳಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ.

ಎರಡನೆಯ ಮನುಷ್ಯನ ಉಚಿತ ಉಡುಗೊರೆಯನ್ನು ಸ್ವೀಕರಿಸಿಕೊಳ್ಳುವವರಿಗೆ ದೊರೆಯುವ ಪ್ರತಿಫಲ **ಯಾವುದು**?

**ವಚನ 13** ನಮ್ಮ ಎಲ್ಲಾ ಅಪರಾಧಗಳಿಂದ ನಾವು ಕ್ಷಮಿಸಲ್ಪಟ್ಟಿರುವುದರಿಂದ ಹಾಳಾಗಿದ್ದ ಸ್ವಾರ್ಥದ ದೈಹಿಕ ಆಸೆಗಳನ್ನು ಜಯಿಸಿ ನಮ್ಮನ್ನು ಜೀವಂತಗೊಳಿಸಿದೆ.

**ವಚನ 14** ಇನ್ನೆಂದಿಗೂ ನಾವು ಆರೋಪಿಗಳಲ್ಲ.

**ವಚನ 15** ಎಲ್ಲಾ ದೊರೆತನಗಳ ಮತ್ತು ಅಧಿಕಾರಗಳ ಮೇಲೆ ಜಯಗಳಿಸಿದ್ದರಿಂದ, ಅವು ಸೋಲಿಸಲ್ಪಟ್ಟು ಶಕ್ತಿಹೀನರಾದ ಕೈದಿಗಳಾಗಿವೆ.

ನಮ್ಮ ಸ್ವಾಸ್ಥ್ಯವನ್ನು ಹೊಂದುವ ಸಮಯ ಇದಾಗಿದೆ. ಮರಣದಂಡನೆಯಿಂದ, ನ್ಯಾಯತೀರ್ಪಿನಿಂದ ಮತ್ತು ಅಪರಾಧದಿಂದ ಬಿಡುಗಡೆ ಹೊಂದಿರುವ ನಾವು ನೀತಿವಂತರಾಗಿ ಈ ಲೋಕದಲ್ಲಿ ಯೇಸುವಿನ ಆಳ್ವಿಕೆಗೆ ಮತ್ತು ಆಡಳಿತಕ್ಕೆ ವಿರುದ್ಧವಾಗಿರುವ ನಮ್ಮ ಶರೀರದ ಮೇಲೆ, ಎಲ್ಲಾ ದುಷ್ಟಾತ್ಮಗಳ ಮೇಲೆ ಮತ್ತು ಎಲ್ಲಾ ಅಧಿಕಾರಗಳ ಮೇಲೆ ಆಳ್ವಿಕೆ ನಡೆಸುತ್ತೇವೆ. ಇನ್ನು ಮುಂದೆ ಸೈತಾನನಾಗಲೀ ದುಷ್ಟಶಕ್ತಿಗಳಾಗಲೀ ನಮ್ಮ ಮೇಲೆ ಆರೋಪ ಮಾಡಲಾರರು, ಏಕೆಂದರೆ ಶಿಲುಬೆಯ ಮೇಲೆ ಯೇಸುವಿಗಾದ ವಿಜಯದಿಂದ ಅವರ ಎಲ್ಲಾ ಅಧಿಕಾರಗಳನ್ನೂ ಆಯುಧಗಳನ್ನೂ ಕಿತ್ತೊಗೆಯಲಾಗಿದೆ.

ಕೆಡುಕನಿಂದ ಹಾಳಾಗಿರುವ ಈ ಲೋಕದಲ್ಲಿ ಯೇಸುವಿಗಾದ ವಿಜಯದಿಂದ ಜೀವಂತರಾದ ನಾವು ಆತ್ಮನಿಂದ ಮಾಂಸರಕ್ತಧಾರಿಗಳಾಗಿ ಹುಟ್ಟಿದವರಾಗಿದ್ದೇವೆ.

ಭವಿಷತ್ತಿನಲ್ಲೂ ನಾವು ಸ್ವಾಸ್ಥ್ಯವನ್ನು ಹೊಂದಿಕೊಳ್ಳುತ್ತೇವೆ.

ಓದಿರಿ **1 ಕೊರಿಂಥದವರಿಗೆ 15:20-23**

ಬೈಬಲಿನ ಈ ಭಾಗವನ್ನು ಧ್ಯಾನ ಮಾಡಿರಿ ಮತ್ತು ಅದನ್ನು ಅನೇಕ ಸಲ ಓದಿರಿ.

## ಗುಂಪಾಗಿ ಚರ್ಚಿಸಿ

ಧೂಳಿನಿಂದ ಮಾಡಿದ (ಮಾಂಸರಕ್ತಧಾರಿಯಾಗಿ ಹುಟ್ಟಿದ) ಮನುಷ್ಯನ ಸ್ವಭಾವದ ಬಗ್ಗೆ ಮತ್ತು ಆತ್ಮಸ್ವರೂಪನಾದ (ಮಾಂಸರಕ್ತಧಾರಿಯಾದ) ಯೇಸುವಿನ ಸ್ವಭಾವದ ಬಗ್ಗೆ ನೀವು ಬೈಬಲಿನ ಈ ಭಾಗದಲ್ಲಿ ಕಂಡುಕೊಂಡ ಅಂಶಗಳ ಕುರಿತು ಚರ್ಚಿಸಿ. ನಿಮಗೆ ಕೊಟ್ಟಿರುವ ಹಾಳೆಗಳ ಮೇಲೆ ಉತ್ತರಗಳನ್ನು ಬರೆಯಿರಿ.

ಸಮಾಧಿಯೊಳಗಿಂದ ಎದ್ದುಬಂದವರು **ಯಾರು**?

ಯೇಸು.

ಯೇಸು ತನ್ನ ಎಲ್ಲಾ ವೈಭವದಿಂದ ಈ ಲೋಕಕ್ಕೆ ಮರಳಿ ಬರುವಾಗ ಎಂದಿಗೂ ವಯಸ್ಸಾಗದ, ಅನಾರೋಗ್ಯಕ್ಕೆ ಒಳಗಾಗದ, ಎಂದಿಗೂ ಬಳಲಿಹೋಗದ ನಿಷ್ಕಳಂಕ ದೇಹಗಳಲ್ಲಿ ಸತ್ತವರೊಳಗಿಂದ ಎಬ್ಬಿಸಲ್ಪಡುವವರು **ಯಾರು**?

ಯೇಸುವಿನ ಉಚಿತ ಉಡುಗೊರೆಯನ್ನು ಮತ್ತು ಆತನ ಮಾಂಸರಕ್ತಾರ್ಪಣೆಯನ್ನು ನಂಬಿ ಸ್ವೀಕರಿಕೊಳ್ಳುವವರೆಲ್ಲರೂ ಆತ್ಮನಿಂದ ಹುಟ್ಟಿದ ದೇವರ ಮಗುವಾಗಿದ್ದಾರೆ.

ಓದಿರಿ **ಪ್ರಕಟನೆ 1:18**

ಆತ್ಮನ ಮೂಲಕ ಪರಿಪೂರ್ಣ ಮಾಂಸರಕ್ತಾರ್ಪಣೆಯಾಗಿ, ಸತ್ತು, ಪರಿಪೂರ್ಣವಾದ ದೇಹದಲ್ಲಿ ಜೀವಂತವಾಗಿ ಪುನರುತ್ಥಾನಗೊಂಡು, ಪರಲೋಕಕ್ಕೆ ಏರಿಹೋಗಿ, ನಿತ್ಯಕಾಲ ಜೀವಿಸುವಾತನಾಗಿ ಮರಣದ ಮತ್ತು ನಿತ್ಯತ್ವದ ಮೇಲೆ ಅಧಿಕಾರವನ್ನು ಹೊಂದಿರುವಾತನು **ಯಾರು**?

ಯೇಸು.

ಓದಿರಿ **ಪ್ರಕಟನೆ 1:5-6**

ನಂಬಿಗಸ್ತ ಸಾಕ್ಷಿಯೂ ಪುನರುತ್ಥಾನಗೊಂಡ ಮೊದಲ ದೇಹವೂ ಎಲ್ಲರ ಮೇಲೆ ಸರ್ವಾಧಿಕಾರಿಯೂ ಅಧಿಪತಿಯೂ ಆಗಿರುವಾತನು **ಯಾರು**?

ಯೇಸು.

ಯೇಸು ನಮಗಾಗಿ ಇದನ್ನೆಲ್ಲಾ **ಏಕೆ** ಮಾಡಿದನು?

ಏಕೆಂದರೆ ಆತನು ನಮ್ಮನ್ನು ಪ್ರೀತಿಸುತ್ತಾನೆ.

ಯೇಸುವಿನ ಉಚಿತ ಉಡುಗೊರೆಯನ್ನೂ ಆತನ ಮಾಂಸರಕ್ತಾರ್ಪಣೆಯನ್ನೂ ನಾವು ನಂಬಿ ಸ್ವೀಕರಿಸಿಕೊಂಡಾಗ, ಆತ್ಮನಿಂದ ಹುಟ್ಟಿದವರಾಗಿ ದೇವರ ಮಗುವಾಗುವುದರ ಜೊತೆಗೆ ಬೇರೆ **ಏನು** ಆಗುತ್ತೇವೆ?

ರಾಜರಾಗುತ್ತೇವೆ (ಸೈತಾನನಿಗೆ, ದುರಾತ್ಮಗಳಿಗೆ ಮತ್ತು ನಮ್ಮ ಸ್ವಂತ ಶರೀರಕ್ಕೆ ಅಧಿಪತಿಗಳಾಗುತ್ತೇವೆ) ಮತ್ತು ಯಾಜಕರಾಗುತ್ತೇವೆ (ದೇವರೊಂದಿಗೆ ಮತ್ತು ಇತರರೊಂದಿಗೆ ಪ್ರೀತಿಯ ಸಂಬಂಧವುಳ್ಳವರಾಗುತ್ತೇವೆ).

ಯೇಸುವಿನ ಪುನರುತ್ಥಾನವು ಪರಿಪೂರ್ಣವಾದ ಪ್ರಪಥಮ ದೇಹದ ಪುನರುತ್ಥಾನವಾಗಿತ್ತು. ಹೀಗಿರಲಾಗಿ ನಾವು ಈಗ ಕೆಡುಕನಿಂದ ಹಾನಿಗೊಳಗಾದ ಈ ಲೋಕದಲ್ಲಿ ವಿಜಯದಿಂದ ಜೀವಿಸಬಹುದಲ್ಲದೆ ನಮ್ಮ ನಿತ್ಯತ್ವದ ಮೇಲೆ ನಮಗಿರುವ ನಿರೀಕ್ಷೆಯಿಂದ ಜೀವಿಸಬಹುದು. ಕೆಡುಕನಿಂದ ಹಾನಿಗೊಳಗಾಗದಿರುವ ಆ ಹೊಸ ಲೋಕದಲ್ಲಿ ನಾವು ಹೊಂದಲಿರುವ ಪುನರುತ್ಥಾನದ ಪರಿಪೂರ್ಣ ದೇಹಕ್ಕೆ ಎಂದಿಗೂ ವಯಸ್ಸಾಗುವುದಿಲ್ಲ, ಎಂದಿಗೂ ಬಳಲಿಕೆಯಾಗುವುದಿಲ್ಲ ಮತ್ತು ಅದೆಂದಿಗೂ ಸಾಯುವುದಿಲ್ಲ. ಯೇಸು ಭೂಮಿಗೆ ಮರಳಿ ಬಂದಾಗ, ಯೇಸುವಿನ ಉಚಿತ ಉಡುಗೊರೆಯನ್ನೂ ಆತನ ಮಾಂಸರಕ್ತಾರ್ಪಣೆಯನ್ನೂ ಸ್ವೀಕರಿಸಿಕೊಂಡ ನಾವೆಲ್ಲರೂ ಪುನರುತ್ಥಾನಗೊಂಡ ಪರಿಪೂರ್ಣ ದೇಹಗಳನ್ನು ಬಾಧ್ಯವಾಗಿ ಪಡೆದುಕೊಳ್ಳುತ್ತೇವೆ.

ಮಾನವನ ಅಪರಾಧದ ಪರಿಣಾಮವಾಗಿ ದೇವರ ಸೃಷ್ಟಿ ಕೆಡುಕನಿಂದ ಹಾನಿಗೊಳಗಾಯಿತು. ಅಸಮಾನತೆಯ, ದಬ್ಬಾಳಿಕೆಯ, ದುಷ್ಟತನದ ಮತ್ತು ಸಾವಿನ ಆಳ್ವಿಕೆಗೆ ಗುರಿಯಾಯಿತು. ದೇವರು ನಮ್ಮನ್ನು ಎಷ್ಟೋ ಪ್ರೀತಿಸುವುದರಿಂದ, ಯೇಸು ಪವಿತ್ರಾತ್ಮನ ಪ್ರಭಾವದಿಂದ ಸ್ತ್ರೀ ಮೂಲಕ ಮಾಂಸರಕ್ತಧಾರಿಯಾಗಿ ಬಂದನು. ಆತನು ತನ್ನ ಸ್ವಂತ ಸೃಷ್ಟಿಗೆ ಬಾಧ್ಯಸ್ಥನಾದ ಚೊಚ್ಚಲು ಮಗನಾಗಿ ಬಂದನು, ಆದ್ದರಿಂದ ನಾವೆಲ್ಲರೂ ಮಕ್ಕಳಾಗಿ ಆತ್ಮನಿಂದ ಮಾಂಸರಕ್ತಧಾರಿಗಳಾಗಿ ಈಗಲೂ ಭವಿಷತ್ಕಾಲದಲ್ಲೂ ನಮಗೆ ಬರತಕ್ಕ ಸ್ವಾಸ್ಥ್ಯವನ್ನೆಲ್ಲಾ ಹೊಂದಿಕೊಳ್ಳಬಹುದು! ಹಲ್ಲೆಲೂಯ!

ಈ ಪಾಠದಿಂದ ನೀವು ದೇವರ ಬಗ್ಗೆ ತಿಳಿದುಕೊಂಡ ಒಂದು ಅಂಶ **ಯಾವುದು**?

ದೇವರು ನಮ್ಮನ್ನು ಎಷ್ಟೋ ಪ್ರೀತಿಸುತ್ತಾನೆಂಬುದಕ್ಕೆ ಯೇಸು ಮಾಂಸರಕ್ತಧಾರಿಯಾಗಿ ಬಂದು, ಸತ್ತು ಪುನರುತ್ಥಾನಗೊಂಡದ್ದೇ ದೇವರ ಸಾಕ್ಷ್ಯ ಮತ್ತು ಪುರಾವೆಯಾಗಿವೆ.

ನಿಮ್ಮ ನಿಜವಾದ ಪ್ರತಿಕ್ರಿಯೆ/ಪ್ರಾರ್ಥನೆ **ಯಾವುದು**?

# ಪಾಠ 11: ಪ್ರಿಯನ ಮೂಲಕ ಸ್ವೀಕಾರ

*ಮಾನವನ ಎರಡು ಅಗತ್ಯತೆಗಳು: ಸ್ವೀಕರಿಸಲ್ಪಡಬೇಕೆಂಬ ಬಯಕೆ ಮತ್ತು ಪ್ರೀತಿಸಲ್ಪಡಬೇಕೆಂಬ ಬಯಕೆ. ದೇವರು ನಮ್ಮನ್ನು ತನ್ನ ಪ್ರಿಯನಲ್ಲಿ (ಅತ್ಯಂತ ಪ್ರಿಯನಾದ ಯೇಸುವಿನಲ್ಲಿ) (ವಿಶೇಷವಾದ ಗೌರವದೊಡನೆ) ಸ್ವೀಕರಿಸಲ್ಪಡುವಂತೆ ಮಾಡಿದನು.*

## ಆರಂಭ ಪ್ರಾರ್ಥನೆ

ಪ್ರಾರ್ಥನೆಯ ಮೂಲಕ ಪಾಠವನ್ನು ಆರಂಭಿಸಲು ಒಬ್ಬರಿಗೆ ಹೇಳಿರಿ.

## ಆರಾಧನೆ

ನಾನು ದೇವರಿಂದ ಪ್ರೀತಿಸಲ್ಪಟ್ಟು ಕ್ರಿಸ್ತನಲ್ಲಿ ವಿಶೇಷ ಗೌರವವನ್ನು ಮತ್ತು ಆಶೀರ್ವಾದಗಳನ್ನು ಹೊಂದಿಕೊಂಡವನೆಂದು ಪ್ರಕಟಿಸುವ ಎರಡು ಅಥವಾ ಮೂರು ಆರಾಧನಾ ಹಾಡುಗಳನ್ನುನೀವೆಲ್ಲರೂ ಒಟ್ಟಿಗೆ ಆರಿಸಿಕೊಂಡು ಹಾಡಿರಿ.

## ಬೈಬಲ್ ಅಧ್ಯಯನ

ನಾವು ಕಲಿತುಕೊಂಡಂತೆ, ಯೇಸುವಿನ ಮಾಂಸರಕ್ತಾರ್ಪಣೆಯನ್ನು ಸ್ವೀಕರಿಸಿಕೊಳ್ಳುವ ಎಲ್ಲ ವಿಶ್ವಾಸಿಗಳು ದೇವರ ಆತ್ಮನನ್ನು ಅಂದರೆ ಪವಿತ್ರಾತ್ಮನನ್ನು ತಮ್ಮೊಳಗೆ ಸ್ವೀಕರಿಸಿಕೊಂಡವರಾಗಿದ್ದಾರೆ. ನಾವು ಸ್ವಾಸ್ಥ್ಯವಾಗಿ ಹೊಂದತಕ್ಕ ಸಮಯ ಇದಾಗಿದೆ. ಕೆಡುಕನಿಂದ ಹಾನಿಗೊಳಗಾದ ಭೂಮಿಯ ಈ ಪ್ರಪಂಚದ ಮೇಲಿರುವ ದೇವರ ರಾಜ್ಯದಲ್ಲಿ ವಾಸಿಸುತ್ತಿರುವ ನಾವು ದೇವರ ಮಗುವಾಗಿದ್ದೇವೆ (ರಾಜಮನೆತನದ ಚೊಚ್ಚಲ ಮಗನಾಗಿದ್ದೇವೆ) ಮತ್ತು ಯೇಸುವಿನೊಂದಿಗೆ ಸಹಬಾಧ್ಯಸ್ಥರಾಗಿದ್ದೇವೆ.

ದೇವರು ನಮ್ಮನ್ನು ಪ್ರೀತಿಸುವುದರಿಂದ ನಮ್ಮಲ್ಲಿ ಒಬ್ಬನಾಗಲು ಇಚ್ಛಿಸಿದನು. ಇತಿಹಾಸದ ಆ ಕ್ಷಣದಲ್ಲಿ, ಯೇಸು ಪವಿತ್ರಾತ್ಮನ ಪ್ರಭಾವದಿಂದ ಸ್ತ್ರೀ ಮೂಲಕ ಮಾಂಸರಕ್ತಧಾರಿಯಾಗಿ ಜನಿಸಿದನು. ಹೀಗಿರಲು, ಮಾಂಸರಕ್ತದಿಂದ ಹುಟ್ಟಿದ ನಾವು ಯೇಸುವಿನ ಶಾಶ್ವತವಾದ ಪರಿಪೂರ್ಣ ಮಾಂಸರಕ್ತಾರ್ಪಣೆಯನ್ನು ನಂಬಿ ಸ್ವೀಕರಿಸುವುದರ ಮೂಲಕ ಆತ್ಮನಿಂದ ಹುಟ್ಟಿದವರಾಗುತ್ತೇವೆ.

ಆತನ ಇತಿಹಾಸ ಅಂದರೆ ಆತನ ಪ್ರೀತಿಯ ಇತಿಹಾಸವಾದ ಬೈಬಲಿನಿಂದ ನಾವು ತಂದೆಯ ಪ್ರೀತಿ, ಆಶೀರ್ವಾದ, ಚಿತ್ತ (ಹೃದಯದ ಆಸೆ) ಮತ್ತು ಆತನ ಶಾಶ್ವತ ರಕ್ಷಣಾಮಾರ್ಗದ ಕುರಿತು ಅಧ್ಯಯನ ಮಾಡೋಣ.

ಓದಿರಿ **ಎಫೆಸದವರಿಗೆ 1:3-14**

ಬೈಬಲಿನ ಈ ಭಾಗವನ್ನು ಧ್ಯಾನ ಮಾಡಿರಿ ಮತ್ತು ಅದನ್ನು ಅನೇಕ ಸಲ ಓದಿರಿ.

## ಗುಂಪಾಗಿ ಚರ್ಚಿಸಿ

ನೀವು ಕಂಡುಕೊಂಡ ಅಂಶಗಳನ್ನು ಚರ್ಚಿಸಿ. ನಿಮಗೆ ಕೊಟ್ಟಿರುವ ಹಾಳೆಗಳ ಮೇಲೆ ಉತ್ತರಗಳನ್ನು ಬರೆಯಿರಿ.

ಆತನು ನಮಗೆ ಪ್ರಕಟಪಡಿಸಿದ ದೇವರ ಚಿತ್ತ ಮತ್ತು ಯೋಜನೆ **ಯಾವುದು**? ಓದಿರಿ **ವಚನಗಳು 9-10**

ಕಾಲವು ಪರಿಪೂರ್ಣವಾದಾಗ ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಇರುವ ಸಮಸ್ತವು ಕ್ರಿಸ್ತನಲ್ಲಿ ಒಂದುಗೂಡುವುದು.

ತಂದೆಯಾದ ದೇವರು ನಮಗೆ (ಹಿಂದಿನ ಕಾಲದಲ್ಲೇ) ಕೊಟ್ಟದ್ದನ್ನು ನಾವು ಈ ಕಾಲದಲ್ಲಿ ಹೊಂದಿಕೊಂಡದ್ದು **ಯಾವುದು**? ಓದಿರಿ **ವಚನ 3**

ಪ್ರತಿಯೊಂದು ಆತ್ಮಿಕ ಆಶೀರ್ವಾದ.

ಈ ಆಶೀರ್ವಾದ **ಎಲ್ಲಿದೆ**?

ಪರಲೋಕದಲ್ಲಿ.

ಇದೆಲ್ಲವನ್ನೂ ನಾವು **ಯಾರಲ್ಲಿ** ಅಥವಾ ಯಾರಿಂದ ಸ್ವೀಕರಿಸಿಕೊಳ್ಳುತ್ತೇವೆ?

ಕಿಸ್ತ ಯೇಸು.

ಪರಲೋಕದಲ್ಲಿ ಕ್ರಿಸ್ತನು ಸಿಂಹಾಸನದ ಮೇಲೆ ಕುಳಿತಿರುವಂತೆಯೇ ಈ ಕಾಲದಲ್ಲಿ ನಾವು ಸಹ ಇದ್ದೇವೆ. ಕ್ರಿಸ್ತನಿಗಿರುವಂತೆ ನಾವೂ ಪ್ರತಿಯೊಂದು ಆತ್ಮಿಕ ಆಶೀರ್ವಾದವನ್ನು ಈ ಕಾಲದಲ್ಲಿ ಹೊಂದಿದ್ದೇವೆ. ಮುಂದಿನ ವಚನಗಳು ಈ ಆಶೀರ್ವಾದಗಳ ಕೆಲವು ವಿವರಗಳನ್ನು ನೀಡುತ್ತವೆ.

ತಂದೆಯಾದ ದೇವರು (ಹಿಂದಿನ ಕಾಲದಲ್ಲಿ) ನಮಗೆ ಕೊಟ್ಟ ಪ್ರಕಾರ (ಈ ಕಾಲದಲ್ಲಿ) ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ? ಅದನ್ನು ನಿಮಗೆ ಅನ್ವಯಿಸಿಕೊಂಡು ನಿಮ್ಮ ಉತ್ತರದ ಮೊದಲು 'ನಾನು' ಎಂದು ಬರೆಯಿರಿ. ಓದಿರಿ **ವಚನಗಳು 4-6**

ಉದಾಹರಣೆ: ನಾನು ಪ್ರೀತಿಯ ಮೂಲಕ ಆರಿಸಲ್ಪಟ್ಟಿದ್ದೇನೆ, ಪವಿತ್ರನಾಗಿದ್ದೇನೆ, ನಿಷ್ಕಳಂಕನಾಗಿದ್ದೇನೆ ಮತ್ತು ದತ್ತು ಮಗನಾಗಿ ಸ್ವೀಕರಿಸಲ್ಪಟ್ಟಿದ್ದೇನೆ, ಪ್ರಿಯನ (ಅತ್ಯಂತ ಪ್ರೀತಿಪಾತ್ರನ) ಮೂಲಕ (ನನ್ನ ಸ್ವಸ್ಥಿತಿಯಲ್ಲಿ) ಸ್ವೀಕರಿಸಲ್ಪಟ್ಟಿದ್ದೇನೆ. ಇದು ನನ್ನ ತಂದೆಯ ಚಿತ್ತವೂ ಆತನ ಹೃದಯದ ಬಯಕೆಯೂ ಆಗಿತ್ತು.

ಯೇಸುವು ದೇವರ 'ಪ್ರಿಯ' ಮಗನೂ ತಂದೆಯಿಂದ ಪ್ರೀತಿಸಲ್ಪಟ್ಟ ಅತ್ಯಂತ ಶ್ರೇಷ್ಠನೂ ಆಗಿದ್ದಾನೆ. ನಾವು ಸಹ ನಮ್ಮ ಸ್ವಸ್ಥಿತಿಯಲ್ಲಿ ಸ್ವೀಕರಿಸಲ್ಪಟ್ಟ ಪುತ್ರರಾಗಿದ್ದೇವೆ. ಆತ್ಮಿಕವಾಗಿ ತಂದೆಗೂ ಮಗನಿಗೂ ಇರುವ ಪರಿಪೂರ್ಣ ಪ್ರೀತಿಯ ಸಂಬಂಧದ ಈ ಕಾಲದಲ್ಲಿ ನಾವು ಜೀವಿಸುತ್ತಿದ್ದೇವೆ. ನಾವು ಆತನ ಹೃದಯದ ಬಯಕೆಯಾಗಿದ್ದೆವು.

ತಂದೆಯಾದ ದೇವರು (ಹಿಂದಿನ ಕಾಲದಲ್ಲಿ) ನಮಗೆ ಕೊಟ್ಟ ಪ್ರಕಾರ (ಈ ಕಾಲದಲ್ಲಿ) ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ? ಅದನ್ನು ನಿಮಗೆ ಅನ್ವಯಿಸಿಕೊಂಡು ನಿಮ್ಮ ಉತ್ತರದ ಮೊದಲು 'ನಾನು' ಎಂದು ಬರೆಯಿರಿ. ಓದಿರಿ **ವಚನಗಳು 7-8**

ಉದಾಹರಣೆ: ನಾನು ದೇವರ ನಿರಂತರವಾದ ಮತ್ತು ಅತ್ಯಮೋಘವಾದ ಕೃಪೆಯಿಂದ ಯೇಸುವಿನ ಮಾಂಸರಕ್ತಾರ್ಪಣೆಯ ಮೂಲಕ ಶಾಶ್ವತವಾಗಿ ಬಿಡುಗಡೆ ಹೊಂದಿದ್ದೇನೆ ಮತ್ತು ಕ್ಷಮಿಸಲ್ಪಟ್ಟಿದ್ದೇನೆ.

ತಂದೆಯಾದ ದೇವರು (ಹಿಂದಿನ ಕಾಲದಲ್ಲಿ) ನಮಗೆ ಕೊಟ್ಟ ಪ್ರಕಾರ (ಈ ಕಾಲದಲ್ಲಿ) ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ? ಅದನ್ನು ನಿಮಗೆ ಅನ್ವಯಿಸಿಕೊಂಡು ನಿಮ್ಮ ಉತ್ತರದ ಮೊದಲು 'ನಾನು' ಎಂದು ಬರೆಯಿರಿ. ಓದಿರಿ **ವಚನಗಳು 11-12**

ಉದಾಹರಣೆ: ನಾನು ದೇವರ ಚಿತ್ತಾನುಸಾರವಾಗಿ ಮತ್ತು ಆತನ ಹೃದಯದ ಬಯಕೆಗನುಸಾರವಾಗಿ (ಈಗ) ನನ್ನ ಸ್ವಾಸ್ಥ್ಯವನ್ನು ಹೊಂದಿಕೊಂಡಿದ್ದೇನೆ.

ತಂದೆಯಾದ ದೇವರು (ಹಿಂದಿನ ಕಾಲದಲ್ಲಿ) ನಮಗೆ ಕೊಟ್ಟ ಪ್ರಕಾರ (ಈ ಕಾಲದಲ್ಲಿ) ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ? ಅದನ್ನು ನಿಮಗೆ ಅನ್ವಯಿಸಿಕೊಂಡು ನಿಮ್ಮ ಉತ್ತರದ ಮೊದಲು 'ನಾನು' ಎಂದು ಬರೆಯಿರಿ. ಓದಿರಿ **ವಚನಗಳು 13-14**

ಉದಾಹರಣೆ: ನಾನು ಪವಿತ್ರಾತ್ಮನಿಂದ ಮುದ್ರೆ ಹಾಕಲ್ಪಟ್ಟಿದ್ದೇನೆ. ನನಗೆ (ಈ ಕಾಲದಲ್ಲಿಯೂ ಮುಂದಿನ ಕಾಲದಲ್ಲಿಯೂ) ಬರತಕ್ಕ ಸ್ವಾಸ್ಥ್ಯವನ್ನು ಆ ಮುದ್ರೆಯು ಖಾತರಿಪಡಿಸಿದೆ.

ಜ್ಞಾಪಕವಿರಲಿ. ಪರಲೋಕದಲ್ಲಿ ಕ್ರಿಸ್ತನು ಸಿಂಹಾಸನದ ಮೇಲೆ ಕುಳಿತಿರುವಂತೆಯೇ ಈ ಕಾಲದಲ್ಲಿ ನಾವು ಸಹ ಇದ್ದೇವೆ. ಕ್ರಿಸ್ತನಿಗಿರುವಂತೆ ನಾವೂ ಪ್ರತಿಯೊಂದು ಆತ್ಮಿಕ ಆಶೀರ್ವಾದವನ್ನು ಈ ಕಾಲದಲ್ಲಿ ಹೊಂದಿದ್ದೇವೆ.

ಓದಿರಿ **ಎಫೆಸದವರಿಗೆ 1:21-23**

ಬೈಬಲಿನ ಈ ಭಾಗವನ್ನು ಧ್ಯಾನ ಮಾಡಿರಿ ಮತ್ತು ಅದನ್ನು ಅನೇಕ ಸಲ ಓದಿರಿ.

## ಗುಂಪಾಗಿ ಚರ್ಚಿಸಿ

ನೀವು ಕಂಡುಕೊಂಡ ಅಂಶಗಳನ್ನು ಚರ್ಚಿಸಿ. ನಿಮಗೆ ಕೊಟ್ಟಿರುವ ಹಾಳೆಗಳ ಮೇಲೆ ಉತ್ತರಗಳನ್ನು ಬರೆಯಿರಿ.

ಯೇಸುವಿಗೆ ಈ ಕಾಲದಲ್ಲೂ ಮುಂದಿನ ಕಾಲದಲ್ಲೂ ಎಷ್ಟು ಶಕ್ತಿಯಿದೆ ಮತ್ತು ಅಧಿಕಾರವಿದೆ?
ಓದಿರಿ **ವಚನ 21**

ಎಲ್ಲಾ ಅಧಿಪತಿಗಳಿಗಿಂತಲೂ ಅಧಿಕಾರಿಗಳಿಗಿಂತಲೂ ಶಕ್ತಿಗಳಿಗಿಂತಲೂ ರಾಜರುಗಳಿಗಿಂತಲೂ ಯಾವುದೇ ಹೆಸರುಳ್ಳವರಿಗಿಂತಲೂ ಪ್ರಮುಖನಾಗಿದ್ದಾನೆ.

ಯೇಸುವಿನ ಸಂಪೂರ್ಣತೆ **ಯಾರು**? ಓದಿರಿ **ವಚನ 23**

ಯೇಸುವಿನ ಮಾಂಸರಕ್ತಾರ್ಪಣೆಯನ್ನು ಸ್ವೀಕರಿಸಿಕೊಂಡ ಎಲ್ಲಾ ವಿಶ್ವಾಸಿಗಳು.

ಯೇಸುವಿನ ಮಾಂಸರಕ್ತಾರ್ಪಣೆಯನ್ನು ಸ್ವೀಕರಿಸಿಕೊಂಡ ಎಲ್ಲ ವಿಶ್ವಾಸಿಗಳ ಸಂಪೂರ್ಣತೆ **ಯಾರು**?

ಕ್ರಿಸ್ತ ಯೇಸು.

ಓದಿರಿ **ಎಫೆಸದವರಿಗೆ 2:4-9**

ಬೈಬಲಿನ ಈ ಭಾಗವನ್ನು ಧ್ಯಾನ ಮಾಡಿರಿ ಮತ್ತು ಅದನ್ನು ಅನೇಕ ಸಲ ಓದಿರಿ.

## ಗುಂಪಾಗಿ ಚರ್ಚಿಸಿ

ನೀವು ಕಂಡುಕೊಂಡ ಅಂಶಗಳನ್ನು ಚರ್ಚಿಸಿ. ನಿಮಗೆ ಕೊಟ್ಟಿರುವ ಹಾಳೆಗಳ ಮೇಲೆ ಉತ್ತರಗಳನ್ನು ಬರೆಯಿರಿ.

ಈಗ ನಾವು ಕ್ರಿಸ್ತ ಯೇಸುವಿನಲ್ಲಿ **ಏನು** ಹೊಂದಿದ್ದೇವೆ? ಓದಿರಿ **ವಚನಗಳು 5-6**

ದೇವರು ನಮ್ಮನ್ನು ಕ್ರಿಸ್ತನೊಂದಿಗೆ ಬದುಕಿಸಿದನು. ಆತನು ನಮ್ಮನ್ನು ಕ್ರಿಸ್ತನೊಂದಿಗೆ ಎಬ್ಬಿಸಿ ಪರಲೋಕದಲ್ಲಿ ಸಿಂಹಾಸನದ ಮೇಲೆ ಕುಳ್ಳಿರಿಸಿ ನಮ್ಮ ದೈಹೀಕ ಆಸೆಗಳ ಮೇಲೂ ಸೈತಾನನ ಮೇಲೂ ಎಲ್ಲಾ ದುರಾತ್ಮಗಳ ಮೇಲೂ ನಮಗೆ ಕ್ರಿಸ್ತನ ಶಕ್ತಿಯನ್ನೂ ಅಧಿಕಾರವನ್ನೂ ಕೊಟ್ಟಿದ್ದಾನೆ.

ದೇವರು ನಮ್ಮನ್ನು ಕ್ರಿಸ್ತನೊಂದಿಗೆ ಬದುಕಿಸಿ ಮತ್ತು ಎಬ್ಬಿಸಿ ಪರಲೋಕದಲ್ಲಿ ಕ್ರಿಸ್ತನ ಶಕ್ತಿ ಮತ್ತು ಅಧಿಕಾರಗಳೊಡನೆ ಆತನೊಂದಿಗೆ ಸಿಂಹಾಸನದ ಮೇಲೆ ಕುಳ್ಳಿರಿಸಿದ್ದು **ಏಕೆ**? ಓದಿರಿ **ವಚನಗಳು 4-8**

ನಮ್ಮ ಬಗ್ಗೆ ದೇವರಿಗಿರುವ ಅಪಾರ ಪ್ರೀತಿಯೇ ಅದಕ್ಕೆ ಕಾರಣ. ಇವೆಲ್ಲವುಗಳ ಮೂಲಕ ದೇವರು ತನ್ನ ನಿರಂತರವಾದ ಪ್ರೀತಿಯನ್ನೂ ಕರುಣೆಯನ್ನೂ ಅತ್ಯಮೋಘವಾದ ಕೃಪೆಯನ್ನೂ ಮತ್ತು ಯಥೇಚ್ಛವಾದ ಆಶೀರ್ವಾದವನ್ನೂ ಪ್ರಕಟಿಸಬಹುದು.

ರಕ್ಷಣೆಯು **ಯಾಕೆ** ದೇವರ ಉಡುಗೊರೆಯಾಗಿದೆ? ಓದಿರಿ **ವಚನಗಳು 8-9**

ಆತನು ತನ್ನ ಉಡುಗೊರೆಯಾದ ಮಾಂಸರಕ್ತಾರ್ಪಣೆಯ ಮೂಲಕ ನಮ್ಮ ಅಹಂಕಾರದ ದುಷ್ಟತನದಿಂದ ನಮ್ಮನ್ನು ರಕ್ಷಿಸುತ್ತಾನೆ. ಆದ್ದರಿಂದ ಯಾರೂ ಹೊಗಳಿಕೊಳ್ಳಲು ಸಾಧ್ಯವಿಲ್ಲ.

ಓದಿರಿ **ಎಫೆಸದವರಿಗೆ 1:15-19**

ಅಪೊಸ್ತಲನಾದ ಪೌಲನು ಭಕ್ತರಿಗಾಗಿ ಪ್ರಾರ್ಥಿಸಿಕೊಂಡದ್ದೇನು?

**ವಚನ 17** ಅವರು ದೇವರ ಬಗ್ಗೆ ಹೆಚ್ಚು ತಿಳಿದುಕೊಳ್ಳಲು ಬೇಕಾದ ಜ್ಞಾನದ ಆತ್ಮವನ್ನು ಕೊಡುವಂತೆ ಅವನು ದೇವರಲ್ಲಿ ಪ್ರಾರ್ಥಿಸಿದನು.

**ವಚನ 18** ಅವರು ದೇವರ ಸತ್ಯತೆಯನ್ನು ಇನ್ನೂ ಹೆಚ್ಚಾಗಿ ನೋಡಲು ಅವರ ಮನಸ್ಸುಗಳನ್ನು ತೆರೆಯುವಂತೆಯೂ ಆತನ ಮಾಂಸರಕ್ತಾರ್ಪಣೆಯನ್ನು ನಂಬಿ ಸ್ವೀಕರಿಸಿಕೊಂಡು ಆತನ ಪ್ರಭಾವದ ಸ್ವಾಸ್ಥ್ಯವಾಗಿರುವ ಎಲ್ಲರಿಗೂ (ಈಗಲೂ ಮುಂದಿನ ಕಾಲದಲ್ಲೂ) ಇರುವ ನಿರೀಕ್ಷೆಯನ್ನು ಮತ್ತು ಆಶೀರ್ವಾದಗಳನ್ನು ತಿಳಿದುಕೊಳ್ಳುವಂತೆಯೂ ಪ್ರಾರ್ಥಿಸಿದನು.

**ವಚನ 19** ಆತನ ಶಕ್ತಿಯ ಮಹತ್ವವನ್ನು ತಿಳಿದುಕೊಳ್ಳುವಂತೆಯೂ ಪಾರ್ಥಿಸಿದನು.

ಈ ಪಾಠದಿಂದ ನೀವು ದೇವರ ಬಗ್ಗೆ ತಿಳಿದುಕೊಳ್ಳುವಂಥ ಒಂದು ಅಂಶ **ಯಾವುದು**?

ದೇವರ ಪ್ರೀತಿ, ಶಕ್ತಿ ಮತ್ತು ನಿರಂತರವಾದ ಯಥೇಚ್ಛ ಆಶೀರ್ವಾದ. ಆತನು ನನ್ನನ್ನು ತನ್ನ ಸ್ತುತಿಸ್ತೋತ್ರದಂತೆಯೂ ಮಹಿಮೆಯಂತೆಯೂ ಪರಿಗಣಿಸಿದ್ದಾನೆ.

ನಿಮ್ಮ ನಿಜವಾದ ಪ್ರತಿಕ್ರಿಯೆ/ಪ್ರಾರ್ಥನೆ **ಯಾವುದು**?

# ಪಾಠ 12: ಸಂಬಂಧಗಳು

*ಸೆಮಿನಾರ್ ಪ್ರತಿನಿಧಿ: 'ದ್ರಾಕ್ಷಾಬಳ್ಳಿಗಳಿಗಿರುವ ಸಂಬಂಧದಂತೆ ಯೇಸು ತನ್ನನ್ನು ತಂದೆಯ ಚಿತ್ತಕ್ಕೆ ಒಪ್ಪಿಸಿಕೊಡುವಂತದ್ದು ನಮಗೆ ಅತ್ಯಂತ ಮುಖ್ಯವಾದದ್ದು.'*

## ಆರಂಭ ಪ್ರಾರ್ಥನೆ

ಪ್ರಾರ್ಥನೆಯ ಮೂಲಕ ಪಾಠವನ್ನು ಆರಂಭಿಸಲು ಒಬ್ಬರಿಗೆ ಹೇಳಿರಿ.

## ಆರಾಧನೆ

ಯೇಸುವಿನಲ್ಲಿರುವ ಐಕ್ಯತೆ ಅಥವಾ ಯೇಸುವಿನೊಂದಿಗಿರುವ ದ್ರಾಕ್ಷಾಬಳ್ಳಿ ಮತ್ತು ಕವಲುಗಳಂತಿರುವ ಸಂಬಂಧ ಅಥವಾ ಯೇಸುವಿನ ಪ್ರೀತಿಯಲ್ಲಿ ಜೀವಿಸುವುದರ ಕುರಿತಾದ ಎರಡು ಅಥವಾ ಮೂರು ಆರಾಧನಾ ಹಾಡುಗಳನ್ನು ನೀವೆಲ್ಲರೂ ಒಟ್ಟಿಗೆ ಆರಿಸಿಕೊಂಡು ಹಾಡಿರಿ.

## ಕಥೆ

ನಿಮ್ಮನ್ನು ದೊಡ್ಡ ದ್ರಾಕ್ಷಾಬಳ್ಳಿಯ ಒಂದು ಕವಲೆಂದು ಊಹಿಸಿಕೊಳ್ಳಿರಿ.

ನೀವು ಬಳ್ಳಿಯ ಮುಖ್ಯ ಕಾಂಡದೊಂದಿಗೆ ಸಂಪರ್ಕ ಹೊಂದಿದ್ದೀರಿ, ತೋಟಗಾರನ ಇಚ್ಛೆಗೆ ಒಪ್ಪಿಸಿಕೊಟ್ಟಿದ್ದೀರಿ.

ಕವಲಾಗಿ ನೀವು ಕೇವಲ ಕಾಂಡಕ್ಕೆ ಸೇರಿಕೊಂಡಿದ್ದೀರಿ. ಬೇರೇನೂ ಮಾಡುತ್ತಿಲ್ಲ. ನೀವು ಕೇವಲ ಮುಖ್ಯ ಕಾಂಡಕ್ಕೆ ಸೇರಿಕೊಂಡಿದ್ದೀರಿ.

ಈಗ ನೀವು ಮುಖ್ಯ ಕಾಂಡಕ್ಕೆ ಸೇರಿಕೊಂಡಿರುವುದರಿಂದ, ಬಳ್ಳಿಯ ಎಲ್ಲಾ ಜೀವರಸಗಳು ನೈಸರ್ಗಿಕವಾಗಿ ಬೇರುಗಳಿಂದ ಮುಖ್ಯ ಕಾಂಡದ ಮೂಲಕ ನಿಮ್ಮೊಳಗೆ ಹರಿಯುತ್ತಿವೆ. ಅದರ ನೀರು, ಅದರ ಪೋಷಕಾಂಶಗಳು; ಬಳ್ಳಿಯಿಂದ ಪ್ರತಿಯೊಂದೂ ನಿಮ್ಮೊಳಗೆ ಹರಿಯುತ್ತಿದೆ.

ನೀವು ಮಾಡುತ್ತಿರುವುದಿಷ್ಟೇ: ಬಳ್ಳಿ ಬೆಳದಂತೆ ಅದರೊಂದಿಗೆ ಹೋಗುವುದು, ಅದರ ಜೀವರಸಗಳನ್ನು ಪಡೆದುಕೊಳ್ಳುವುದು.

ಒಂದು ದಿನ, ಕವಲಾದ ನಿಮಗೆ 'ಜುಮ್ಮೆನಿಸುವುದು'. ನೀವು ಬೆಳೆದಿದ್ದೀರಿ ಎಂದು ಆಗ ನಿಮಗೆ ಗೊತ್ತಾಗುತ್ತದೆ.

ಹಣ್ಣಿನ ಸಣ್ಣ ಗೊಂಚಲುಗಳು ರೂಪುಗೊಳ್ಳಲು ಪ್ರಾರಂಭಿಸುತ್ತವೆ. ಪಾಪ್ (ಪ್ರೀತಿ), ಪಾಪ್, ಪಾಪ್ (ಸಂತೋಷ, ಶಾಂತಿ), ಪಾಪ್, ಪಾಪ್, ಪಾಪ್ (ತಾಳ್ಮೆ, ದಯೆ, ಒಳ್ಳೆಯತನ), ಪಾಪ್, ಪಾಪ್, ಪಾಪ್ (ನಂಬಿಗಸ್ತಿಕೆ, ಸೌಮ್ಯತೆ, ಸ್ವಯಂ ನಿಯಂತ್ರಣ).

ನಿಮ್ಮ ಮೇಲೆ ಸೂರ್ಯನ ಕಿರಣಗಳು ಬೀಳುತ್ತಿರಲು ಮತ್ತು ಮಳೆಯು ಸುರಿಯುತ್ತಿರಲು ದ್ರಾಕ್ಷಾಬಳಿಯಿಂದ ಜೀವಜಲಗಳು ಮತ್ತು ಪೋಷಕಾಂಶಗಳು ನಿಮ್ಮೊಳಗೆ ಹಿತವಾಗಿ ಹರಿಯುತ್ತವೆ. ಈಗಾಗಲು ಕಾರಣವೇನು? ನೀವು ಏನನ್ನೂ ಮಾಡುತ್ತಿಲ್ಲ!

ನೀವು ಮಾಡುತ್ತಿರುವುದಿಷ್ಟೇ: ಬಳ್ಳಿ ಬೆಳೆದಂತೆ ನೀವೂ ಅದರೊಂದಿಗೆ ಹೋಗುತ್ತಾ ಅದರ ಜೀವರಸಗಳನ್ನು ಪಡೆದುಕೊಂಡಿರಿ.

ಅದು ತೋಟಗಾರನ ಇಚ್ಛೆ.

ನೈಸರ್ಗಿಕವಾಗಿ, ನೀರು ಎತ್ತರದಿಂದ ಕೆಳಕ್ಕೆ ಹರಿಯುತ್ತದೆ - ಮಳೆ, ನದಿಗಳು, ಕೊಚ್ಚೆಗುಂಡಿಗಳು ಇತ್ಯಾದಿ. ಜೀವಂತವಾಗಿರಲು ದ್ರಾಕ್ಷಾಬಳ್ಳಿಗೆ ನೀರು ಬೇಕು. ನೀರಿಲ್ಲದಿದ್ದರೆ ಅದು ಸಾಯುತ್ತದೆ. ಕವಲು ನೀರನ್ನು ಮುಖ್ಯ ಕಾಂಡದಿಂದ ಕುಡಿಯಬೇಕು ಅಂದರೆ ಮುಖ್ಯ ಕಾಂಡದಿಂದ ಸ್ವೀಕರಿಸಬೇಕು. ಜೀವಂತವಾಗಿರಲು ಮತ್ತು ಫಲ ನೀಡಲು ಕವಲು ನೀರನ್ನು ಕುಡಿಯಬೇಕು.

*ದೇವರು ಎಲ್ಲವನ್ನು ಸೃಷ್ಟಿಸಿದ್ದರಿಂದ ಪ್ರಕೃತಿಯ ಈ ನಿಯಮವು ಆತ್ಮಿಕತೆಗೂ ಅನ್ವಯಿಸುತ್ತದೆ.*


ಆತ್ಮಿಕತೆಯಲ್ಲಿ, ಜೀವಜಲಗಳು ದೇವರ ಸಿಂಹಾಸನದಿಂದ ಯೇಸುವಿನ ಮೂಲಕ ಕವಲುಗಳಿಗೆ ಎತ್ತರದಿಂದ ಕೆಳಕ್ಕೆ ಹರಿಯುತ್ತವೆ. ಕವಲುಗಳು ಮಳೆಯಿಂದ ನೀರನ್ನು ಕುಡಿಯುವುದಿಲ್ಲ - ಆ ನೀರು ಮಣ್ಣಿನಲ್ಲಿ ಹೋಗುತ್ತದೆ. ನೈಜವಾಗಿ ಕವಲುಗಳು ಮುಖ್ಯ ಕಾಂಡದಿಂದ ನೀರನ್ನು ಕುಡಿಯುತ್ತವೆ ಮತ್ತು ಬೇರಿನಿಂದ ದ್ರಾಕ್ಷಾಬಳ್ಳಿಗೆ ಬಂದ ಎಲ್ಲ ಜೀವರಸಗಳನ್ನು ಮುಖ್ಯಕಾಂಡದಿಂದ ಪಡೆದುಕೊಳ್ಳುತ್ತವೆ.

ಓದಿರಿ **ಯೋಹಾನ 15:1-8**

ಬೈಬಲಿನ ಈ ಭಾಗವನ್ನು ಧ್ಯಾನ ಮಾಡಿರಿ ಮತ್ತು ಅದನ್ನು ಅನೇಕ ಸಲ ಓದಿರಿ.

## ಗುಂಪಾಗಿ ಚರ್ಚಿಸಿ

ನೀವು ಕಂಡುಕೊಂಡ ಅಂಶಗಳನ್ನು ಚರ್ಚಿಸಿ. ನಿಮಗೆ ಕೊಟ್ಟಿರುವ ಹಾಳೆಗಳ ಮೇಲೆ ಉತ್ತರಗಳನ್ನು ಬರೆಯಿರಿ.



ತೋಟಗಾರ **ಯಾರು**?

ತಂದೆಯಾದ ದೇವರು

ದ್ರಾಕ್ಷಾಬಳ್ಳಿಯ ಮುಖ್ಯ ಕಾಂಡ **ಯಾರು**?

ಯೇಸು

ದ್ರಾಕ್ಷಾಬಳ್ಳಿಯ ಮುಖ್ಯ ಕಾಂಡದ ಕವಲು **ಯಾರು**?

ನಾನು

ನೆಲಸಿರುವುದು ಎಂದರೆ **ಏನು**?

ಯೇಸು ತನ್ನಲ್ಲಿ ನೆಲಸಿರಬೇಕೆಂದು ತಿಳಿಸಿದ್ದಾನೆ. ನೆಲಸಿರುವುದು ಅಂದರೆ ಜೊತೆಗಿರುವುದು (ನಿರ್ದಿಷ್ಟ ಸ್ಥಳದಲ್ಲಿ, ಸ್ಥಿತಿಯಲ್ಲಿ, ಸಂಬಂಧದಲ್ಲಿ ಅಥವಾ ನಿರೀಕ್ಷೆಯಲ್ಲಿ), ಮುಂದುವರಿಯುವುದು, ವಾಸಿಸುವುದು, ಸಹಿಸಿಕೊಳ್ಳುವುದು, ಹಾಜರಿರುವುದು, ಇಳಿದುಕೊಂಡಿರುವುದು ಅಥವಾ ನಿಂತುಕೊಂಡಿರುವುದು ಎಂದರ್ಥ.

ನೆಲಸಿರಬೇಕಾದರೆ ನಾನೇನು ಮಾಡಬೇಕು?

ನಿಮ್ಮ ವರ್ಕ್‌ಬುಕ್‌ನಲ್ಲಿ ನಿಮ್ಮ ಉತ್ತರವನ್ನು ಬರೆಯಿರಿ.

ಸ್ವಾಭಾವಿಕವಾಗಿ ಬದುಕಲು ಮತ್ತು ಫಲ ನೀಡಲು ಕವಲು ಸಹ ಪೋಷಕಾಂಶಗಳನ್ನು ಅಂದರೆ ಆಹಾರವನ್ನು ಸೇವಿಸಲೇಬೇಕು.

ಓದಿರಿ **ಯೋಹಾನ 4:34**

## ಹಿನ್ನೆಲೆ

ಬೈಬಲಿನ ಈ ಭಾಗದಲ್ಲಿ ಯೇಸು ಬಹಿಷ್ಕೃತ ಮಹಿಳೆಯೊಂದಿಗೆ ಮಾತಾಡುತ್ತಿದ್ದಾನೆ. ಯೇಸು ಪ್ರಾಚೀನ ಇಸ್ರೇಲಿನ ಹನ್ನೆರಡು ಕುಲಗಳಲ್ಲಿನ ಒಂದು ಕುಲದಲ್ಲಿ ಜನಿಸಿದನು. ಆ ಕಾಲದಲ್ಲಿ ಪ್ರಾಚೀನ ಇಸ್ರೇಲಿನ ವ್ಯಕ್ತಿಯು ಸಮಾರ್ಯದ ವ್ಯಕ್ತಿಯೊಂದಿಗೆ ಮಾತಾಡುತ್ತಿರಲಿಲ್ಲ, ಅದರಲ್ಲೂ ವಿಶೇಷವಾಗಿ ತನ್ನ ಜನರಿಂದ ಬಹಿಷ್ಕಾರಕ್ಕೊಳಗಾದ ಮಹಿಳೆಯೊಂದಿಗೆ ಮಾತಾಡುವಂತಿರಲಿಲ್ಲ. ಆದರೆ ಮಾಂಸರಕ್ತಧಾರಿಯಾಗಿ ಬಂದಿದ್ದ ಯೇಸು ಆ ಬಹಿಷ್ಕೃತ ಮಹಿಳೆಯನ್ನು ಸಮೀಪಿಸಿ ಅವಳೊಂದಿಗೆ ಜೀವಜಲದ (ದೇವರಾತ್ಮನ ಅಂದರೆ ಪವಿತ್ರಾತ್ಮನ) ಬಗ್ಗೆ ಮಾತಾಡಿ ತನ್ನ ಬಗ್ಗೆ ಹೇಳಿ ತಾನೇ ಜೀವಜಲದ ಮೂಲವೆಂದು ತಿಳಿಸುತ್ತಾನೆ. ತನ್ನ ಶಿಷ್ಯರು ಹಿಂದಿರುಗಿದಾಗ ಯೇಸು ತನ್ನ ಆಹಾರ ಯಾವುದು ಎಂದು ಮತ್ತು ಸುಗ್ಗಿ ಅಂದರೇನೆಂದು ಅವರಿಗೆ ತಿಳಿಸುತ್ತಾನೆ.

ಆ ಬಹಿಷ್ಕೃತ ಮಹಿಳೆಯನ್ನು ಸಮೀಪಿಸಿ ತನ್ನ ಬಗ್ಗೆ ತಿಳಿಸಿ ಸುಗ್ಗಿಯ ಬಗ್ಗೆ ಅಂದರೆ ತನ್ನನ್ನು ಇನ್ನೂ ತಿಳಿದುಕೊಂಡಿಲ್ಲದ ಜನರ ಬಗ್ಗೆ ತಿಳಿಸುವಾಗ ಯೇಸು ತನ್ನ ಆಹಾರದ ಬಗ್ಗೆ ಪ್ರಕಟಿಸುತ್ತಾನೆ.

ತನಗೆ ಬೇಕಾದ ಆಹಾರ **ಯಾವುದು** ಎಂದು ಯೇಸು ಹೇಳಿದನು?

ತಂದೆಯ ಚಿತ್ತವನ್ನು ಮಾಡುವುದು ಮತ್ತು ಆತನು ತನ್ನನ್ನು ಯಾವ ಕೆಲಸಕ್ಕೆ ಕಳುಹಿಸಿದ್ದಾನೋ ಅದನ್ನು ಪೂರೈಸುವುದು.

*ದೇವರು ಎಲ್ಲವನ್ನು ಸೃಷ್ಟಿಸಿದ್ದರಿಂದ ಪ್ರಕೃತಿಯ ಈ ನಿಯಮವು ಆತ್ಮಿಕತೆಗೂ ಅನ್ವಯಿಸುತ್ತದೆ.*

ಆತ್ಮಿಕವಾಗಿ ನಾವು ನಮ್ಮ ತಂದೆಯ ಚಿತ್ತಕ್ಕೆ ನಮ್ಮನ್ನು ಒಪ್ಪಿಸಿಕೊಟ್ಟು ಆತನ ಸನ್ನಿಧಿಯಲ್ಲಿ, ಆರಾಧನೆಯಲ್ಲಿ, ಆತನ ವಾಕ್ಯದಲ್ಲಿ ಮತ್ತು ಆತನಿಂದ ಎಲ್ಲಾ ಒಳ್ಳೆಯವುಗಳನ್ನು ಸ್ವೀಕರಿಸಿಕೊಳ್ಳುವುದರಲ್ಲಿ ನಾವು ಸಮಯವನ್ನು ವಿನಿಯೋಗಿಸುವಾಗ ನಾವು ಆತನ ಆತ್ಮನಿಂದ ಪ್ರತಿದಿನ ಹೆಚ್ಚು ಹೆಚ್ಚು ರೂಪಾಂತರಗೊಳ್ಳುತ್ತೇವೆ.

ನಾವು ಯೇಸುವನ್ನು ಸ್ವೀಕರಿಸಿ ತಂದೆಯಾದ ದೇವರ ಚಿತ್ತಕ್ಕೆ ನಮ್ಮನ್ನು ಒಪ್ಪಿಸಿಕೊಟ್ಟಾಗ, ನಾವು **ಯಾರ** ರೀತಿಯಲ್ಲಿ ರೂಪಾಂತರಗೊಳ್ಳುತ್ತೇವೆ? ಓದಿರಿ **2 ಕೊರಿಂಥದವರಿಗೆ 3:17-18**

ಯೇಸು.

ನಾವು ಜೀವಜಲವನ್ನು ಕುಡಿಯುತ್ತಾ ನಮ್ಮ ತಂದೆಯಾದ ದೇವರ ಚಿತ್ತಕ್ಕೆ ನಮ್ಮನ್ನು ಒಪ್ಪಿಸಿಕೊಟ್ಟಿದ್ದರೆ ನಮ್ಮಲ್ಲಿ ಸಂಭವಿಸುವುದರ ಬಗ್ಗೆ ಯೇಸು **ಏನು** ಪ್ರಕಟಿಸಿದನು?

ಓದಿರಿ **ಯೋಹಾನ 15:8**

ಖಂಡಿತವಾಗಿ ಪ್ರತಿಫಲ ಸಿಕ್ಕುತ್ತದೆ. *ದೇವರು ಎಲ್ಲವನ್ನು ಸೃಷ್ಟಿಸಿದ್ದರಿಂದ ಪ್ರಕೃತಿಯ ಈ ನಿಯಮವು ಆತ್ಮಿಕತೆಗೂ ಅನ್ವಯಿಸುತ್ತದೆ.*

ನಾವು ನಮ್ಮ ತಂದೆಯಾದ ದೇವರ ಚಿತ್ತಕ್ಕೆ ನಮ್ಮನ್ನು ಒಪ್ಪಿಸಿಕೊಟ್ಟು ಆತನ ಸನ್ನಿಧಿಯಲ್ಲಿ ಪ್ರತಿದಿನ ಜೀವಜಲವನ್ನು ಕುಡಿದರೆ, ಪವಿತ್ರಾತ್ಮನು ನಮ್ಮನ್ನು ಕ್ರಿಸ್ತನ ಹೋಲಿಕೆಗೆ ಮಾರ್ಪಡಿಸುವನು. ಆತನ ಸ್ವಭಾವವು ನಮ್ಮ ಸ್ವಭಾವವಾಗುತ್ತದೆ. ಯೇಸು ಎಂಬ ದ್ರಾಕ್ಷಾಬಳ್ಳಿಯು ಯೇಸುವಿನ ಫಲವನ್ನು ನೀಡುತ್ತದೆ - ಅದೇ ಆತ್ಮನ ಫಲ.

ತಂದೆಯಾದ ದೇವರ ಚಿತ್ತಕ್ಕೆ ನಾವು ನಮ್ಮನ್ನು ಒಪ್ಪಿಸಿಕೊಟ್ಟಾಗ ನಾವು ಹೊಂದಿಕೊಳ್ಳುವ ಆತ್ಮಿಕ ಫಲ ಮತ್ತು ದೈವೀಕ ಸ್ವಭಾವ ಅಂದರೆ ಕ್ರಿಸ್ತನ ಗುಣಲಕ್ಷಣಗಳು **ಯಾವುವು**? ಓದಿರಿ **ಗಲಾತ್ಯದವರಿಗೆ 5:22-23**

ಪ್ರೀತಿ, ಆನಂದ, ಶಾಂತಿ, ತಾಳ್ಮೆ, ಕರುಣೆ, ಉಪಕಾರ, ನಂಬಿಗಸ್ತಿಕೆ, ಸಾಧುತ್ವ, ಸ್ವಯಂ-ನಿಯಂತ್ರಣ.

ಹಣ್ಣುಗಳನ್ನು **ಯಾರು** ಬೆಳೆಯಮಾಡುತ್ತಾರೆ?

ತೋಟಗಾರನಾದ ತಂದೆಯಾದ ದೇವರು ತನ್ನ ಮಗನಾದ ಯೇಸುಕ್ರಿಸ್ತನ ಮೂಲಕ ಪವಿತ್ರಾತ್ಮನಿಂದ ಬೆಳೆಯಮಾಡುತ್ತಾನೆ.

ದೇವರು ನಮ್ಮನ್ನು ಎಷ್ಟೊಂದು ಪ್ರೀತಿಸುತ್ತಾನೆಂಬುದು ನಮಗೆ ಪ್ರಕಟವಾಗಿರುವಾಗ ಆತನ ಸನ್ನಿಧಿಯಲ್ಲಿ ನಮ್ಮ ತಂದೆಯಾದ ದೇವರ ಚಿತ್ತಕ್ಕೆ ನಮ್ಮನ್ನು ಒಪ್ಪಿಸಿಕೊಟ್ಟರೆ, ಆತನು ತನ್ನ ಚಿತ್ತಾನುಸಾರವಾಗಿ ನಮಗೆ ತನ್ನನ್ನು ಇನ್ನೂ ಹೆಚ್ಚು ಪ್ರಕಟಪಡಿಸಿಕೊಳ್ಳುವನು, ಆಗ ನಾವು ದೇವರ ಸಂಪೂರ್ಣತೆಯಿಂದ ತುಂಬಿದವರಾಗುತ್ತೇವೆ. ನಾವು ಪ್ರತಿದಿನ ಆತನ ಸನ್ನಿಧಿಯಲ್ಲಿ ಯೇಸುವಿನಿಂದ ಸ್ವೀಕರಿಸಿಕೊಳ್ಳುತ್ತಾ ನಮ್ಮ ತಂದೆಯ ಚಿತ್ತಕ್ಕೆ ನಮ್ಮನ್ನು ಒಪ್ಪಿಸಿಕೊಟ್ಟರೆ ಆತನು ತನ್ನ ಚಿತ್ತಾನುಸಾರ ನಮ್ಮನ್ನು ಮಾರ್ಪಡಿಸುತ್ತಾನೆ.

ಈ ಪಾಠದಿಂದ ನೀವು ದೇವರ ಬಗ್ಗೆ ತಿಳಿದುಕೊಳ್ಳುವಂಥ ಒಂದು ಅಂಶ **ಯಾವುದು**?

ನಿಮ್ಮ ನಿಜವಾದ ಪ್ರತಿಕ್ರಿಯೆ/ಪ್ರಾರ್ಥನೆ **ಯಾವುದು**?

# ಪಾಠ 13: ಸಂಬಂಧಗಳು - ಅವರವರ ಸ್ವಸ್ಥಿತಿಯಲ್ಲೇ ಸ್ವೀಕಾರ

*ಸಂಧಾನ ಮಾಡಿಕೊಂಡನು (ಒಪ್ಪಂದ ಮಾಡಿಕೊಂಡನು). ಪುನರ್ಸ್ಥಾಪಿಸಿದನು (ಆರೋಗ್ಯವಾದ, ಉತ್ತಮವಾದ ಮತ್ತು ದೃಢಕಾಯವಾದ ಸ್ಥಿತಿಗೆ ತಂದನು). ನವೀಕರಿಸಿದನು (ಚೈತನ್ಯಗೊಳಿಸಿದನು ಮತ್ತು ಪರಿಣಾಮಕಾರಿಯನ್ನಾಗಿ ಮಾಡಿದನು).*

## ಆರಂಭ ಪ್ರಾರ್ಥನೆ

ಪ್ರಾರ್ಥನೆಯ ಮೂಲಕ ಪಾಠವನ್ನು ಆರಂಭಿಸಲು ಒಬ್ಬರಿಗೆ ಹೇಳಿರಿ.

## ಆರಾಧನೆ

ದೇವರ ಪ್ರೀತಿ ಮತ್ತು ಆತನ ಪರಿವರ್ತನೆಯ ಶಕ್ತಿಯನ್ನು ಪ್ರಕಟಿಸುವ ಎರಡು ಅಥವಾ ಮೂರು ಆರಾಧನಾ ಹಾಡುಗಳನ್ನು ನೀವೆಲ್ಲರೂ ಒಟ್ಟಿಗೆ ಆರಿಸಿಕೊಂಡು ಹಾಡಿರಿ.

## ಹತ್ತು ಕಾಳುಗಳ ಗುಂಪಾಟ

ನಾವು ಕಲಿತುಕೊಂಡಂತೆ, ನಮಗಿರುವ ಸಂಬಂಧಗಳಲ್ಲಿ ದೇವರೊಂದಿಗಿರುವ ಸಂಬಂಧವೇ ಪ್ರಾಮುಖ್ಯವಾದದ್ದು. ನಾವು ನಮ್ಮ ತಂದೆಯ ಚಿತ್ತಕ್ಕೆ ನಮ್ಮನ್ನು ಒಪ್ಪಿಸಿಕೊಟ್ಟು ಆತನೊಂದಿಗೆ ಸಮಯ ಕಳೆಯುತ್ತಾ ಆತನ ಎಲ್ಲ ಒಳ್ಳೆಯತನಗಳನ್ನು ಸ್ವೀಕರಿಸಿಕೊಂಡರೆ, ಪ್ರತಿದಿನ ದೇವರು ನಮ್ಮನ್ನು ಯೇಸುವಿನ ಸ್ವಭಾವಕ್ಕೆ ಮಾರ್ಪಡಿಸುತ್ತಾನೆ.

ದೇವರು ನಮ್ಮ ಉದ್ವೇಗಗಳ ಬಗ್ಗೆ, ನಮ್ಮ ಭಾವನೆಗಳ ಬಗ್ಗೆ, ಇತರರು ನಮ್ಮೊಂದಿಗೆ ವರ್ತಿಸುವುದರ ಬಗ್ಗೆ ಮತ್ತು ನಾವು ಇತರರೊಂದಿಗೆ ವರ್ತಿಸುವುದರ ಬಗ್ಗೆ ಎಚ್ಚರವಹಿಸುತ್ತಾನೆ.

## ಗುಂಪಾಟ

ಎಲ್ಲರೂ ವೃತ್ತಾಕಾರದಲ್ಲಿ ಎದುರುಬದರಾಗಿ ಕುಳಿತುಕೊಳ್ಳಬೇಕು. ವೃತ್ತದ ಮಧ್ಯದಲ್ಲಿ ಎಲ್ಲರಿಗೂ ಕಾಣುವಂತೆ 10 ಕಾಳುಗಳ ವರ್ಕ್‌ಶೀಟನ್ನು (*ದೇವರ ರಾಜ್ಯ ಕಾರ್ಯಕ್ರಮದ ಕೈಪಿಡಿ* ಪುಟ 45ರ ಜೆರಾಕ್ಸ್ ನಕಲನ್ನು ಮಾಡಿ) ಇಡಿರಿ. ವರ್ಕ್‌ಶೀಟ್‌ನ ಪಕ್ಕದಲ್ಲಿ 10 ಅಕ್ಕಿ ಕಾಳುಗಳನ್ನಾಗಲೀ ಬೇಳೆ ಕಾಳುಗಳನ್ನಾಗಲೀ ಅಥವಾ ನಿಮ್ಮಲ್ಲಿರುವ ಯಾವುದೇ ಕಾಳುಗಳನ್ನಾದರೂ ಇಡಿರಿ. ವೃತ್ತದಲ್ಲಿರುವ ಜನಸಂಖ್ಯೆಯೇ ನಿಮ್ಮ ಗುಂಪಿನ ಸಂಖ್ಯೆ. ಇದು 3 ರಿಂದ 12 ರವರೆಗಿನ ಯಾವುದೇ ಪ್ರಮಾಣದಲ್ಲಿರಬಹುದು. 12 ಕ್ಕಿಂತ ಹೆಚ್ಚು ಜನರಿದ್ದರೆ ಎರಡು ಗುಂಪುಗಳನ್ನಾಗಿ ಮಾಡಿರಿ. 24 ಕ್ಕಿಂತ ಹೆಚ್ಚು ಜನರಿದ್ದರೆ ಮೂರು ಗುಂಪುಗಳನ್ನಾಗಿ ಅಥವಾ ಅಗತ್ಯಕ್ಕೆ ತಕ್ಕಂತೆ ಮಾಡಿರಿ. ಪ್ರತಿ ಗುಂಪು 10 ಕಾಳುಗಳನ್ನು ಮತ್ತು 10 ಕಾಳುಗಳ ವರ್ಕ್‌ಶೀಟನ್ನು ಗುಂಪಿನ ಮಧ್ಯದಲ್ಲಿಡಬೇಕು.

ಪ್ರತಿಯೊಬ್ಬರಿಗೂ - ಒಬ್ಬೊಬ್ಬರಾಗಿ - ಗುಂಪಿನೊಂದಿಗೆ ಮಾತಾಡಲು ಅವಕಾಶ ನೀಡಬೇಕು. ಪ್ರತಿಯೊಬ್ಬರ ಮಾತೂ ಸಮಾನವಾದದ್ದು. ಪ್ರತಿಯೊಬ್ಬರಿಗೂ ಸಮಾನವಾದ ಪ್ರಾಮುಖ್ಯತೆ ಇದೆ. ಪ್ರತಿಯೊಬ್ಬರೂ ಗುಂಪಿನ ಪ್ರಮುಖ ಭಾಗವಾಗಿ ಕಾರ್ಯನಿರ್ವಹಿಸುತ್ತಾರೆ. ತಮ್ಮ ಸಮುದಾಯವು ತಮ್ಮನ್ನು ಕಾಣುವ ರೀತಿ ವರ್ಕ್‌ಶೀಟ್‌ನ ಯಾವ ಕಾಲಮ್‌ನಂತಿದೆ ಎಂಬುದನ್ನು ಪ್ರತಿಯೊಬ್ಬರೂ ತಮ್ಮ ಗುಂಪಿನೊಂದಿಗೆ ಹಂಚಿಕೊಳ್ಳಬೇಕು. ಅವರ ಸಮುದಾಯವು ಅವರನ್ನು ಕಾಣುವುದು ಮೌಲ್ಯರಹಿತವಾಗಿರಬಹುದು, ಅಥವಾ ಅವರ ಸಮುದಾಯವು ಅವರನ್ನು ಕಾಣುವುದು ಸ್ವಲ್ಪ ಮೌಲ್ಯವನ್ನು ಹೊಂದಿರಬಹುದು, ಅಥವಾ ಅವರ ಸಮುದಾಯವು ಅವರನ್ನು ಕಾಣುವುದು ದೊಡ್ಡ ಮೌಲ್ಯವನ್ನು ಹೊಂದಿರಬಹುದು.

ತಮ್ಮ ಸಮುದಾಯವು ತಮ್ಮನ್ನು ಕಾಣುವ ರೀತಿಯ ಬಗ್ಗೆ ನಾಚಿಕೆ ಪಡಬೇಕಿಲ್ಲ ಎಂಬುದನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳುವುದು ಅತ್ಯವಶ್ಯಕವಾದದ್ದು. ಸಮುದಾಯವು ಒಬ್ಬನನ್ನು ಕಾಣುವ ರೀತಿಯು ಅನೇಕ ಸಂಗತಿಗಳನ್ನು ಅವಲಂಬಿಸಿದೆ. ಆ ಸಂಗತಿಗಳನ್ನೆಲ್ಲಾ ಆ ವ್ಯಕ್ತಿಯು ತನ್ನ ಹಿಡಿತದಲ್ಲಿಟ್ಟುಕೊಳ್ಳಲಾಗುವುದಿಲ್ಲ. ಸರಿಯಾದ ಉತ್ತರ: ಸಮುದಾಯವು ನಿಮ್ಮನ್ನು ಕಾಣುವ ರೀತಿಯ ಬಗ್ಗೆ ನಿಮಗಿರುವ ಅಭಿಪ್ರಾಯವು ನಿಮ್ಮ ಭಾವನೆಯನ್ನು ಅವಲಂಬಿಸಿದೆ.

ತಮ್ಮ ಸಮುದಾಯವು ತಮ್ಮನ್ನು ಕಾಣುವ ರೀತಿ ಯಾವ ಕಾಲಮ್ (ಮೌಲ್ಯರಹಿತ ಅಥವಾ ಸ್ವಲ್ಪ ಮೌಲ್ಯ ಅಥವಾ ದೊಡ್ಡ ಮೌಲ್ಯ) ನಂತಿದೆ ಎಂಬುದನ್ನು ಪ್ರತಿಯೊಬ್ಬರೂ ತಮ್ಮ ಗುಂಪಿನೊಂದಿಗೆ ಹಂಚಿಕೊಂಡ ಮೇಲೆ ಗುಂಪಿನ ಪ್ರತಿಯೊಬ್ಬರೂ 10 ಕಾಳುಗಳನ್ನು ತಾವು ಆಯ್ದುಕೊಂಡ ಕಾಲಮ್‌ಗಳಲ್ಲಿ ಇಟ್ಟು ತಮ್ಮ ಗುಂಪು ಕಂಡುಕೊಂಡ ಅಂಶಗಳನ್ನು ಹೇಗೆ ತಿಳಿಸಬೇಕೆಂದು ಚರ್ಚಿಸಬೇಕು. ಎಲ್ಲಾ 10 ಕಾಳುಗಳನ್ನು ಬಳಸಬೇಕು. 10 ಕಾಳುಗಳು ಇಡೀ ಗುಂಪನ್ನು ಪ್ರತಿನಿಧಿಸುತ್ತವೆ.

ಉದಾಹರಣೆ 1: 8 ಜನರ ಗುಂಪಿನಲ್ಲಿ ಐವರು ತಮ್ಮನ್ನು ಸಮುದಾಯವು ಮೌಲ್ಯರಹಿತರನ್ನಾಗಿ ಕಾಣುತ್ತದೆ ಎಂದು ನಂಬಿದರೆ, ಇಬ್ಬರು ತಮ್ಮನ್ನು ಸಮುದಾಯವು ಸ್ವಲ್ಪ ಮೌಲ್ಯವುಳ್ಳವರೆಂದು ಕಾಣುತ್ತದೆ ಎಂದು ನಂಬಿದರೆ ಮತ್ತು ಒಬ್ಬರು ತಮ್ಮನ್ನು ಸಮುದಾಯವು ದೊಡ್ಡ ಮೌಲ್ಯವುಳ್ಳವರೆಂದು ಕಾಣುತ್ತದೆ ಎಂದು ನಂಬಿದರೆ, 10 ಕಾಳುಗಳಲ್ಲಿ 7 ಕಾಳುಗಳನ್ನು ಮೌಲ್ಯವಿಲ್ಲದ ಕಾಲಮ್‌ನಲ್ಲಿ ಇಡಬೇಕು, ಸ್ವಲ್ಪ ಮೌಲ್ಯದ ಕಾಲಮ್‌ನಲ್ಲಿ 2 ಕಾಳುಗಳನ್ನು ಇಡಬೇಕು ಮತ್ತು ದೊಡ್ಡ ಮೌಲ್ಯದ ಕಾಲಮ್‌ನಲ್ಲಿ 1 ಕಾಳನ್ನು ಇಡಬೇಕು.

ಉದಾಹರಣೆ 2: 6 ಜನರ ಗುಂಪಿನಲ್ಲಿ ಮೂವರು ತಮ್ಮನ್ನು ಸಮುದಾಯವು ಮೌಲ್ಯರಹಿತರನ್ನಾಗಿ ಕಾಣುತ್ತದೆ ಎಂದು ನಂಬಿದರೆ, ಮೂವರು ತಮ್ಮನ್ನು ಸಮುದಾಯವು ಸ್ವಲ್ಪ ಮೌಲ್ಯವುಳ್ಳವರೆಂದು ಕಾಣುತ್ತದೆ ಎಂದು ನಂಬಿದರೆ ಮತ್ತು ತಮ್ಮನ್ನು ಸಮುದಾಯವು ದೊಡ್ಡ ಮೌಲ್ಯವುಳ್ಳವರೆಂದು ಕಾಣುತ್ತದೆ ಎಂದು ನಂಬುವವರು 0 (ಸೊನ್ನೆ) ಆಗಿದ್ದರೆ, 10 ಕಾಳುಗಳಲ್ಲಿ 5 ಕಾಳುಗಳನ್ನು ಮೌಲ್ಯವಿಲ್ಲದ ಕಾಲಮ್‌ನಲ್ಲಿ ಇಡಬೇಕು, ಸ್ವಲ್ಪ ಮೌಲ್ಯದ ಕಾಲಮ್‌ನಲ್ಲಿ 5 ಕಾಳುಗಳನ್ನು ಇಡಬೇಕು ಮತ್ತು ದೊಡ್ಡ ಮೌಲ್ಯದ ಕಾಲಮ್‌ನಲ್ಲಿ 0 (ಸೊನ್ನೆ) ಕಾಳನ್ನು ಇಡಬೇಕು.

## ಗುಂಪಾಗಿ ಚರ್ಚಿಸಿ

ನೀವು ಕಂಡುಕೊಂಡ ಅಂಶಗಳನ್ನು ಚರ್ಚಿಸಿ. ನಿಮಗೆ ಕೊಟ್ಟಿರುವ ಹಾಳೆಗಳ ಮೇಲೆ ಉತ್ತರಗಳನ್ನು ಬರೆಯಿರಿ.

ತಮ್ಮನ್ನು ಸಮುದಾಯವು ಮೌಲ್ಯರಹಿತರನ್ನಾಗಿ ಕಾಣುತ್ತದೆ ಅಥವಾ ತಮ್ಮನ್ನು ಸಮುದಾಯವು ಸ್ವಲ್ಪ ಮೌಲ್ಯವುಳ್ಳವರೆಂದು ಕಾಣುತ್ತದೆ ಎಂದು ನಂಬುವವರಿಗೆ ಸಮುದಾಯವು ಅವರನ್ನು ದೊಡ್ಡ ಮೌಲ್ಯವುಳ್ಳವರೆಂದು ಕಾಣುತ್ತದೆ ಎಂದು ಮನವರಿಕೆ ಮಾಡಿಕೊಟ್ಟು ಬಲಪಡಿಸುವುದು ಹೇಗೆ?

1: ಅವರಿಗೆ ಗೌರವ ಕೊಟ್ಟು ಅವರನ್ನು ನಿಮಗೆ ಸರಿಸಮಾನರಂತೆ ಪರಿಗಣಿಸಿ ಅವರನ್ನು ಸಮುದಾಯದಲ್ಲಿ ಸೇರಿಸಿಕೊಳ್ಳಿರಿ.

2: ಸಮುದಾಯದ ಕಾರ್ಯ ಚಟುವಟಿಕೆಗಳಲ್ಲಿ ಭಾಗವಹಿಸಲು ಅವರಿಗೂ ಸ್ಥಾನವನ್ನು, ಜವಾಬ್ದಾರಿಯನ್ನು ಮತ್ತು ಅವಕಾಶವನ್ನು ಕೊಡಿರಿ.

3: ಅವರೊಂದಿಗಿದ್ದು ಅವರನ್ನು ಅವರ ಸ್ವಸ್ಥಿತಿಯಲ್ಲೇ ಸ್ವೀಕರಿಸಿಕೊಂಡು ಅವರನ್ನು ಅರ್ಥಮಾಡಿಕೊಳ್ಳಿರಿ.

4: ಅವರಿಗೂ ಮಾತಾಡಲು ಮತ್ತು ತಮ್ಮ ಜೀವನದಲ್ಲಿ ದೇವರ ಮಹತ್ವದ ಬಗ್ಗೆ ಸಾಕ್ಷಿ ಹೇಳಲು ಅವಕಾಶ ಮಾಡಿಕೊಡಿರಿ.

5: ದೇವರ ಮಹತ್ವದ ಬಗ್ಗೆಯೂ ಆತನಲ್ಲಿ ತಮಗಿರುವ ಸ್ವಭಾವವನ್ನು, ಯೋಗ್ಯತೆಯನ್ನು ಮತ್ತು ಮೌಲ್ಯವನ್ನು ತಿಳಿದುಕೊಂಡು ಸಾಕ್ಷಿ ಹೇಳಲು ಅವರಿಗೆ ಅವಕಾಶ ಮಾಡಿಕೊಡಿರಿ.

6: ಅವರಿಗಿರುವ ಪ್ರತಿಭೆಯನ್ನು ಅಥವಾ ಪ್ರತಿಭೆಗಳನ್ನು ಕಂಡುಕೊಳ್ಳಲು ಅವರಿಗೆ ಅವಕಾಶ ಮಾಡಿಕೊಡಿರಿ (ಪ್ರತಿಯೊಬ್ಬರಿಗೂ ಕನಿಷ್ಠ ಒಂದು ಪ್ರತಿಭೆಯಾದರೂ ಇದ್ದೇ ಇರುತ್ತದೆ) ಮತ್ತು ಆ ಪ್ರತಿಭೆಯನ್ನು ಅಥವಾ ಪ್ರತಿಭೆಗಳನ್ನು ಉಪಯೋಗಿಸಿಕೊಳ್ಳಿರಿ.

## ಬೈಬಲ್ ಅಧ್ಯಯನ

ಓದಿರಿ **ಲೂಕ 8:43-55**

## ಹಿನ್ನೆಲೆ

ಬೈಬಲಿನ ಈ ವಾಕ್ಯಭಾಗದಲ್ಲಿ ಬಹಿಷ್ಕೃತ ಸ್ತ್ರೀಯು ಯೇಸುವನ್ನು ಸ್ಪರ್ಶಿಸಲು ತನ್ನಲ್ಲಾದ ಎಲ್ಲಾ ಪ್ರಯತ್ನವನ್ನು ಮಾಡುತ್ತಾಳೆ. ಆಕೆಯ ಸಂಸ್ಕೃತಿಯು ಅವಳನ್ನು ಅಶುದ್ಧಳೆಂದು ಪರಿಗಣಿಸಿತ್ತು, ಆದರೆ ಯೇಸು ಆಕೆಯನ್ನು ಶುದ್ಧಳೆಂದು ಪರಿಗಣಿಸುತ್ತಾನೆ.

## ಗುಂಪಾಗಿ ಚರ್ಚಿಸಿ

**43-44ನೇ ವಚನಗಳಲ್ಲಿ** ಯೇಸುವಿನ ಒಂದು ಸ್ಪರ್ಶದಿಂದ ಆ ಬಹಿಷ್ಕೃತ ಮಹಿಳೆಗೆ **ಏನು** ಆಯಿತು?

ಅವಳು ಗುಣಮುಖಳಾದಳು (ದೈಹಿಕವಾಗಿ).

**45ನೇ ವಚನದಲ್ಲಿ** ಯೇಸು **ಏನು** ಹೇಳಿದನು?

ನನ್ನನ್ನು ಮುಟ್ಟಿದವರು ಯಾರು?

ನನ್ನನ್ನು ಮುಟ್ಟಿದ್ದು ಯಾವುದು ಎಂದು ಯೇಸು ಕೇಳಲಿಲ್ಲ. ನನ್ನನ್ನು ಮುಟ್ಟಿದವರು ಯಾರು? ಎಂದು ಆತನು ಕೇಳಿದನು. ಯಾರು ಅಂದರೆ ಒಬ್ಬ ವ್ಯಕ್ತಿ. ಯೇಸು ಆಕೆಗೆ ಬೆಲೆಕೊಟ್ಟು ಗೌರವಿಸುತ್ತಾನೆ. ಆತನು ಅಲ್ಲೇ ನಿಂತು ಆಕೆಗೆ ಸಮೀಪಿಸಿ ತನ್ನ ಸಮಯವನ್ನು ಆಕೆಗೆ ಕೊಟ್ಟು ಲಕ್ಷಿಸುತ್ತಾನೆ. ಆಕೆಯು ಆವಾಗಲೇ ಆತನ ಗುಣಪಡಿಸುವ ಶಕ್ತಿಯನ್ನು ಹೊಂದಿಕೊಂಡಿದ್ದಳು. ಪ್ರಪಂಚದ ದೃಷ್ಟಿಯಲ್ಲಿ ಪ್ರಮುಖನಾಗಿದ್ದ ಒಬ್ಬನ ಮಗಳು ಸಾಯುವ ಸ್ಥಿತಿಯಲ್ಲಿದ್ದಳು, ಆಕೆಯನ್ನು ಉಳಿಸಲು ಯೇಸು ಹೋಗುತ್ತಿದ್ದನೆಂಬುದನ್ನು ನೀವು ಗಮನಿಸಬೇಕು.

**47ನೇ ವಚನದಲ್ಲಿ** ಆ ಸ್ತ್ರೀ **ಏನು** ಮಾಡಿದಳು?

ಆ ಸ್ತ್ರೀಯು ತನ್ನನ್ನು ಮರೆಮಾಡಿಕೊಳ್ಳಲು ಸಾಧ್ಯವಿಲ್ಲವೆಂದು ತಿಳಿದು, ತಾನೇ ಮುಂದೆ ಬಂದು ಯೇಸುವಿನ ಮುಂದೆ ಮೊಣಕಾಲೂರಿ ನಮಸ್ಕರಿಸಿ ಯೇಸುವಿನ ಒಂದು ಸ್ಪರ್ಶದಿಂದ ತನಗೆ ಗುಣವಾಯಿತೆಂದು ಸಾಕ್ಷಿ ಹೇಳಿದಳು.

ಆ ಬಹಿಷ್ಕೃತ ಸ್ತ್ರೀಯು ಬಹಳ ಬೆಲೆಯುಳ್ಳ ವ್ಯಕ್ತಿಯೆಂದೂ ಸರ್ವಶಕ್ತನಾದ ದೇವರ ಹೋಲಿಕೆಗನುಸಾರವಾಗಿ ಸೃಷ್ಟಿಸಲ್ಪಟ್ಟವಳೆಂದೂ ಯೇಸು ಒಪ್ಪಿಕೊಂಡಿದ್ದಲ್ಲದೆ ಆತನ ಆ ಒಂದು ಸ್ಪರ್ಶದಿಂದ ಇಡೀ ಸಮುದಾಯ, ಶಿಷ್ಯರು ಮತ್ತು ಸ್ವತಃ ಯೇಸುವೇ ಆಕೆಯ ಸಾಕ್ಷಿಯನ್ನು ಕೇಳಿದರು.

ಆಕೆಗೆ ಒಂದು ಸ್ಥಾನವಿದೆ. ಆಕೆಗೆ ಸ್ವರವಿದೆ. ಆಕೆಗೆ ಬೆಲೆಯಿದೆ. ಆಕೆಯು ಗಮನಾರ್ಹವಾದ ವ್ಯಕ್ತಿ.

**48ನೇ ವಚನದಲ್ಲಿ** ಯೇಸು ತನ್ನ ಶಿಷ್ಯರ ಮತ್ತು ಎಲ್ಲಾ ಸಮುದಾಯದ ಮುಂದೆ ಅವಳನ್ನು **ಹೇಗೆ** ಕರೆಯುತ್ತಾನೆ?

ಮಗಳು ಅಥವಾ ದೇವರ ಮಗು.

ಯೇಸುವಿನ ಒಂದು ಸ್ಪರ್ಶವು ಸಂಪೂರ್ಣತೆಯನ್ನು ಬರಮಾಡುತ್ತದೆ - ದೈಹಿಕವಾಗಿ, ಮಾನಸಿಕವಾಗಿ ಮತ್ತು ಆತ್ಮಿಕವಾಗಿ. ಆಕೆಗೆ ಒಂದು ಸ್ಥಳವಿದೆ, ಒಂದು ಸ್ವರವಿದೆ, ದೇವರ ಮಗಳು ಎಂಬ ಸ್ಥಾನವಿದೆ.

ಈ ಪಾಠದಿಂದ ನೀವು ದೇವರ ಬಗ್ಗೆ ತಿಳಿದುಕೊಂಡ ಒಂದು ಅಂಶ **ಯಾವುದು**?

ನಿಮ್ಮ ನಿಜವಾದ ಪ್ರತಿಕ್ರಿಯೆ/ಪ್ರಾರ್ಥನೆ **ಯಾವುದು**?

# ಪಾಠ 14: ಸಂಬಂಧಗಳು - ಸಮಾನತೆ

*‘ಯೇಸುವಿನಲ್ಲಿ ಸಂಬಂಧಗಳು ಸಮಾನ-ಸಮಾನವಾಗಿ ಪುನರ್‌ಸ್ಥಾಪಿಸಲ್ಪಟ್ಟವು...ಯೇಸುವನ್ನು ಕಂಡುಕೊಂಡ ಮತ್ತು ಕಂಡುಕೊಂಡಿಲ್ಲದ...ಎಲ್ಲಾ ಸಮುದಾಯಗಳಿಗೆ ಈ ಸಂದೇಶ ಅತ್ಯಗತ್ಯವಾಗಿದೆ.’ ಸೆಮಿನಾರ್ ಪ್ರತಿನಿಧಿ.*

## ಆರಂಭ ಪ್ರಾರ್ಥನೆ

ಪ್ರಾರ್ಥನೆಯ ಮೂಲಕ ಪಾಠವನ್ನು ಆರಂಭಿಸಲು ಒಬ್ಬರಿಗೆ ಹೇಳಿರಿ.

## ಆರಾಧನೆ

ದೇವರ ಪ್ರೀತಿಯನ್ನು ಮತ್ತು ಆತನ ಗುಣಪಡಿಸುವ ಶಕ್ತಿಯನ್ನು ಪ್ರಕಟಿಸುವ ಎರಡು ಅಥವಾ ಮೂರು ಆರಾಧನಾ ಹಾಡುಗಳನ್ನು ನೀವೆಲ್ಲರೂ ಒಟ್ಟಿಗೆ ಆರಿಸಿಕೊಂಡು ಹಾಡಿರಿ.

ದೇವರು ತನ್ನ ಕಥೆಯಾದ ಅಂದರೆ ತನ್ನ ನಿಜಪ್ರೀತಿಯ ಕಥೆಯಾದ ಬೈಬಲಿನಲ್ಲಿ ಪುರುಷ ಮತ್ತು ಸ್ತ್ರೀಯನ್ನು ಸಮಾನ-ಸಮಾನವಾಗಿ ಪರಿಗಣಿಸಿರುವುದರ ಬಗ್ಗೆ ಕೆಲವು ಅಂಶಗಳನ್ನು ಅಧ್ಯಯನ ಮಾಡೋಣ.

ಪುರುಷ ಮತ್ತು ಸ್ತ್ರೀಯನ್ನು ಒಳಗೊಂಡ ತನ್ನ ಸೃಷ್ಟಿಯ ಬಗ್ಗೆ ದೇವರು ಪ್ರಕಟಿಸಿದ್ದು **ಏನು**? ಓದಿರಿ **ಆದಿಕಾಂಡ 1:31**

ಇದು ತುಂಬ ಒಳ್ಳೆಯದಾಗಿದೆ.

ಕೆಡುಕನಿಂದ ಹಾನಿಗೊಳಗಾದ ಈ ಪ್ರಪಂಚದಲ್ಲಿ ವಾಸಿಸುತ್ತಿರುವ ನಾವು ದೇವರ ರಾಜ್ಯದಲ್ಲಿನ ಸಂಬಂಧಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ಆದಿಕಾಲದಲ್ಲಿ ನಡೆದದ್ದನ್ನು ಅಧ್ಯಯನ ಮಾಡಲೇಬೇಕು. ಓದಿರಿ **ಆದಿಕಾಂಡ 1:27-28**

ದೇವರು ಮನುಷ್ಯನನ್ನು **ಯಾರ** ಸ್ವರೂಪದಲ್ಲಿ ಸೃಷ್ಟಿಸಿದನು?

ದೇವರ ಸ್ವರೂಪದಲ್ಲಿ.

ದೇವರು **ಯಾರ** ಸ್ವರೂಪದಲ್ಲಿ ಸ್ತ್ರೀಯನ್ನು ಸೃಷ್ಟಿಸಿದನು?

ದೇವರ ಸ್ವರೂಪದಲ್ಲಿ

ದೇವರು **ಯಾರನ್ನು** ಸಮಾನವಾಗಿ ಆಶೀರ್ವದಿಸಿದನು?

ಪುರುಷ ಮತ್ತು ಸ್ತ್ರೀ

ದೇವರು ಇಡೀ ಭೂಮಿಯ ಮೇಲೆ ಸಮಾನವಾದ ಪ್ರಭುತ್ವವನ್ನು (ಆಳುವ ಶಕ್ತಿಯನ್ನು) **ಯಾರಿಗೆ** ಕೊಟ್ಟನು?

ಪುರುಷ ಮತ್ತು ಸ್ತ್ರೀ

ಓದಿರಿ **ಆದಿಕಾಂಡ 2:18-20**


ದೇವರು ಈ ವಚನದಲ್ಲಿ ಸ್ತ್ರೀಯನ್ನು ಪುರುಷನೊಂದಿಗೆ ಹೋಲಿಸಬಹುದಾದ ಸಹಾಯಕಳು ಎಂದು ಹೇಳಿದ್ದಾನೆ. ಅಂದರೆ ಜೊತೆಯಲ್ಲೇ ಇರುವಾತಳು ಮತ್ತು ಅದೇ ರೀತಿಯ ದೇಹವನ್ನು ಹೊಂದಿದ್ದರೂ ವಿಭಿನ್ನಳು ಎಂದರ್ಥ. ಪುರುಷನಿಗೆ ಸಮಾನವಾಗಿರುವ ಆಕೆ ಅವನೊಡನೆ ಒಂದಾಗತಕ್ಕವಳು. ಪುರುಷನನ್ನು ದೇವರ ಸ್ವರೂಪದಲ್ಲಿ ಸೃಷ್ಟಿಯಾದ ವ್ಯಕ್ತಿಯಂತೆ ಸಂಪೂರ್ಣಗೊಳಿಸುವವಳು.

ದೇವರ ವಾಕ್ಯವಾದ ಹಳೆ ಒಡಂಬಡಿಕೆಯಲ್ಲಿ, ಸಹಾಯಕ ಎಂಬ ಪದವನ್ನು ದೇವರು ಮನುಷ್ಯನಿಗೆ ಸಹಾಯಕ್ಕೆ ಬರುವ ಸಂದರ್ಭದಲ್ಲಿ ಹೆಚ್ಚಾಗಿ ಬಳಸಲಾಗಿದೆ. ದೇವರ ವಾಕ್ಯವಾದ ಹೊಸ ಒಡಂಬಡಿಕೆಯಲ್ಲಿ, ದೇವರಾತ್ಮನೇ ನಮ್ಮ ಸಹಾಯಕನೆಂದು ಸ್ವತಃ ಯೇಸುವೇ ಹೇಳಿದ್ದಾನೆ.

ದೇವರು ಪುರುಷನನ್ನು ಮತ್ತು ಸ್ತ್ರೀಯನ್ನು ಸೃಷ್ಟಿಸಿದ್ದು ಸಮಾನವಾಗಿಯೋ ಅಥವಾ ಅಸಮಾನವಾಗಿಯೋ?

ಸಮಾನವಾಗಿ

ಪುರುಷ ಮತ್ತು ಸ್ತ್ರೀ ಎಲ್ಲಾ ಸೃಷ್ಟಿಗಳಲ್ಲಿ ದೇವರ ಅತ್ಯಂತ ಶ್ರೇಷ್ಠ ಸೃಷ್ಟಿಯಾಗಿದ್ದಾರೆ. ಮನುಷ್ಯರು (ಪುರುಷ ಮತ್ತು ಸ್ತ್ರೀ ಇಬ್ಬರೂ) ದೇವರ ಉಸಿರನ್ನು ಹೊಂದಿಕೊಂಡರು. ಅವರು ಒಬ್ಬರಿಗೊಬ್ಬರು ಸಮಾನರಾದರು. ಅವರು ಒಬ್ಬರಿಗೊಬ್ಬರು ಪ್ರೋತ್ಸಾಹಿಸುತ್ತಾ ತಮ್ಮೊಡನೆಯೂ ಸೃಷ್ಟಿಕರ್ತನಾದ ದೇವರೊಡನೆಯೂ ಸಮಾನವಾದ ಸಂಬಂಧವನ್ನು ಹೊಂದಿಕೊಂಡಿದ್ದಾರೆ.



**ಒಳ್ಳೆಯದಕ್ಕಾಗಿ ವಿನ್ಯಾಸಗೊಂಡಿದ್ದಾರೆ**

ಪುರುಷ ಮತ್ತು ಸ್ತ್ರೀ **ಒಳ್ಳೆಯದಕ್ಕಾಗಿ ವಿನ್ಯಾಸಗೊಂಡಿದ್ದಾರೆ**...ಸಮಾನ-ಸಮಾನ.

ಇಂದಿನ ಪ್ರಪಂಚವು ಪರಿಪೂರ್ಣವಾಗಿದೆಯೇ?

ಇಲ್ಲ.

ದೇವರ ಪರಿಪೂರ್ಣವಾದ ಪ್ರಪಂಚವನ್ನು ಬದಲಾಯಿಸಲು ಘಟನೆಯೊಂದು ಸಂಭವಿಸಿತು. ದೇವರು ಪುರುಷನಿಗೆ ಮತ್ತು ಸ್ತ್ರೀಗೆ ಇಡೀ ಭೂಮಿಯ ಮೇಲೆ ಪ್ರಭುತ್ವವನ್ನೂ ತನ್ನ ಪರಿಪೂರ್ಣವಾದ ಪ್ರಪಂಚವನ್ನು ನೋಡಿಕೊಳ್ಳುವ ಭಾಗ್ಯವನ್ನೂ ಕೊಟ್ಟಿದ್ದು ನಿಮ್ಮ ನೆನಪಿನಲ್ಲಿರಲಿ. ತನ್ನೊಂದಿಗೆ ವಿಜಯಶಾಲಿಯಾಗಿ ಬದುಕಲು ಆತನು ಅವರಿಗೆ ಎಲ್ಲವನ್ನೂ ಕೊಟ್ಟಿದ್ದನು.

ಜೀವವನ್ನಾಗಲೀ ಮರಣವನ್ನಾಗಲೀ, ದೇವರ ಜ್ಞಾನದಲ್ಲಿ ಮತ್ತು ಜೀವವೃಕ್ಷದಲ್ಲಿ ಪಾಲ್ಗೊಳ್ಳುವುದನ್ನಾಗಲೀ, ಕೆಡುಕನ ಮೋಸದಲ್ಲಿ ಮತ್ತು ಒಳಿತುಕೆಡಕುಗಳ ಜ್ಞಾನವನ್ನು ಕೊಡುವ ವೃಕ್ಷದಲ್ಲಿ ಪಾಲ್ಗೊಳ್ಳುವುದನ್ನಾಗಲೀ ಆಯ್ಕೆ ಮಾಡಿಕೊಳ್ಳುವ ಸ್ವತಂತ್ರವನ್ನು ದೇವರು ಪುರುಷನಿಗೆ ಮತ್ತು ಸ್ತ್ರೀಗೆ ಅವರನ್ನು ಸೃಷ್ಟಿಸಿದಾಗಲೇ ಕೊಟ್ಟಿದ್ದನು.

ದೇವರು ಮನುಷ್ಯರಿಗೆ (ಪುರುಷನಿಗೆ ಮತ್ತು ಸ್ತ್ರೀಗೆ) ಏನನ್ನು ಆಯ್ಕೆಮಾಡಿಕೊಳ್ಳಲು ಹೇಳಿದನು? ಓದಿರಿ **ಆದಿಕಾಂಡ 2:8-9** ಮತ್ತು **ಆದಿಕಾಂಡ 2:15-17**

ಜೀವ ಅಥವಾ ಸಾವು.

ಆದಿಕಾಂಡದ ಮೂರನೇ ಅಧ್ಯಾಯದ ಅಂತ್ಯಭಾಗದಲ್ಲಿ, ಪ್ರಥಮ ಪುರುಷನು ಮತ್ತು ಸ್ತ್ರೀಯು ದೇವರ ಜ್ಞಾನದಲ್ಲಿ ಮತ್ತು ಜೀವವೃಕ್ಷದಲ್ಲಿ ಪಾಲ್ಗೊಳ್ಳುವುದಕ್ಕೆ ಬದಲಾಗಿ ಕೆಡುಕನ ಮೋಸದಲ್ಲಿ ಮತ್ತು ಒಳಿತುಕೆಡಕುಗಳ ಜ್ಞಾನವನ್ನು ಕೊಡುವ ವೃಕ್ಷದಲ್ಲಿ ಪಾಲ್ಗೊಳ್ಳುವುದನ್ನು ಆಯ್ಕೆ ಮಾಡಿಕೊಂಡರು. ಜೀವಕ್ಕೂ ಸಮೃದ್ಧಿಕರವಾದ ಜೀವನಕ್ಕೂ ನಡೆಸುವ ದೇವರ ಜ್ಞಾನದ ಮೇಲಿರಬೇಕಾದ ನಂಬಿಕೆ ಮತ್ತು ಸಂಬಂಧವನ್ನು ಹೊಂದಿಕೊಳ್ಳುವ ಬದಲು ದೇವರ ಜ್ಞಾನಕ್ಕೆ ವಿರೋಧವಾಗಿ ಮರಣಕ್ಕೂ ನಾಶನಕ್ಕೂ ನಡೆಸುವಂಥ ಅಪನಂಬಿಕೆ ಮತ್ತು ವಿರೋಧತ್ವದ ಸಂಬಂಧವನ್ನು ಹೊಂದಿಕೊಳ್ಳುವುದನ್ನೇ ಪುರುಷನು ಮತ್ತು ಸ್ತ್ರೀಯು ಆರಿಸಿಕೊಂಡರು. ಈ ಪರಿಪೂರ್ಣ ಪ್ರಪಂಚಕ್ಕೆ ಸಾವು ಮತ್ತು ಕೆಟ್ಟದ್ದು ಪ್ರವೇಶಿಸಲು ಪುರುಷನು ಮತ್ತು ಸ್ತ್ರೀಯು ಅವಕಾಶ ಮಾಡಿಕೊಟ್ಟರು. ಓದಿರಿ **ಆದಿಕಾಂಡ 3:1-7** ಮತ್ತು **ಆದಿಕಾಂಡ 3:16-17**

ಈಗ ಪುರುಷನಿಗೂ ಸ್ತ್ರೀಗೂ ಇರುವ ಸಂಬಂಧವು ಸಮಾನವಾಗಿದೆಯೋ ಅಥವಾ ಅಸಮಾನವಾಗಿದೆಯೋ?

ಅಸಮಾನವಾಗಿದೆ

ಅವರಿಬ್ಬರೂ ಹತೋಟಿಯನ್ನು ಮತ್ತು ಪ್ರಾಬಲ್ಯತೆಯನ್ನು ಹೊಂದಿಕೊಳ್ಳಲು ಹೋರಾಡುತ್ತಾರೆ. ಸ್ತ್ರೀಯು ಪುರುಷನನ್ನು ಹತೋಟಿಯಲ್ಲಿಟ್ಟುಕೊಳ್ಳಲು ಬಯಸುತ್ತಾಳೆ, ಅಂತೆಯೇ ಪುರುಷನು ಸ್ತ್ರೀಯ ಮೇಲೆ ದಬ್ಬಾಳಿಕೆ ಮಾಡಲು ಪ್ರಯತ್ನಿಸುತ್ತಾನೆ.


ಓದಿರಿ **ಆದಿಕಾಂಡ 4:7**

**ಆದಿಕಾಂಡ 3:16-17** ರಲ್ಲಿ ಕಂಡುಬರುವ ಬಯಕೆ ಎಂಬ ಪದದ ಅರ್ಥವೇನಂದರೆ, ಹಿಂಬಾಲಿಸಿ ಹೋಗಿ ಹತೋಟಿಯಲ್ಲಿ ಇಟ್ಟುಕೊಳ್ಳುವುದು ಮತ್ತು ಕುತಂತ್ರ ಮಾಡುವುದು ಎಂದರ್ಥ. **ಆದಿಕಾಂಡ 3:16-17** ರಲ್ಲಿ ಕಂಡುಬರುವ ಆಳ್ವಿಕೆ ಎಂಬ ಪದಕ್ಕೆ, ದಬ್ಬಾಳಿಕೆ ಮಾಡುವುದು ಮತ್ತು ಕುಗ್ಗಿಸುವುದು ಎಂದರ್ಥ.

ಕೆಡುಕನಿಂದ ಹಾನಿಗೊಳಗಾದ ಸ್ತ್ರೀಯು ಈಗ ಪುರುಷನಿಗೆ **ಏನು** ಮಾಡಬಯಸುತ್ತಾಳೆ?

ಹಿಂಬಾಲಿಸಿ ಹೋಗಿ ಹತೋಟಿಯಲ್ಲಿಟ್ಟುಕೊಳ್ಳಲು ಮತ್ತು ಕುತಂತ್ರ ಮಾಡಲು.

ಕೆಡುಕನಿಂದ ಹಾನಿಗೊಳಗಾದ ಪುರುಷನು ಈಗ ಸ್ತ್ರೀಗೆ **ಏನು** ಮಾಡಲು ಬಯಸುತ್ತಾನೆ?




**ಕೆಡುಕನಿಂದ ಹಾನಿಗೊಳಗಾದ**

ದಬ್ಬಾಳಿಕೆ ಮಾಡಲು ಮತ್ತು ಕುಗ್ಗಿಸಲು.

**ಕೆಡುಕನಿಂದ ಹಾನಿಗೊಳಗಾದ** ಪುರುಷ ಮತ್ತು ಸ್ತ್ರೀ...ಅಸಮಾನ-ಅಸಮಾನ.

ಆದರೆ ಈ ಘಟನೆಯು ಅಲ್ಲಿಗೆ ಮುಗಿಯಲಿಲ್ಲ. ದೇವರು ತಾನೇ ಸೃಷ್ಟಿಸಿದ ಈ ಪ್ರಪಂಚಕ್ಕೆ ತನ್ನ ಮಹಾ ಪ್ರೀತಿಯ ಕಾರಣದಿಂದ ಮಾಂಸರಕ್ತಧಾರಿಯಾದ ಮನುಷ್ಯನಾಗಿ ಇಳಿದುಬಂದು ಮನುಷ್ಯನ ಅಪರಾಧದ ಪರಿಣಾಮವಾಗಿ ಈ ಪ್ರಪಂಚಕ್ಕೆ ಪ್ರವೇಶಿಸಿದ ಎಲ್ಲಾ ಹಾನಿ, ರೋಗ, ಸಾವು ಮತ್ತು ದುಷ್ಟತನಗಳನ್ನು ಸ್ವತಃ ತಾನೇ ಶಿಲುಬೆ ಮೇಲೆ ತೆಗೆದುಕೊಂಡನು. ಶಿಲುಬೆ ಮೇಲೆ ಪ್ರಾಣಕೊಟ್ಟ ಯೇಸು ಪುನರುತ್ಥಾನ ಹೊಂದಿ ಎಲ್ಲಾ ಹಾನಿ, ರೋಗ, ಸಾವು ಮತ್ತು ದುಷ್ಟತನಗಳ ಮೇಲೆ ಜಯಗಳಿಸಿ ನಮ್ಮ ಒಳ್ಳೆಯದಕ್ಕಾಗಿ ನಮ್ಮನ್ನು ಪುನರ್‌ಸ್ಥಾಪಿಸಿದನು.




**ಒಳ್ಳೆಯದಕ್ಕಾಗಿ ಪುನರ್‌ಸ್ಥಾಪಿಸಲ್ಪಟ್ಟವರಾಗಿದ್ದಾರೆ**

ಪುರುಷ ಮತ್ತು ಸ್ತ್ರೀ ತಮ್ಮ **ಒಳ್ಳೆಯದಕ್ಕಾಗಿ ಪುನರ್‌ಸ್ಥಾಪಿಸಲ್ಪಟ್ಟವರಾಗಿದ್ದಾರೆ...** ಸಮಾನ-ಸಮಾನ.

ಆದರೆ ಈ ಘಟನೆಯು ಅಲ್ಲಿಗೆ ಮುಗಿಯಲಿಲ್ಲ. ಕೆಡುಕನಿಂದ ಹಾನಿಗೊಳಗಾದ ಈ ಪ್ರಪಂಚದಲ್ಲಿ ಕೆಡುಕನ ಸುಳ್ಳನ್ನು ಖಂಡಿಸಲು, ಮೋಸಹೋಗದಂತೆ ಸತ್ಯವನ್ನು ತಿಳಿದುಕೊಳ್ಳಲು ಮತ್ತು ನಮ್ಮ ಸ್ವಾರ್ಥಪರ ಆಸೆಗಳನ್ನೂ ಕೆಡುಕನನ್ನೂ ಕೆಟ್ಟದ್ದನ್ನೂ ಜಯಿಸಿ ಜೀವಿಸಲು ದೇವರು ನಮಗೆ ತನ್ನ ಅಪಾರ ಪ್ರೀತಿಯ ನಿಮಿತ್ತ ಶಕ್ತಿಯನ್ನು ಮತ್ತು ಅಧಿಕಾರವನ್ನು ಕೊಡುತ್ತಾನೆ.

ನಮ್ಮನ್ನು ತನ್ನ ಹತೋಟಿಯಲ್ಲಿಟ್ಟುಕೊಂಡು ದಬ್ಬಾಳಿಕೆಮಾಡಬಲ್ಲ ಸ್ವಇಚ್ಛೆಯನ್ನು ನಾವು ನಮ್ಮ ತಂದೆಯಾದ ದೇವರಿಗೆ ಒಪ್ಪಿಸಿಕೊಟ್ಟಾಗ ಅಂದರೆ ಆತನ ಹತೋಟಿಗೆ ಕೊಟ್ಟಾಗ ಯೇಸು ನಮಗೆ ಏನನ್ನು ಕೊಡುವುದಕ್ಕಾಗಿ ರಕ್ತಮಾಂಸಧಾರಿಯಾಗಿ ಬಂದು ಪ್ರಾಣಕೊಟ್ಟು ಪುನರುತ್ಥಾನ ಹೊಂದಿದನೋ ಅದನ್ನೆಲ್ಲ ನಾವು ಪಡೆದುಕೊಳ್ಳುತ್ತೇವೆ ಮತ್ತು ಕೆಡುಕನಿಂದ ಹಾನಿಗೊಳಗಾದ ಈ ಪ್ರಪಂಚದಲ್ಲಿ ನಿಜಜೀವಿತವನ್ನು ನಡೆಸುತ್ತೇವೆ.

ದೇವರು ತನ್ನ ಮಹಾ ಪ್ರೀತಿಯ ನಿಮಿತ್ತ ತನ್ನ ಪುನರ್‌ಸ್ಥಾಪನೆಯ ಮತ್ತು ಗುಣಪಡಿಸುವ ಯೋಜನೆಯಲ್ಲಿ ನಮ್ಮನ್ನು ಭಾಗಿಗಳನ್ನಾಗಿ ಮಾಡಿದ್ದಾನೆ. 15ನೇ ಮತ್ತು 16ನೇ ಪಾಠಗಳಲ್ಲಿ ದೇವರ ಪ್ರೀತಿಯ ಬಗ್ಗೆ ಮತ್ತು ಆತನ ಗುಣಪಡಿಸುವ ಯೋಜನೆಯಲ್ಲಿ ಆತನು ನಮಗೆ ಕೊಟ್ಟಿರುವ ಪಾತ್ರದ ಬಗ್ಗೆ ಆತನ ಇತಿಹಾಸವಾದ ಬೈಬಲಿನಲ್ಲಿ ಅಧ್ಯಯನ ಮಾಡುತ್ತೇವೆ.



**ಗುಣಪಡಿಸುವುದಕ್ಕಾಗಿ ಕಳುಹಿಸಲ್ಪಟ್ಟಿದ್ದಾರೆ**

ಪುರುಷನು ಮತ್ತು ಸ್ತ್ರೀಯು **ಗುಣಪಡಿಸುವುದಕ್ಕಾಗಿ ಕಳುಹಿಸಲ್ಪಟ್ಟಿದ್ದಾರೆ...** ಸಮಾನ-ಸಮಾನ.

ಈ ಪಾಠದಿಂದ ನೀವು ದೇವರ ಬಗ್ಗೆ ತಿಳಿದುಕೊಂಡ ಒಂದು ಅಂಶವೇನು?

ನಿಮ್ಮ ನಿಜವಾದ ಪ್ರತಿಕ್ರಿಯೆ/ಪ್ರಾರ್ಥನೆ **ಯಾವುದು**?

# ಪಾಠ 15: ಸಂಬಂಧಗಳು - ಶಿಷ್ಯತ್ವ

*ನಾವು ಜೀವನವೆಂಬ ಈ ಪ್ರಯಾಣವನ್ನು ಮುಂದುವರಿಸುವಾಗ ನಾವು ಯಾವುದೇ ಪರಿಸ್ಥಿತಿಯಲ್ಲಿದ್ದರೂ ಎಲ್ಲಿಗೇ ಹೋದರೂ ನಮ್ಮೊಂದಿಗೆ ಸರ್ವಶಕ್ತನು ... ಆತ್ಮೀಯವಾಗಿಯೂ ವೈಯಕ್ತಿಕವಾಗಿಯೂ ಇರುತ್ತಾನೆ.*

## ಆರಂಭ ಪ್ರಾರ್ಥನೆ

ಪ್ರಾರ್ಥನೆಯ ಮೂಲಕ ಪಾಠವನ್ನು ಆರಂಭಿಸಲು ಒಬ್ಬರಿಗೆ ಹೇಳಿರಿ.

## ಆರಾಧನೆ

ದೇವರು ನಮ್ಮೊಂದಿಗಿದ್ದಾನೆ ಎಂದು ಪ್ರಕಟಿಸುವ ಎರಡು ಅಥವಾ ಮೂರು ಆರಾಧನಾ ಹಾಡುಗಳನ್ನು ನೀವೆಲ್ಲರೂ ಒಟ್ಟಿಗೆ ಆರಿಸಿಕೊಂಡು ಹಾಡಿರಿ.

## ಬೈಬಲ್ ಅಧ್ಯಯನ

ದೇವರನ್ನೂ ಆತನಿಗೆ ನಿಮ್ಮ ಮೇಲಿರುವ ಪ್ರೀತಿಯನ್ನೂ ಆತನು ಯಾರೆಂದೂ ಆತನು ಮಾಡಿದ್ದನ್ನೂ ಮತ್ತು ಆತನು ಮಾಡುವುದನ್ನೂ ತಿಳಿದುಕೊಳ್ಳುವುದರ ಮೂಲಕ ಶಿಷ್ಯತ್ವವು ಆರಂಭವಾಗುತ್ತದೆ ಎಂಬುದನ್ನು ನಮ್ಮ ಈ ಪ್ರಯಾಣದ ಆರಂಭದಲ್ಲಿ ಕಲಿತುಕೊಂಡೆವು. ಆತನ ವಾಕ್ಯದಲ್ಲಿಯೂ ಆತನ ಸನ್ನಿಧಿಯಲ್ಲೂ ಆರಾಧನೆಯಲ್ಲೂ ಪ್ರಾರ್ಥನೆಯಲ್ಲೂ ಮತ್ತು ಇತರರ ಅನ್ಯೋನ್ಯತೆಯಲ್ಲೂ ಸಮಯವನ್ನು ವಿನಿಯೋಗಿಸಿದರೆ ಆತನನ್ನು ತಿಳಿದುಕೊಳ್ಳಲು ಸಹಾಯಕವಾಗುತ್ತದೆ.

ನಮ್ಮ ಮತ್ತು ಇತರರ ಶಿಷ್ಯತ್ವವು ದೈನಂದಿನ ಪ್ರಕ್ರಿಯೆಯಾಗಿದೆ. ನಮ್ಮ ಸ್ವಭಾವದಲ್ಲಾಗುವ ಮಾರ್ಪಾಡು ಮತ್ತು ನಮ್ಮ ಆತ್ಮಿಕ ಬೆಳವಣಿಗೆಯು ಪವಿತ್ರಾತ್ಮನ ಕೆಲಸವಾಗಿದೆ ಎಂಬುದನ್ನು ದ್ರಾಕ್ಷಾಬಳ್ಳಿಯಲ್ಲಿರುವ ಸಂಬಂಧದ ಪಾಠದಲ್ಲಿ ನಾವು ಕಲಿತುಕೊಂಡೆವು. ದೇವರಿಗೆ ತನ್ನನ್ನು ಇತರರಿಗೆ ಪ್ರಕಟಿಸಿಕೊಳ್ಳಲು ನಮ್ಮ ಅವಶ್ಯಕತೆಯಿಲ್ಲ, ಆದರೆ ನಮ್ಮ ಮೇಲಿನ ಮಹಾ ಪ್ರೀತಿಯ ನಿಮಿತ್ತ ಆತನು ನಮ್ಮನ್ನು ತನ್ನ ಯೋಜನೆಯಲ್ಲಿ ಪಾಲುಗಾರರನ್ನಾಗಿ ಆರಿಸಿಕೊಂಡಿದ್ದಾನೆ. ಬೇರೆಯವರಿಗೆ ದೇವರ ಬಗ್ಗೆ, ಆತನ ಸತ್ಯತೆಯ, ಪ್ರೀತಿಯ ಮತ್ತು ಶಕ್ತಿಯ ಬಗ್ಗೆ ತಿಳಿಸುವಂಥವರು ತಾವು ಮೊದಲನೆಯದಾಗಿ ಆತನ ಬಗ್ಗೆ ತಿಳಿದುಕೊಳ್ಳಬೇಕು.

ನಾವು **ಯಾರ** ಶಿಷ್ಯರು?

ಯೇಸು

ಎಲ್ಲಾ ಶಕ್ತಿ ಮತ್ತು ಅಧಿಕಾರ **ಯಾರಿಗೆ** ಇದೆ? ಓದಿರಿ **ಮತ್ತಾಯ 28:18-20**

ಯೇಸು

ಈ ಮೂರು ವಚನಗಳಲ್ಲಿ ಯೇಸು ತನ್ನ ಶಿಷ್ಯರಿಗೆ **ಯಾವ** ನಾಲ್ಕು ಕಾರ್ಯಗಳನ್ನು ಮಾಡಲು ಹೇಳಿದನು?

1: ಹೋಗಿ

ಈ ವಾಕ್ಯಭಾಗದಲ್ಲಿ ಉಪಯೋಗಿಸಿರುವ 'ಹೋಗಿ' ಎಂಬ ಪದದ ಅರ್ಥವೇನಂದರೆ, ನಾವು ಪ್ರಯಾಣವೆಂಬ ಈ ಜೀವನವನ್ನು ಸಾಗಿಸುವಾಗ (ನಾವು ಯಾವುದೇ ಪರಿಸ್ಥಿತಿಯಲ್ಲಿದ್ದರೂ), ನಾವು ಒಂದು ಸ್ಥಳದಿಂದ ಇನ್ನೊಂದಕ್ಕೆ ಪ್ರಯಾಣಿಸುವಾಗ (ನಾವು ಯಾವ ಪ್ರದೇಶದಲ್ಲಿದ್ದರೂ), ಯೇಸುವಿಗೆ ಆ ಪರಿಸ್ಥಿತಿಯ ಮೇಲೆ ಮತ್ತು ಆ ಪ್ರದೇಶದ ಮೇಲೆ ಎಲ್ಲಾ ಶಕ್ತಿ ಮತ್ತು ಅಧಿಕಾರವಿದೆ. ಆತನೊಂದಿಗಿನ ನಮ್ಮ ದೈನಂದಿನ ನಡಿಗೆಯಲ್ಲಿ ನಾವು ಎಲ್ಲೇ ಇದ್ದರೂ, ಆತನು ನಮ್ಮೊಬ್ಬರೊಂದಿಗೂ ಆತ್ಮೀಯವಾಗಿ ಮತ್ತು ವೈಯಕ್ತಿಕವಾಗಿ ಇರುತ್ತಾನೆ. ತನ್ನ ಪ್ರತಿಯೊಬ್ಬ ಶಿಷ್ಯನೊಳಗೆ ಆತನು ತನ್ನ ಆತ್ಮರೂಪದಲ್ಲಿರುತ್ತಾನೆ.

2. ದೀಕ್ಷಾಸ್ನಾನ ಮಾಡಿಸುವುದು

ಈ ವಾಕ್ಯಭಾಗದಲ್ಲಿ ಉಪಯೋಗಿಸಿರುವ 'ದೀಕ್ಷಾಸ್ನಾನ ಮಾಡಿಸಿ' ಪದಗಳ ಅರ್ಥವೇನಂದರೆ, ನೀರಿನೊಳಗೆ ಮುಳುಗಿಸುವುದು ಅಥವಾ ಪದೇ ಪದೇ ಮುಳುಗಿಸುವುದು, ಶುದ್ಧಗೊಳಿಸುವುದು, ಯೇಸುವಿನೊಂದಿಗೆ ಮತ್ತು ಆತನ ವ್ಯಕ್ತಿತ್ವದೊಂದಿಗೆ ಒಂದಾಗುವುದು, ಆತನ ಸಾವು ಮತ್ತು ಪುನರುತ್ಥಾನಗಳೊಂದಿಗೆ ಒಂದಾಗುವುದು ಎಂದರ್ಥ. ಯೇಸುವನ್ನು ಸ್ವೀಕರಿಸಿಕೊಳ್ಳುವುದು ಆತನ ವ್ಯಕ್ತಿತ್ವವನ್ನು ಹೊಂದಿಕೊಳ್ಳುವುದಕ್ಕಾಗಿ. ಆತನಲ್ಲಿ ಪೂರ್ಣವಾಗಿ ಮುಳುಗಿರುವುದು ಎಂದರೆ ಆತನ ಆತ್ಮನ ಮೂಲಕವಾಗಿ ಈ ಕಾಲಕ್ಕೆ ಮತ್ತು ಮುಂದಿನ

ಕಾಲಕ್ಕೆ ಶಾಶ್ವತವಾದ ಬದಲಾವಣೆಯನ್ನು ಹೊಂದಿಕೊಳ್ಳುವುದಕ್ಕಾಗಿ ಹೃದಯ ಮನಸ್ಸುಗಳನ್ನು ಒಪ್ಪಿಸಿಕೊಟ್ಟು ಆತನ ಶಕ್ತಿಯನ್ನು ಮತ್ತು ಅಧಿಕಾರವನ್ನು ಹೊಂದಿಕೊಳ್ಳುವುದು ಎಂದರ್ಥ.

3. ಬೋಧನೆ
ಯೇಸುವಿನ ಬಗ್ಗೆ ಇತರರಿಗೆ ಕಲಿಸಿ ಆತನೊಂದಿಗಿನ ಸಂಬಂಧದಲ್ಲಿ ಅವರನ್ನು ಬೆಳೆಯುವಂತೆ ಮಾಡಿ ಬೇರೆಯವರಿಗೆ ಅವರೂ ಬೋಧಿಸಬಲ್ಲವರಂತೆ ಮಾಡುವುದೇ ಪರಿಣಾಮಕಾರಿಯಾದ ಬೋಧನೆ. ನಮ್ಮ ಜ್ಞಾನವನ್ನು ಪ್ರದರ್ಶಿಸುವುದಾಗಲೀ ನಮ್ಮನ್ನು ಸಾಬೀತುಪಡಿಸಿಕೊಳ್ಳುವುದಾಗಲೀ ಬೋಧನೆಯಲ್ಲ. ಯೇಸುವಿನ ಶಿಷ್ಯರನ್ನಾಗಿ ಮಾಡುವುದು ಎಂದರೆ ಪ್ರತಿಯೊಂದು ಬುಡಕಟ್ಟಿನ ಸ್ತ್ರೀಯರನ್ನು ಪುರುಷರನ್ನು (ಸಮಾನವಾಗಿ) ದೊಡ್ಡವರನ್ನು ಮತ್ತು ಮಕ್ಕಳನ್ನು (ಸಮಾನವಾಗಿ) ದೇವರಲ್ಲಿ ಮುಳುಗಿಸಿ ಆತನಿಗೆ ಅವರನ್ನು ಸಂಪೂರ್ಣವಾಗಿ ಒಳಪಡಿಸುವುದು ಎಂದರ್ಥ.

4: ಶಿಷ್ಯರನ್ನಾಗಿ ಮಾಡಿರಿ
ಈ ವಾಕ್ಯಭಾಗದಲ್ಲಿ 'ಶಿಷ್ಯರನ್ನಾಗಿ ಮಾಡಿ' ಎಂಬುದೇ ಮುಖ್ಯ ಕ್ರಿಯೆಯಾಗಿದೆ. ನಾವು ದೀಕ್ಷಾಸ್ನಾನ ಮಾಡಿಸುವ ಮೂಲಕ (ಯೇಸುವನ್ನು, ಆತನ ವ್ಯಕ್ತಿತ್ವವನ್ನು, ಆತನ ಆತ್ಮನನ್ನು ಮತ್ತು ತಂದೆಯನ್ನು ಸ್ವೀಕರಿಸಿಕೊಳ್ಳಲು ಅವರನ್ನು ಶಕ್ತರನ್ನಾಗಿ ಮಾಡುವುದು) ಮತ್ತು ಅವರಿಗೆ ಬೋಧಿಸುವುದರ ಮೂಲಕ (ಯೇಸುವಿನ ಬಗ್ಗೆ ಕಲಿತುಕೊಂಡು ಆತನಲ್ಲಿ ಬೆಳೆಯಲು ಅವರನ್ನು ಶಕ್ತರನ್ನಾಗಿ ಮಾಡುವುದು) ಜನರನ್ನು ಶಿಷ್ಯರನ್ನಾಗಿ ಮಾಡುತ್ತೇವೆ.

ಜನರನ್ನು ಯೇಸುವಿನ ಶಿಷ್ಯರನ್ನಾಗಿ ಮಾಡುವುದೇ ದೇವರ ಯೋಜನೆಯ ಗುರಿಯಾಗಿತ್ತು (**ಎಫೆಸದವರಿಗೆ 1:9-10**). ಜನರನ್ನು ಶಿಷ್ಯರ ಮೂಲಕ ಶಿಷ್ಯರನ್ನಾಗಿ ಮಾಡುವುದು ಪವಿತ್ರಾತ್ಮನ ಕೆಲಸವಾಗಿದೆ. ದೇವರು ತನ್ನ ಯೋಜನೆಯನ್ನು ತನ ಶಿಷ್ಯರಾದ ನಮಗೆ ಪ್ರಕಟಿಸಿದ್ದಾನೆ; ಆತನ ಯೋಜನೆಯಲ್ಲಿ ನಮ್ಮಲ್ಲಿ ಪ್ರತಿಯೊಬ್ಬರೂ ಪಾಲುಗಾರರಾಗಿರುವುದು ಆತನಿಗೆ ನಮ್ಮ ಮೇಲಿರುವ ಮಹಾ ಪ್ರೀತಿಯ ಕಾರಣದಿಂದಲೇ.

ನಾವು ಯೇಸುವಿನೊಂದಿಗೆ ಸಂಬಂಧವುಳ್ಳವರಾಗಿ ಆತನ ಬಗ್ಗೆ *ಕಲಿಯುತ್ತಾ* ಪ್ರತಿದಿನ ಆತನನ್ನು ವೈಯಕ್ತಿಕವಾಗಿ ಹೆಚ್ಚು ಹೆಚ್ಚು *ತಿಳಿದುಕೊಳ್ಳಬೇಕು*; ಅಲ್ಲದೆ ಈ ಜೀವಿತದಲ್ಲಿ ನಮ್ಮೊಂದಿಗೆ ಪ್ರಯಾಣಿಸುತ್ತಿರುವವರನ್ನು ನಾವು ತಿಳಿದುಕೊಂಡವರಾಗಿ ಆತನ ಆತ್ಮನ ಮೂಲಕ ಮತ್ತು ಆತನ ಹೆಸರಿನಲ್ಲಿ ಇತರರೊಂದಿಗೆ ನಮ್ಮನ್ನು *ಹಂಚಿಕೊಂಡು* ಇತರರ *ಸೇವೆ ಮಾಡಬೇಕು*; ಆಗ ದೇವರ ಯೋಜನೆ ಈಡೇರುತ್ತದೆ.




ಪ್ರತಿಯೊಬ್ಬ ಶಿಷ್ಯನಲ್ಲೂ ಪವಿತ್ರಾತ್ಮನಿದ್ದಾನೆ; ಆತನೇ ಯೇಸುವಿನ ಸಾಕ್ಷಿಯಾಗಿದ್ದಾನೆ. ನಿಮ್ಮಲ್ಲಿರುವ ಕ್ರಿಸ್ತನ ಪರಿವರ್ತಿಸುವ ಶಕ್ತಿಯಿಂದ ತುಂಬಿದವರಾಗಿದ್ದು ದೇವರು ನಿಮ್ಮನ್ನು ಸೃಷ್ಟಿಸಿದ ಉದ್ದೇಶಕ್ಕೆ ತಕ್ಕಂತಿರುವುದೇ ನಿಮ್ಮ ಸಾಕ್ಷಿಯಾಗಿದೆ. ಪ್ರತಿಯೊಬ್ಬ ಶಿಷ್ಯನೂ ಯೇಸುವಿನ ಬಗ್ಗೆ ಕೊಡತಕ್ಕ ಸಾಕ್ಷ್ಯವನ್ನು ಹೊಂದಿದ್ದಾನೆ.

## ಸಾಕ್ಷ್ಯ

ನೀವು ಯೇಸುವಿನ ಶಿಷ್ಯರಾಗುವ ಮೊದಲು **ಯಾವ** ರೀತಿಯ ವ್ಯಕ್ತಿಯಾಗಿದ್ದಿರಿ?

ಯೇಸುವಿನ ಶಿಷ್ಯರಾದ ನಿಮಗೆ ಮತ್ತು ನಿಮ್ಮಲ್ಲಿ ಯೇಸು ಮಾಡಿದ ಪರಿವರ್ತನೆಗಳು **ಯಾವುವು**?

ಯೇಸುವಿನ ಶಿಷ್ಯರಾಗುವುದಕ್ಕಾಗಿ ಆತನ ಮಾಂಸರಕ್ತಾರ್ಪಣೆಯನ್ನು ಸ್ವೀಕರಿಸಿಕೊಳ್ಳಲು ನೀವು ನಿರ್ಧರಿಸಿದಾಗ ನಿಮ್ಮ ಜೀವನದ ಪರಿಸ್ಥಿತಿ **ಹೇಗೆ** ಇತ್ತು?

ನೀವು ಯೇಸುವಿನ ಮಾಂಸರಕ್ತಾರ್ಪಣೆಯನ್ನು ಸ್ವೀಕರಿಸಿಕೊಂಡು ಆತನ ಶಿಷ್ಯರಾಗುವುದಕ್ಕೆ ಕಾರಣವಾದ ಅತ್ಯಂತ ಪ್ರಮುಖ ವಿಷಯ **ಯಾವುದು**?

ನಿಮ್ಮ ಇಂದಿನ ಜೀವಿತದಲ್ಲಾಗಿರುವ ಅತ್ಯಂತ ಪ್ರಮುಖ ಬದಲಾವಣೆ **ಯಾವುದು**?

ನಿಮ್ಮಲ್ಲಿ ಪ್ರತಿಯೊಬ್ಬರೂ ಕ್ರೈಸ್ತೇತರರೊಂದಿಗೆ ಹೇಳುವಂತೆ - ಒಬ್ಬರಿಗೊಬ್ಬರು - ತಮ್ಮ ಸಾಕ್ಷ್ಯವನ್ನು ಹೇಳಲಿ (ಪ್ರತಿಯೊಬ್ಬರೂ ಎರಡು ನಿಮಿಷದೊಳಗೆ ಹೇಳಲಿ). ಕ್ರೈಸ್ತ ಪದಗಳಾದ ನೀತಿ ಮತ್ತು ರಕ್ಷಣೆ ಎಂಬ ಪದಗಳನ್ನು ಬಳಸದೆ ನಿಮ್ಮ ಜೀವಿತದಲ್ಲಿ ರಕ್ಷಣೆಗೆ ಇರುವ ಅರ್ಥವನ್ನು ವಿವರಿಸಿ ಹೇಳಿ.

ನಿಮ್ಮ ನಿಜವಾದ ಪ್ರತಿಕ್ರಿಯೆ/ಪ್ರಾರ್ಥನೆ **ಯಾವುದು**?

# ಪಾಠ 16: ಸಂಬಂಧಗಳು - ದೇವರ ರಾಜ್ಯ

*ನಾವು ಯಾರನ್ನು ಆರಾಧಿಸುತ್ತೇವೋ ಅವರಂತಿರುತ್ತೇವೆ.*

## ಆರಂಭ ಪ್ರಾರ್ಥನೆ

ಪ್ರಾರ್ಥನೆಯ ಮೂಲಕ ಪಾಠವನ್ನು ಆರಂಭಿಸಲು ಒಬ್ಬರಿಗೆ ಹೇಳಿರಿ.

## ಆರಾಧನೆ

ಯೇಸುವೇ ಅರಸನೆಂದು ಪ್ರಕಟಿಸುವ ಎರಡು ಅಥವಾ ಮೂರು ಆರಾಧನಾ ಹಾಡುಗಳನ್ನು ನೀವೆಲ್ಲರೂ ಒಟ್ಟಿಗೆ ಆರಿಸಿಕೊಂಡು ಹಾಡಿರಿ.

ನಾವು ಒಟ್ಟಾಗಿ ಈ ಪ್ರಯಾಣದ ಆರಂಭದಲ್ಲಿ ಕಲಿತುಕೊಂಡದ್ದನ್ನು ಜ್ಞಾಪಿಸಿಕೊಳ್ಳಿರಿ. ದೇವರು ತನ್ನನ್ನು ಮತ್ತು ತನ್ನ ಯೋಜನೆಯನ್ನು ಪ್ರಕಟಿಸಲು ಬಯಸುತ್ತಾನೆ. ಪರಲೋಕದಲ್ಲಿರುವ ಮತ್ತು ಭೂಲೋಕದಲ್ಲಿರುವ ಸಮಸ್ತವನ್ನು ಕ್ರಿಸ್ತ ಯೇಸುವಿನಲ್ಲಿ ಒಂದುಗೂಡಿಸುವುದೇ ಆ ಯೋಜನೆ. ಯೇಸುವೇ ದೇವರ ರಾಜ್ಯದ ಅಧಿಪತಿ.

## ವಾಕ್ಯದ ಅಧ್ಯಯನ

*ರಾಜ್ಯ* ಎಂದರೆ ರಾಜ್ಯವನ್ನು ಆಳುವ ಹಕ್ಕಿಗಾಗಲೀ ಅಧಿಕಾರಕ್ಕಾಗಲೀ ಶಕ್ತಿಗಾಗಲೀ ಒಳಪಟ್ಟಿರುವ ಪ್ರದೇಶ ಅಥವಾ ಪ್ರಾಂತ್ಯ ಎಂದರ್ಥ.

*ದೇವರು* ಎಂದರೆ ಸರ್ವೋಚ್ಛ ದೇವರು ಎಂದರ್ಥ. ನಮಗೆ ತಿಳಿದಿರುವಂತೆ ಆತನೇ ತಂದೆ, ಮಗ ಮತ್ತು ಪವಿತ್ರಾತ್ಮ.

*ದೇವರ ರಾಜ್ಯವೆಂದರೆ* ಪರಲೋಕ ಮತ್ತು ಭೂಲೋಕಗಳ ಮೇಲೆ ಆಧಿಪತ್ಯ ಮಾಡಲು ಯೇಸುವಿಗಿರುವ ಹಕ್ಕು ಅಥವಾ ಅಧಿಕಾರ ಅಥವಾ ಶಕ್ತಿ ಆಗಿದೆ. ಯೇಸುವೇ ದೇವರ ರಾಜ್ಯದ ಅಧಿಪತಿ. ದೇವರ ರಾಜ್ಯವನ್ನು ಪ್ರವೇಶಿಸಲು ನಾವು ರಾಜನನ್ನು ಸ್ವೀಕರಿಸಿಕೊಳ್ಳಬೇಕೆಂಬುದನ್ನು "ಆತ್ಮನಿಂದ ಹುಟ್ಟಿದ" ಎಂಬ 10ನೇ ಪಾಠದಲ್ಲಿ ಕಲಿತಿದ್ದೇವೆ. ಯೇಸು ಕ್ರಿಸ್ತನ ಸಂದೇಶ ಮತ್ತು ಸೇವೆ ಮತ್ತು ಆತನ ಗುಣಪಡಿಸುವ ಕಾರ್ಯಾಚರಣೆಯಲ್ಲಿ ಆತನ ಶಿಷ್ಯರ ಪಾತ್ರವನ್ನು ಅರ್ಥಮಾಡಿಕೊಳ್ಳಲು ದೇವರ ರಾಜ್ಯದ ಚಿತ್ರಣವು ಪ್ರಮುಖವಾದದ್ದು.

## ಬೈಬಲ್ ಅಧ್ಯಯನ

ಓದಿರಿ **ಲೂಕ 4:43** ಮತ್ತು **ಅಪೊಸ್ತಲರ ಕಾರ್ಯಗಳು 1:1-4**

ದೇವರ ರಾಜ್ಯದ ಕುರಿತಾಗಿ ಯೇಸು ಬೋಧಿಸಿದನು ಮತ್ತು ಉಪದೇಶಿಸಿದನು; ಆತನು ದೇವರ ರಾಜ್ಯವನ್ನು ಪ್ರದರ್ಶಿಸಿದನು; ದೇವರ ರಾಜ್ಯಕ್ಕೆ ಯೇಸುವೇ ಅಧಿಪತಿ.

ತಾನು ರಕ್ತಮಾಂಸಧಾರಿಯಾಗಿ ಬಂದದ್ದರಿಂದ **ಯಾವುದು** ನೆರವೇರುತ್ತಿದೆಯೆಂದು ಯೇಸು ಹೇಳಿದನು? ಓದಿರಿ **ಲೂಕ 4:18-19**

1: ಬಡವರಿಗೆ ಸುವಾರ್ತೆ

2: ಮುರಿಯಲ್ಪಟ್ಟ ಹೃದಯಕ್ಕೆ ಸ್ವಸ್ಥತೆ

3: ಸೆರೆಯಾಳುಗಳಿಗೆ ಸ್ವಾತಂತ್ರ್ಯ

4: ಕುರುಡರಿಗೆ ದೃಷ್ಟಿದಾನ

5: ಕುಗ್ಗಿಸಲ್ಪಟ್ಟವರಿಗೆ ಸ್ವಾತಂತ್ರ್ಯ

6: ಇವುಗಳು ನಡೆಯಲು ದೇವರು ನಿಗದಿಪಡಿಸಿದ ಸಮಯದ ಪ್ರಾರಂಭ ಇದೆಂದು ಪ್ರಕಟಿಸಿರಿ.

ಈ ಭೂಮಿಯ ಮೇಲೆ ಅಂದರೆ ಕೆಡುಕನಿಂದ ಹಾನಿಗೊಳಗಾದ ಈ ಪ್ರಪಂಚಕ್ಕೆ ದೇವರ ರಾಜ್ಯವು ಯೇಸು ಕ್ರಿಸ್ತನ ಮೂಲಕ ಬಂದಿದೆ.

ದೇವರ ರಾಜ್ಯ ಅಂದರೆ ಪರಲೋಕ ರಾಜ್ಯವು ಭೂಮಿಗೆ ಬಂದಿದೆಯೆಂದು ತಿಳಿಸಲು ಯೇಸು ಯೋಹಾನನಿಗೆ ಕೊಟ್ಟ ಆಧಾರವೇನು? ಓದಿರಿ **ಮತ್ತಾಯ 11:3-5**

1: ಕುರುಡರಿಗೆ ಕಣ್ಣು ಕಾಣುವುದು

2: ಕುಂಟರು ನಡೆದಾಡುವರು

3: ಅಶುದ್ಧರು ಶುದ್ಧೀಕರಿಸಲ್ಪಡುವರು

4: ಕಿವುಡರಿಗೆ ಕಿವಿ ಕೇಳುವುದು

5: ಸತ್ತವರು ಎಬ್ಬಿಸಲ್ಪಡುವರು

6: ಬಡವರಿಗೆ ಸುವಾರ್ತೆ ಸಾರಲ್ಪಡುವುದು

ಹಳೆ ಒಡಂಬಡಿಕೆಯಲ್ಲಿ ಕುರುಡರು ಕಾಣುವ, ಕುಂಟರು ನಡೆಯುವ ಮತ್ತು ಕಿವುಡರು ಕೇಳುವ ದಿನದ ಹಲವು ಪ್ರವಾದನೆಗಳಿವೆ. ಇವು ಕೇವಲ ಆತ್ಮಿಕ ಸ್ವಸ್ಥತೆಯ ಬಗ್ಗೆ ಹೇಳುತ್ತಿಲ್ಲ. ದೇವರ ರಾಜ್ಯವು ಆತ್ಮಿಕವಾದ, ದೈಹಿಕವಾದ ಮತ್ತು ಮಾನಸಿಕವಾದ ಸಂಪೂರ್ಣ ಸ್ವಸ್ಥತೆ ಎಂದು ಯೇಸು ಪ್ರಕಟಿಸಿದನು. ಅದು ಸಂಪೂರ್ಣವಾದದ್ದು ಮತ್ತು ಶಾಂತಿಪೂರ್ಣವಾದದ್ದು.

ಸೆರೆಯಾಳುಗಳನ್ನು ಬಿಡುಗಡೆ ಮಾಡಲು, ಮುರಿಯಲ್ಪಟ್ಟ ಹೃದಯವನ್ನು ಗುಣಪಡಿಸಲು ಮತ್ತು ದೇವರ ರಾಜ್ಯವು ಬಂದಿದೆ ಎಂದು ಪ್ರಕಟಿಸಲು ತಂದೆಯಾದ ದೇವರು ಯೇಸುವನ್ನು ಕೆಡುಕನಿಂದ ಹಾನಿಗೊಳಗಾದ ಪ್ರಪಂಚಕ್ಕೆ ಕಳುಹಿಸಿದನು (ಅದು ಈಗ ಹತೋಟಿಯಲ್ಲಿಟ್ಟುಕೊಂಡು ದಬ್ಬಾಳಿಕೆ ಮಾಡಲಿಚ್ಛಿಸುವ ಕೆಡುಕನ ಮತ್ತು ಮನುಷ್ಯನ ಪ್ರಭಾವದಲ್ಲಿದೆ). ಯೇಸುವಿನ ಮಾಂಸರಕ್ತಾರ್ಪಣೆಯನ್ನು ನಂಬಿ ಸ್ವೀಕರಿಸಿಕೊಳ್ಳುವವರು ಶಾಶ್ವತವಾಗಿ ರಕ್ಷಿಸಲ್ಪಟ್ಟವರಾಗಿದ್ದಾರೆ. ಮರಣದ ರಾಜ್ಯದಿಂದ ರಕ್ಷಿಸಲ್ಪಟ್ಟು ಜೀವದ ರಾಜ್ಯಕ್ಕೆ ಬಂದವರಾಗಿದ್ದಾರೆ.

ಓದಿರಿ **ಮತ್ತಾಯ 19:13-15** (ಅಲ್ಲದೆ **ಮಾರ್ಕ 10:13-16** ಮತ್ತು **ಲೂಕ 18:15-17**).

ಯೇಸು ಮಕ್ಕಳನ್ನು ಸ್ವೀಕರಿಸಿಕೊಂಡದ್ದರ ಬಗ್ಗೆ ನಾವು ಕಲಿತುಕೊಂಡದ್ದು **ಏನು?**

ಮಕ್ಕಳ ನಂಬಿಕೆಯನ್ನು ಮತ್ತು ವಿಶ್ವಾಸವನ್ನು ಯೇಸು ದೇವರ ರಾಜ್ಯಕ್ಕೆ ಹೋಲಿಸಿದ್ದರೂ ಸಹ, ಮಕ್ಕಳಿಗೆ ಉಪದೇಶಿಸಲು ಯೇಸು ಪ್ರಯಾಣವನ್ನು ನಿಲ್ಲಿಸಿದ್ದು ಮಹತ್ವಪೂರ್ಣವಾಗಿದ್ದು ಮೂರು ಸುವಾರ್ತೆಗಳಲ್ಲೂ ಹೇಳಲ್ಪಟ್ಟಿದೆ. ಕೆಡುಕನಿಂದ ಹಾನಿಗೊಳಗಾದ ಪ್ರಪಂಚದ ಆ ಕಾಲದ ಸಂಸ್ಕೃತಿಯಲ್ಲಿ ಮಕ್ಕಳಿಗೆ ದೊಡ್ಡವರಿಗಿಂತ ಕಡಿಮೆ ಮೌಲ್ಯವಿತ್ತು. ಶಿಷ್ಯರು ಈ ಪ್ರಪಂಚದ ಸಂಸ್ಕೃತಿಯನ್ನು ಅನುಸರಿಸುತ್ತಿದ್ದರು, ಯಾಕಂದರೆ ಅವರಿನ್ನೂ ದೇವರ ರಾಜ್ಯದ ಸಂಸ್ಕೃತಿಯಲ್ಲಿರಲಿಲ್ಲ. ಆದ್ದರಿಂದ ಕೆಡುಕನಿಂದ ಹಾನಿಗೊಳಗಾದ ಈ ಪ್ರಪಂಚದಲ್ಲಿ ದೇವರ ರಾಜ್ಯದ ಸ್ವರೂಪವನ್ನು ಯೇಸು ತನ್ನ ಶಿಷ್ಯರಿಗೆ ಬೋಧಿಸುತ್ತಿದ್ದನು ಮತ್ತು ತೋರಿಸುತ್ತಿದ್ದನು.

ಯೇಸು ದೊಡ್ಡವರನ್ನೂ ಚಿಕ್ಕವರನ್ನೂ ಪರಿಗಣಿಸಿದ್ದು ಸಮಾನರೆಂದೋ ಅಸಮಾನ**ರೆಂದೋ?**

ಸಮಾನರೆಂದು

## ಗುಂಪಾಗಿ ಚರ್ಚಿಸಿ

ನಿಮ್ಮ ನಂಬಿಕೆಯ ಪ್ರಕಾರ ದೇವರ ರಾಜ್ಯ ಹೇಗಿದೆ ಎಂಬುದರ ಬಗ್ಗೆ ಗುಂಪಾಗಿ ಚರ್ಚಿಸಿ.

1: ದೇವರೊಂದಿಗೆ ಮತ್ತು ಇತರರೊಂದಿಗೆ ಪುನರ್‌ಸ್ಥಾಪಿಸಲ್ಪಟ್ಟ ಸಂಬಂಧಗಳಲ್ಲಿ ಪುರುಷರು, ಸ್ತ್ರೀಯರು, ಹುಡುಗರು, ಹುಡುಗಿಯರು...ಸಮಾನ-ಸಮಾನ.

2: ಬಡವರು ಮತ್ತು ಶ್ರೀಮಂತರು ಶಕ್ತಿಶಾಲಿಯಾಗಿದ್ದಾರೆ...ಸಮಾನ-ಸಮಾನ.

3: ಸಮಾನವಾದ ಸಮುದಾಯವು ಒಬ್ಬರನೊಬ್ಬರು ವೃದ್ಧಿಪಡಿಸುವುದು.

4: ಇದು ಯೇಸುವಿನಲ್ಲಿ ನಂಬಿಕೆ ಇಟ್ಟು ಆತನಲ್ಲಿ ಜೀವಿಸುವ ಎಲ್ಲರನ್ನು ಒಳಗೊಂಡಿದೆ.

5: ಇದು ನ್ಯಾಯಬದ್ಧವಾದ ಮತ್ತು ಶಾಂತಿಯುತವಾದ ಸಮುದಾಯದ ನಿರ್ಮಾಣವಾಗಿದೆ.

6: ಸೆರೆಯಾಳುಗಳು ಸತ್ಯ ಮತ್ತು ಪ್ರೀತಿಗಳಿಂದ ಬಿಡುಗಡೆ ಹೊಂದುತ್ತಾರೆ.

7: ಯಥಾರ್ಥವಾದ ಅಭ್ಯಾಸಗಳು ಸಂಸ್ಕೃತಿಯಾಗುತ್ತವೆ.

ದೇವರ ರಾಜ್ಯವು ಯೇಸುವಿನ ಮೂಲಕ ಪ್ರಕಟಿಸಲ್ಪಟ್ಟಿದೆ.

ಕೆಡುಕನಿಂದ ಹಾನಿಗೊಳಗಾದ ಪ್ರಪಂಚದಲ್ಲಿರುವ ದೇವರ ರಾಜ್ಯದಲ್ಲಿ ವಾಸವಾಗಿದ್ದು ತಂದೆಯಾದ ದೇವರ ಮಹಿಮೆಗಾಗಿ ಆತನ ರಾಜ್ಯವನ್ನು ಅಭಿವೃದ್ಧಿಪಡಿಸುವ ಆತನ ಕಾರ್ಯದಲ್ಲಿ ಪಾಲುಗಾರರಾಗುವ ಜವಾಬ್ದಾರಿಯನ್ನು ಯೇಸು ತನ್ನ ಆತ್ಮನ ಮೂಲಕ ತನ್ನ ಶಕ್ತಿಯ ಮೂಲಕ ಮತ್ತು ಅಧಿಕಾರದ ಮೂಲಕ ನಮಗೆ ವಹಿಸಿಕೊಟ್ಟಿದ್ದಾನೆ.

ದೇವರನ್ನು ಮತ್ತು ಆತನ ಮೇಲಿನ ಪ್ರೀತಿಯನ್ನು ಕ್ರಿಸ್ತನ ಮೂಲಕ ಹೆಚ್ಚಾಗಿ ತಿಳಿದುಕೊಳ್ಳುತ್ತಾ, ಆತನೊಂದಿಗೆ ಆತನ ವಾಕ್ಯದಲ್ಲಿ, ಆತನ ಸನ್ನಿಧಿಯಲ್ಲಿ, ಆರಾಧನೆಯಲ್ಲಿ, ಪ್ರಾರ್ಥನೆಯಲ್ಲಿ, ಇತರ ವಿಶ್ವಾಸಿಗಳ ಅನ್ಯೋನ್ಯತೆಯಲ್ಲಿ ಸಮಯವನ್ನು ಕಳೆಯುತ್ತಾ, ಕೆಡುಕನಿಂದ ಹಾನಿಗೊಳಗಾದ ಈ ಪ್ರಪಂಚದಲ್ಲಿ ಆತನ ಮಹಾ ಪ್ರೀತಿಯ ಬಗ್ಗೆ ಸಾಕ್ಷಿಕೊಟ್ಟು ಜನರನ್ನು ಶಿಷ್ಯರನ್ನಾಗಿ ಮಾಡುತ್ತಾ ಜಯಭರಿತ ಜೀವಿತವನ್ನು ನಾವು ನಡೆಸಿದರೆ, ಈಗಲೇ ಈ ಭೂಮಿಯ ಮೇಲೆ ನಾವು ದೇವರ ರಾಜ್ಯದಲ್ಲಿ ಜೀವಿಸುವವರಾಗಿದ್ದೇವೆ.

ಈ ಪಾಠದಿಂದ ನೀವು ದೇವರ ಬಗ್ಗೆ ತಿಳಿದುಕೊಂಡ ಒಂದು ಅಂಶ **ಯಾವುದು**?

ನಿಮ್ಮ ನಿಜವಾದ ಪ್ರತಿಕ್ರಿಯೆ/ಪ್ರಾರ್ಥನೆ **ಯಾವುದು**?

## ಪ್ರಾರ್ಥನೆ

**ಎಫೆಸದವರಿಗೆ 3:14-21** *ಆದ್ದರಿಂದ ತಂದೆಯ ಮುಂದೆ ಮೊಣಕಾಲೂರಿ ಪ್ರಾರ್ಥಿಸುತ್ತೇನೆ. ಭೂಪರಲೋಕಗಳಲ್ಲಿರುವ ಪ್ರತಿಯೊಂದು ಕುಟುಂಬವು ಆತನಿಂದ ತನ್ನ ನಿಜ ಹೆಸರನ್ನು ಪಡೆದುಕೊಳ್ಳುತ್ತದೆ. ನೀವು ನಿಮ್ಮ ಆತ್ಮಗಳಲ್ಲಿ ಬಲವಾಗಿರಲು ಅಗತ್ಯವಾದ ಶಕ್ತಿಯನ್ನು ತನ್ನ ಮಹಿಮಾತಿಶಯದ ಪ್ರಕಾರ ಕೊಡಬೇಕೆಂದು ತಂದೆಯನ್ನು ಕೇಳಿಕೊಳ್ಳುತ್ತೇನೆ. ಆತನು ತನ್ನ ಆತ್ಮನ ಮೂಲಕವಾಗಿ ನಿಮಗೆ ಆ ಶಕ್ತಿಯನ್ನು ಕೊಡುತ್ತಾನೆ. ನಿಮ್ಮ ನಂಬಿಕೆಯ ಮೂಲಕ ಕ್ರಿಸ್ತನು ನಿಮ್ಮ ಹೃದಯಗಳಲ್ಲಿ ವಾಸಿಸಬೇಕೆಂದು ಪ್ರಾರ್ಥಿಸುತ್ತೇನೆ. ನಿಮ್ಮ ಜೀವಿತವು ಪ್ರೀತಿಯಲ್ಲಿ ಬಲವಾಗಿ ಬೇರೂರಿರಬೇಕೆಂದು ಮತ್ತು ಪ್ರೀತಿಯ ಮೇಲೆ ಕಟ್ಟಲ್ಪಟ್ಟಿರಬೇಕೆಂದು ಪ್ರಾರ್ಥಿಸುತ್ತೇನೆ. ನೀವು ಮತ್ತು ದೇವರ ಪರಿಶುದ್ಧ ಜನರೆಲ್ಲರೂ ಕ್ರಿಸ್ತನ ಪ್ರೀತಿಯ ಮಹತ್ವವನ್ನು ಅರ್ಥಮಾಡಿಕೊಳ್ಳಲು ಬೇಕಾದ ಶಕ್ತಿಯನ್ನು ಹೊಂದಿದವರಾಗಿರಬೇಕೆಂದು ಪ್ರಾರ್ಥಿಸುತ್ತೇನೆ. ಕ್ರಿಸ್ತನ ಪ್ರೀತಿಯ ಉದ್ದಗಲಗಳನ್ನು ಮತ್ತು ಆಳ ಎತ್ತರಗಳನ್ನು ನೀವು ಅರ್ಥಮಾಡಿಕೊಳ್ಳಲೆಂದು ಪ್ರಾರ್ಥಿಸುತ್ತೇನೆ. ಕ್ರಿಸ್ತನ ಪ್ರೀತಿಯನ್ನು ಮನುಷ್ಯನು ಗ್ರಹಿಸಿಕೊಳ್ಳಲು ಸಾಧ್ಯವಿಲ್ಲ. ಆದರೆ ಆ ಪ್ರೀತಿಯನ್ನು ನೀವು ತಿಳಿದುಕೊಳ್ಳಶಕ್ತರಾಗಲೆಂದು ಪ್ರಾರ್ಥಿಸುತ್ತೇನೆ. ಆಗ ನೀವು ದೇವರ ಸಂಪೂರ್ಣತೆಯಿಂದ ತುಂಬಿದವರಾಗಲು ಸಾಧ್ಯವಾಗುತ್ತದೆ.*

*ನಮ್ಮಲ್ಲಿ ಕಾರ್ಯಮಾಡುತ್ತಿರುವ ತನ್ನ ಶಕ್ತಿಯಿಂದ ನಾವು ಕೇಳುವುದಕ್ಕಿಂತಲೂ ಯೋಚಿಸುವುದಕ್ಕಿಂತಲೂ ಎಷ್ಟೋ ಹೆಚ್ಚೆಚ್ಚಾಗಿ ದೇವರು ಮಾಡಬಲ್ಲನು. ಆತನಿಗೆ ಸಭೆಯಲ್ಲಿಯೂ ಕ್ರಿಸ್ತ ಯೇಸುವಿನಲ್ಲಿಯೂ ತಲತಲಾಂತರಕ್ಕೂ ಯುಗಯುಗಾಂತರಕ್ಕೂ ಸ್ತೋತ್ರವಾಗಲಿ. ಆಮೆನ್.* (ERV)

| ಮೌಲ್ಯ ರಹಿತ | ಸ್ವಲ್ಪ ಮೌಲ್ಯ | ದೊಡ್ಡ ಮೌಲ್ಯ |
| --- | --- | --- |
| | | |